ಸಾಹಿತ್ಯ ಸಂವಾದ

ಸಂಪುಟ ೭ | ಮಾರ್ಚ್-ಏಪ್ರಿಲ್ ೧೯೯೪ | ಸಂಚಿಕೆ ೩೮



ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ-೫೭೭ ೫೩೧

ಬಿಡಿ ಪ್ರತಿ ರೂ. ೮-೦೦

ಸಾಹಿತ್ಯ ಸಂವಾದ-೩೮

ಸಾಹಿತ್ಯಿಕ ಸಾಂಸ್ಕೃತಿಕ ಸಂಕಲನ

- ನಮ್ಮ ಸಾಹಿತ್ಯಿಕ-ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
- ವಸ್ತುನಿಷ್ಠ ಸತ್ಯದ ಆವಿಷ್ಕಾರಕ್ಕೆ

ಸಂಪಾದಕ
ರಾಘವೇಂದ್ರ ಪಾಟೀಲ

ಚಂದಾವಿವರ

ಆಜೀವ ಚಂದಾ : ರೂ. ೪೦೦/-(ವ್ಯಕ್ತಿಗಳಿಗೆ) ರೂ. ೫೦೦/-(ಸಂಸ್ಥೆಗಳಿಗೆ)
ವಾರ್ಷಿಕ ಚಂದಾ : ರೂ. ೪೦/-(ವ್ಯಕ್ತಿಗಳಿಗೆ) ರೂ. ೫೦/-(ಸಂಸ್ಥೆಗಳಿಗೆ)

ಮುದ್ರಣ, ಪ್ರಕಾಶನ ಹಾಗೂ ಸಂಪಾದನೆ :
ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ—೫೭೭ ೫೩೧

ಮುದ್ರಣ :
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮
ದೂರವಾಣಿ : ೬೬೧೩೧೨೩

ನಾಗಾರ್ಜುನನೇಕೆ ತಲೆಯ ಕಡಿಸಿಕೊಂಡ....?

ಕೆ. ಬಿ. ಸಿದ್ಧಯ್ಯ

೧

ಭಾರತೀಯ ಜನಪದವು ಚಾರಿತ್ರಿಕವಾಗಿ ಎರಡು ರೀತಿಯ ಆಕ್ರಮಣಗಳನ್ನು ವಿರೋಧಿಸುತ್ತಾ ಬೆಳೆದಿದೆ. ೧) ಭಾರತೀಯ ವೈದಿಕಶಾಹಿ ೨) ವಸಾಹತು ಶಾಹಿ. ಈ ಆಕ್ರಮಣವನ್ನು ವಿರೋಧಿಸುವ ಮಾರ್ಗವೇ ಸಕಲ ಜೀವಿಗಳಿಗೂ ಲೇಸನೆ ಬಯಸುವ ಅರಿವು. ಈ ಎರಡು ರೀತಿಯ ಆಕ್ರಮಣಗಳನ್ನು ಹಿಮ್ಮೆಟ್ಟಿಸಲು ಇರುವ ಪರ್ಯಾಯ ಮಾರ್ಗವು ಬುದ್ಧನು ತೋರಿದ ದಾರಿ. ನಮ್ಮ ಸಿದ್ಧರು, ಅನುಭಾವಿಗಳು ನಡೆದ ಕಲ್ಯಾಣ ಮಾರ್ಗ. 'ಅಹಂ ಬ್ರಹ್ಮಾಸ್ಮಿ', 'ಜಗನ್‌ಮಿಥ್ಯ ಬ್ರಹ್ಮಸತ್ಯ' ಎಂಬ ವೈದಿಕ ಪ್ರಣಾಳಿಕೆಯ ಅಪ್ರಮಾಣವನ್ನು ಭವದ ನಿರ್ ಅನುಭವ ದಲ್ಲಿ ಅಲ್ಲಗಳೆದು, ಭವಗೆಡುವ ಅವೈದಿಕ ಬಗೆಯನ್ನು ಕಂಡು ಅರಿತು ಬೋಧಿಸಿದವರು ಈ ಮೌಖಿಕರು. ಆದ್ದರಿಂದಲೇ 'ಮಣ್ಣ ಬಿಟ್ಟು ಮಡಕೆ ಇಲ್ಲ' 'ನನ್ನ ಬಿಟ್ಟು ದೇವರಿಲ್ಲ' ಎಂಬ ಅನುಭವ ಪ್ರಮಾಣ ತತ್ವವನ್ನು ನಮ್ಮ ತತ್ವಪದಕಾರರು ನುಡಿಯು ವುದು. ಈ ಜನಪದ ನಡವಳಿಕೆಯು ತನ್ನ ಅತ್ಯುನ್ನತ ಸಾಧನೆಯ ಮಟ್ಟದಲ್ಲಿ ಅವೈದಿಕ ಆಧ್ಯಾತ್ಮಿಕ ತತ್ವದಲ್ಲಿ ನಂಬಿಕೆ ಇಡುತ್ತದೆ; 'ನಾನಾನೆಂಬುದು ನಾನಲ್ಲ, ಈ ಮಾನುಷ ದೇಹವು ನಾನಲ್ಲ' ಎಂಬ ನಿಜಸುಖ ಅನುಭವಿಸುತ್ತದೆ. ಮೌಖಿಕರ ಈ ನಂಬಿಕೆಯು ತಾತ್ವಿಕವಾಗಿ 'ನಾನು–ಇದಿರು', 'ಅಸ್ತಿ–ನಾಸ್ತಿ', 'ಏಕ–ಅನೇಕ', 'ಸುಖ–ದುಃಖ' ಎಂಬ ಪ್ರಾಪಂಚಿಕ ಜಾಲದ ಉಭಯ ಅಳಿದು 'ವೈದಿಕ ಮೋಕ್ಷ' ವಲ್ಲದ ಅರಿವು ಪಡೆಯಬಲ್ಲದು. ಈ ಅರಿವುಗಣ್ಣಿನ ನೋಟಕ್ಕೆ ಆಧುನಿಕ ಚಿಂತನೆಯ ಅನುರೂಪ 'ಪೂರ್ವ–ಪಶ್ಚಿಮ' ಸಿದ್ಧ ಪ್ರತಿಮೆಗಳು ನಿರೂಪವಾಗಿ ಬಿಡುತ್ತವೆ.

ಅಥವಾ ಆಧುನಿಕ ನಾಗರೀಕತೆ ಮತ್ತು ಬಹುಮುಖೀ ಸಂಸ್ಕೃತಿಯ ನಡುವಿನ ಸಂಘರ್ಷದಲ್ಲಿ ಪೂರ್ವ–ಪಶ್ಚಿಮವೆಂಬ ಬೌದ್ಧಿಕ ಪ್ರತಿಮೆಗಳಿಗೆ ಪ್ರಳಯ ತಪ್ಪದು ಎನ್ನಬಹುದು. ಭಾರತೀಯ ಮಿದುಳಿನ ಮೇಲೆ ಧಾಳಿ ನಡೆಸುತ್ತಿದ್ದ ವೈದಿಕಶಾಹಿಯು ವಸಾಹತುಶಾಹಿಯ ಆಕ್ರಮಣಕ್ಕೆ ತಲ್ಲಣಿಸಿತು. ಇದು ವೈದಿಕಶಾಹಿಯ ಅಳಿವು ಉಳಿವಿನ ಪ್ರಶ್ನೆಯಾಯಿತು. ಆದ್ದರಿಂದ ತನ್ನ ಉಳಿವಿಗಾಗಿ ವೈದಿಕಶಾಹಿಯು ಆಧುನಿಕ ರಕ್ಷಾಕವಚ ಧರಿಸಿ ಇಂಡಿಯಾದ ವಸಾಹತುಶಾಹಿಯಾಗಿ ರೂಪಾಂತರ ಹೊಂದಿತು. ಎಷ್ಟರ ಮಟ್ಟಿಗೆ ರೂಪಾಂತರ ಹೊಂದಿತೆಂದರೆ–ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಹಿತ್ಯ, ಕಲೆ, ಒಟ್ಟಾರೆ–ಸಾಂಸ್ಕೃತಿಕವಾಗಿ ಇಂಡಿಯಾದ ಜನಪದ ಪ್ರಭಾವಳಿಯಲ್ಲಿ ಈ ವಸಾಹತುಶಾಹಿ ತನ್ನ ಮಾದರಿಗಳನ್ನು ಹುಟ್ಟುಹಾಕಿತು. ಈ ಮಾದರಿಯನ್ನು ಇವತ್ತು 'ನವ ಬೌದ್ಧಿಕಶಾಹಿ' ಎಂಬ ಹೊಸ ಹೆಸರಿನಿಂದ ಕರೆಯಬೇಕು. ನವ ಬೌದ್ಧಿಕಶಾಹಿಯು ಮಿದುಳು ಮೂಲ ಕೌಶಲ್ಯದಿಂದ ಮೌಖಿಕ ಪರಂಪರೆ, ಜನಾಂಗಿಕ ಕೌಶಲ್ಯ, ಬಹುಮುಖೀ ಸಂಸ್ಕೃತಿಗಳನ್ನು ನೆಲಸಮ ಮಾಡಲು ಸನ್ನದ್ಧವಾಗಿರುವ ಹಿನ್ನೆಲೆಯಲ್ಲಿ 'ಭಾರತೀಯತೆ' ಎಂದರೇನು ಎಂಬುದನ್ನು ಮರುವ್ಯಾಖ್ಯಾನ ಮಾಡಬೇಕಾಗಿದೆ. ಆದ್ದರಿಂದ ಭಾರತೀಯತೆ ಎಂಬುದು ಗೋವಿನ ಸತ್ಯವಾಕ್ಯ ಪರಿಪಾಲನೆಯ ಶುದ್ಧ ರೂಪವೂ ಅಲ್ಲ. ಹಸಿದ ಹುಲಿಯ ಆತ್ಮಾರ್ಪಣೆಯ ಅಶುದ್ಧ ರೂಪವೂ ಅಲ್ಲ. ಈ ಎರಡು ಅತಿರೇಕ ಸ್ವಭಾವಗಳ 'ವಿಕೇಂದ್ರ–ಸಂಗಮ'ದಲ್ಲಿ ಭಾರತೀಯ ಸಂಸ್ಕೃತಿ, ತತ್ವಚಿಂತನೆ, ಧಾರ್ಮಿಕತೆ, ರಾಜಕೀಯ ಸಿದ್ಧಾಂತಗಳ ಮರು ಮೌಲೀಕರಣ ಅನಿವಾರ್ಯ. ಈ ರೀತಿಯ ಪ್ರಯತ್ನಗಳು ಅತಿ ಬೌದ್ಧಿಕತೆಯ ಕ್ರಿಯೆಯಾಗದೆ, ಸಾಮಾಜಿಕ ಜೀವನದ ವಿಕೇಂದ್ರ ಸ್ತರಗಳ ಮೂಲದಿಂದ, ರಾಜಕೀಯ ಅಧಿಕಾರ ಸ್ತರಗಳನ್ನು ಜನಾಂದೋಲನದ ಮೂಲಕ ಪ್ರವೇಶಿಸಿ ನವ ಬೌದ್ಧಿಕಶಾಹಿಯ ಆಕ್ರಮಣದಿಂದ ಜನಪದವನ್ನು ಕಾಪಾಡುವ 'ಚಿಂತನೆ ಮತ್ತು ಕ್ರಿಯೆ' ವರ್ತಮಾನದ ಭಾರತೀಯ ಆಧುನಿಕ ಚಿಂತನೆಯಾಗಬಲ್ಲದು.

೨

ಇಂತಹ ಚಾರಿತ್ರಿಕ ಸಂದರ್ಭದಲ್ಲಿ ಭಾರತೀಯ ಬೌದ್ಧಿಕನಿಗೆ ಇರುವ ಅತಿ ದೊಡ್ಡ ಸವಾಲೆಂದರೆ, ಆಧುನಿಕ ಬೌದ್ಧಿಕ ಯುದ್ಧದಲ್ಲಿ ಪ್ರಕಾಂಡ ಪಂಡಿತನಾದ ನಾಗಾರ್ಜುನನ ದರ್ಶನ ಶಾಸ್ತ್ರವನ್ನು ಪ್ರಬಲ ಅಸ್ತ್ರವಾಗಿ ಬಳಸುವುದೊ ? ಅಥವಾ ಇಂಡಿಯಾದ ಬಹುಮುಖೀ ಸಂಸ್ಕೃತಿಯ ಮಾತೃಗರ್ಭದಲ್ಲಿ ಧಾರಣವಾಗಿರುವ ಪರ್ಯಾಯ ಪ್ರತಿರೋಧ ಶಕ್ತಿಯ ನೆಲೆಯಲ್ಲಿ ನಿಂತು ಭಾರತೀಯ ಚಿಂತನೆಗೆ ಒಂದು

ಪೂರ್ಣ ಸ್ವರೂಪ ನೀಡುವುದೋ ? ಎಂಬುದು. ಈ ಪ್ರತಿರೋಧ ಶಕ್ತಿಯೇ ಸಕಲ ಜೀವಿಗಳಿಗೂ ಲೇಸನೆ ಬಯಸುವ ಮಾತೃಗುಣ. ನಾಗಾರ್ಜುನನ ಪರಿಭಾಷೆಯಲ್ಲಿ ಹೇಳುವುದಾದರೆ, ಈ ಪ್ರತಿರೋಧ ಶಕ್ತಿಗೆ ಅವಿನಾಶಿ ಎದೆಹಾಲಿನ ಗುಣವಿರಬೇಕು. ಸಕಲ ಜೀವಿಗಳೂ ಇದನ್ನು ಕುಡಿದು, ಸಪ್ತ ಸಮುದ್ರಗಳು ತುಂಬಿ ಹರಿದರೂ ಬತ್ತಲಾರದ ಗುಣವಿರಬೇಕು. ಬುದ್ಧನ 'ಮಹಾಕರುಣೆ ಮೈತ್ರಿಭಾವ'ದಲ್ಲಿ ಎದೆ ಹಾಲಿನ ಗುಣ ಕರಗಿ ಲೀನವಾಗಿರಬೇಕು.

ವೈದಿಕಶಾಹಿಯನ್ನು ಧಿಃಕರಿಸುವ ಭಾರತೀಯ ವಿಚಾರವಂತನು ತರ್ಕವನ್ನು ಅವಲಂಬಿಸುತ್ತಾನೆ. ನೀರಿನಲ್ಲಿ ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯೇ ಆಶ್ರಯ ವಾಗುವಂತೆ ತರ್ಕವು ಇವನ ನೆರವಿಗೆ ಬರುತ್ತದೆ. ತಮಾಷೆ ಎಂದರೆ ತರ್ಕದ ಇನ್ನೊಂದು ಕ್ರಮವೇ ಯುಕ್ತಿ. ತರ್ಕಪ್ರಧಾನ ಗ್ರಹಿಕೆಯು ಒಂದು ಸಾಧಾರಣ ಗ್ರಹಿಕೆಯ ಕ್ರಮ. ಸಾಧಾರಣ ಕ್ರಮ ಏಕೆಂದರೆ, ಕಣ್ಣಮುಂದಿನ ಬದುಕಿನ ಆಚೆಗಿರುವ ವಿಸಂಗತಿಗಳನ್ನು ಇದು ನಿರಾಕರಿಸುತ್ತದೆ, ಅಥವಾ ಬಹುಮುಖೀ ಸಂಸ್ಕೃತಿಯ ಮಾತೃಗರ್ಭದಲ್ಲಿ ಧಾರಣವಾಗಿರುವ ಅವೈದಿಕ ಶಕ್ತಿ ಮೂಲವನ್ನು ತರ್ಕ ತಲುಪುವುದೇ ಇಲ್ಲ. ಹಾಗೆ ನೋಡಿದರೆ, ವೈದಿಕದ ಅಧ್ಯಾತ್ಮ ವಿಕಾರಗಳಿಗೆ ತರ್ಕ ಮದ್ದಲ್ಲ. ಆದ್ದರಿಂದಲೇ ಸಿದ್ಧರು, ಅನುಭಾವಿಗಳು ತರ್ಕದ ಚೌಕಟ್ಟನ್ನು ಮುರಿಯುವ ದಾರಿಯನ್ನು ತುಳಿದರು. ಹನ್ನೆರಡನೆ ಶತಮಾನದ ಶರಣ ಚಳವಳಿಯು ಈ ದಾರಿಯ ಮುಂದುವರಿಕೆ ಮಾತ್ರ. ಆದರೆ ತರ್ಕದ ಮೂಲಕ ತಿಳಿಯುವ ಸತ್ಯವೇ ಆತ್ಯಂತಿಕ ಸತ್ಯವೆಂದು ಬೌದ್ಧಿಕನು ಭಾವಿಸುತ್ತಾನೆ.

ಈ ಮೂಲದ ವಿಚಾರವಂತರಾದ ಡಿ. ಆರ್. ನಾಗರಾಜರಿಗೆ ತರ್ಕ ಮತ್ತು ಅನುಭಾವದ ನಡುವಿನ ಚೋದ್ಯ ಗೋಚರಿಸುವುದಿಲ್ಲ. 'ಎಲ್ಲಿಯ ತರ್ಕ, ಎಲ್ಲಿಯ ಅನುಭಾವ' ಎಂಬ ಅನುಮಾನ ಅವರನ್ನು ಬಾಧಿಸುವುದಿಲ್ಲ. ತರ್ಕಬದ್ಧ ಚಿಂತನೆಗೆ ಒಂದು ರೀತಿಯ ಕತ್ತಿವರಸೆಯ ಗುಣವಿರುತ್ತದೆ. ಎದುರಾಳಿಯ ವಾದವನ್ನು ಸಂಹರಿಸುವ ಧೈರ್ಯವಿರುತ್ತದೆ. ಆದರೆ ಎದುರಾಳಿಯು, ಅಕ್ಕಮಹಾದೇವಿ ವಸ್ತ್ರ ನಿರಾಕರಣೆ ಮಾಡಿದಂತೆ ನಿರಾಕರಣ ರೂಪದಲ್ಲಿ ಬಂದರೆ ಬೌದ್ಧಿಕನು ಕಕ್ಕಾವಿಕ್ಕಿಯಾಗು ತ್ತಾನೆ. ಇದು ಕಾರಣ, ನವ ಬೌದ್ಧಿಕಶಾಹಿಗೆ ಸಲ್ಲುವ ಅಪಾಯವೆಂದರೆ, ಚಿಂತನೆಗೆ ಜಂಗಮ ಗುಣ ಪ್ರಾಪ್ತವಾಗದೆ ಇರುವುದು. ಜಂಗಮ ಗುಣವಿಲ್ಲದ ಚಿಂತನೆಗೆ ಕಾಲಜ್ಞಾನಿಯ ಒಳನೋಟ ದಕ್ಕುವುದಿಲ್ಲ. ಪ್ರವಾದಿಯ ಎಚ್ಚರವಿರುವುದಿಲ್ಲ. ಆಗ ಬೌದ್ಧಿಕನು ನಿಂತ ನೆಲೆ ಸ್ವಾಭಾವಿಕವಾಗಿ ಭೀತಿಯ ನೆಲೆಯಾಗುತ್ತದೆ. ವೈಚಾರಿಕ

ನೆಲೆಗಳಲ್ಲಿ ಕ್ಷೋಭೆ ಉಂಟಾಗುತ್ತದೆ. ಆಧುನಿಕ ಬೌದ್ಧಿಕನು ತನ್ನ ಸುತ್ತ ಹಲವಾರು ಹುಲಿಗಳು ಹೊಂಚಿಹಾಕುತ್ತಿವೆ ಎಂದು ಭ್ರಮಿಸುತ್ತಾನೆ. ಇದರಿಂದ ಬಿಡುಗಡೆ ಅನಿವಾರ್ಯವಾಗಿ ಮಹಾದರ್ಶನಗಳ ಮೊರೆಹೋಗುತ್ತಾನೆ. ಹೀಗಾಗಿ 'ಪ್ರಣೀತ ಬೌದ್ಧಧರ್ಮ', 'ನಾಗಾರ್ಜುನ ದರ್ಶನ ಶಾಸ್ತ್ರ'–ಡಿ.ಆರ್. ನಾಗರಾಜ್ ಒಪ್ಪಿರುವಂತೆ ಅವರ ಮೂಲ ಉದ್ಯೋಗಕ್ಕೆ ನಾಗಾರ್ಜುನ ಒದಗಿ ಬಂದಿದ್ದಾನೆ.

೩

ಮಹಾದರ್ಶನಗಳನ್ನು ಆಶ್ರಯಿಸುವ ನವಬೌದ್ಧಿಕಶಾಹಿಯು ಎರಡು ರೀತಿಯ ಅನಿರೀಕ್ಷಿತ ಪ್ರಭಾವಗಳಿಗೆ ಒಳಗಾಗುತ್ತಾನೆ. ೧. ಮಹಾದರ್ಶನಗಳ ಪ್ರಭಾವಲಯ ಪ್ರವೇಶಿಸುತ್ತಿದ್ದಂತೆ ಪರಸ್ಥಳಕ್ಕೆ ಕಾಲಿಟ್ಟ ಹೊಸಬನಂತೆ ತಬ್ಬಿಬ್ಬಾಗುತ್ತಾನೆ, ಅಥವಾ ಅವನಲ್ಲಿರುವ ಹಿಂಜರಿಕೆಯ ಗುಣ ಅವನಿಗೆ ಗೋಚರಿಸುತ್ತದೆ. ೨. ತನ್ನ ಡಯಲೆಕ್ಟಿಕಲ್ ವಿಚಾರ ಮಂಡನೆಯ ರಕ್ಷಣೆಗೆ ಇವುಗಳನ್ನು ಗುರಾಣಿಯನ್ನಾಗಿ ಬಳಸುತ್ತಾನೆ. ನಮ್ಮ ಡಿ.ಆರ್. ನಾಗರಾಜರಂತಹ ಕನ್ನಡದ ವಿಚಾರವಂತರ ಚಿಂತನೆಗಳು ಇಂತಹ ಅನಿರೀಕ್ಷಿತ ಪ್ರಭಾವಗಳಿಂದ ಮುಕ್ತವಾಗಿಲ್ಲವೆಂಬ ಸಂಗತಿಯು ಅವರ 'ನಾಗಾರ್ಜುನ' ಕೃತಿ ಮತ್ತು ಚಿಂತನೆಯ ಬಗೆಗೆ ಬರೆದಿರುವ ಪೀಠಿಕಾ ಬರವಣಿಗೆಯಲ್ಲಿ ಎದ್ದು ಕಾಣುತ್ತದೆ.

–"ಹೀಗೆ ಆಧುನಿಕ ಬೌದ್ಧಿಕನಿಗೆ ಸುತ್ತ ಹಲವಾರು ಹುಲಿಗಳು ಹೊಂಚಿ ಮೆರೆಯುತ್ತವೆ. ಬೌದ್ಧಧರ್ಮದ ಅತ್ಯಂತ ಪ್ರಮುಖ ಶಕ್ತಿ ಎಂದರೆ ಎದುರಿಗಿನ ನಿಜವಾದ ಬಾಳನ್ನು ಹಸನಾಗಿಸುವ ಕ್ರಮ. ಸುತ್ತ ಕತ್ತಲೆಗೆ ಕಣ್ಣನ್ನು ಹೊಂದಿಸಿ ಅಲ್ಲೆ ಪದಾರ್ಥಗಳನ್ನು ಗುರುತಿಸುವ ಕ್ರಮ. ನಾಗಾರ್ಜುನನ ಮೂಲಕ ನಾನು ಬೌದ್ಧ ಧರ್ಮವನ್ನು ಕಾಣುವ ಪ್ರಯತ್ನಕ್ಕೆ ಇನ್ನೊಂದು ಕಾರಣವೂ ಇದೆ. ಏಕೋ ಮೊದಲಿನಿಂದಲೂ ಮೂಲ ಬೆಳಕನ್ನು ನೇರವಾಗಿ ನೋಡಲಾರದ ಹಿಂಜರಿಕೆಯ ದೃಷ್ಟಿಕೋನ ನನ್ನದು.ಸಾಹಿತ್ಯದಿಂದ ಕಲಿತ ಅನುಭವ ಸ್ವೀಕಾರ ಕ್ರಮ ಇದು. ಮೂಲ ಬೆಳಕನ್ನು ನೇರವಾಗಿ ನೋಡಿದಾಗ ಮಾನವ ನಯನಗಳು ಮಂಜಾಗಿ ಹೋಗುತ್ತವೆ. ಅಂತಹ ಪ್ರಖರತೆಯನ್ನು ಒಮ್ಮೆಗೆ ಮಾನವ ನಯನಗಳು ಸಹಿಸಲಾರವು. ಮೂಲ ಬೆಳಕು ಪುಟ್ಟ ಪದಾರ್ಥವನ್ನು ಹೇಗೆ ದೀಪವಾಗಿಸಿದೆ ಎಂದು ನೋಡಬೇಕು. ಚಂದ್ರ ಹೇಗೆ ಚಿಕ್ಕ ಕನ್ನಡಿಯಲ್ಲಿ ಪ್ರತಿಫಲಿತವಾಗಿದೆ ಎಂದು ನೋಡಬೇಕು. ನಿಧ–ನಿಧಾನಕ್ಕೆ ನಾವು ಮೂಲ ಅರಿಯಬೇಕು, ಅದನ್ನು ಒಳಗೊಳ್ಳಬೇಕು." ಈ ರೀತಿಯ ವಿಚಾರ ಮಂಡನೆ ಮಾಡುವ ಡಿ.ಆರ್. ನಾಗರಾಜರ ಮೂಲಗ್ರಹಿಕೆಯ ಪ್ರಧಾನ ದೋಷ

ಇರುವುದು ಇಲ್ಲಿಯೇ. ಇವರದು ಪ್ರತಿಫಲನ ನೋಡಿ ಮೂಲ ಗ್ರಹಿಸುವ ಕ್ರಮ. ಇದು ಆಧುನಿಕ ಚಿಂತಕನನ್ನು ಕಾಡುವ ಪ್ರೊಮಿಥಿಯನ್ ಭೀತಿ. ಪ್ರತಿಫಲನ ಘನ ಚಿತ್ರದ ರೂಪವನ್ನು ತೋರಬಹುದಲ್ಲದೆ, ಪ್ರಾಣವನ್ನು ತೋರಲಾರದು. ಈ ರೀತಿಯ ಗ್ರಹಿಕೆಗೆ ಪ್ರತಿಫಲನದ ಹಿಂದಿನ ಪ್ರಾಣತಂತುಗಳನ್ನು ಮುಟ್ಟುವ ದೈವೀಶಕ್ತಿ ಇರುವುದಿಲ್ಲ. ಮೂಲವನ್ನು ಮುಟ್ಟಲಾಗದ ಸ್ಥಿತಿ. ಸ್ವಯಂ ನಡೆಯನ್ನು ಕಳೆದುಕೊಂಡ ಸ್ಥಿತಿ. ಮೂಲ ಬೆಳಕು ಮಾನವ ಮಾತ್ರದವರನ್ನು ಕೈಹಿಡಿದು ನಡೆಸಬೇಕೆಂಬ (Lead thy kindly light) ಕ್ರೈಸ್ತ ಧರ್ಮೀಯ ಸಂಕಲ್ಪ. ಝೆನ್ ಪರಿಭಾಷೆಯಲ್ಲಿ ಹೇಳುವುದಾದರೆ 'ತೋರು ಬೆರಳಿನ ತುದಿಯೇ ಚಂದ್ರನಲ್ಲ'–ಹಾಗೆಯೇ ಪ್ರತಿಫಲನವೇ ಮೂಲವಲ್ಲ. ಡಿ.ಆರ್. ನಾಗರಾಜ್ ಹಂಬಲಿಸುವ 'ಮೂಲ ಬೆಳಕು' ಮೂಲ ಬೆಳಕಲ್ಲ. ಅದೇ ಮೂಲದ ತಮಂಧ. ಮೂಲದ ತಮಂಧವನ್ನು ಅರಿಯುವ ಕ್ರಮವೇ ಬೆಳಕನ್ನು ಕಂಡುಕೊಳ್ಳುವ ಮಾರ್ಗ. ಮೂಲ ಬೆಳಕು ಯಾವುದೋ ಮೂಲೆಯಿಂದ ಹರಿದು ಮಾನವ ನಯನಗಳನ್ನು ಪ್ರವೇಶಿಸುವುದಿಲ್ಲ. ನೋಡುವ ಕಣ್ಣಿನ ಪೊರೆ ಕಳಚಿ ನೋಡುವ ಕ್ರಮ. ಹಾಗೆ ನೋಡಿದರೆ ಮೂಲ ಬೆಳಕಿನ ಪ್ರಖರತೆ ಮಾನವನ ನಯನಗಳನ್ನು ಮಂಜಾಗಿಸುವ ಬದಲು ಮಾನವ ನಯನಗಳಿಂದ ಬೆಳಕು ಹರಿದು ಎದುರಿನ ತಮಂಧವನ್ನು ಬೆಳಕಾಗಿಸುತ್ತದೆ ; ಮೂಲ ಬೆಳಕು ಘನ, ಅರಿವುಗಣ್ಣಿನ ಬೆಳಕು ಕಿರಿದು, ಎಂಬ ದೃಷ್ಟಿದೋಷ ನಿವಾರಣೆಯಾಗುತ್ತದೆ. ತನ್ನ ತಾನರಿತವನಿಗೆ ಗುಹೇಶ್ವರನೆಂಬುದು ಕಿಂಚಿತ್ತಾಗಿ ಕಾಣಬಹುದೇನೋ ?

ನಮ್ಮ ಡಿ.ಆರ್. ನಾಗರಾಜರ ಡಯಲೆಕ್ಟಿಕಲ್ ಕಣ್ಣಿನ ದೃಷ್ಟಿ ದೋಷ ಅವರ ವಿಚಾರಪೂರ್ಣ ಗ್ರಹಿಕೆಯ ಮಿತಿಯೂ ಆಗಿದೆ. ಈ ಮಿತಿಯು ಎಷ್ಟು ಅಪಾಯಕಾರಿಯಾದುದೆಂದರೆ, ಸರಳ ಸತ್ಯದ ಅರಿವನ್ನೇ ಕೊಂದುಬಿಡುತ್ತದೆ. 'ಮೂಲ ಬೆಳಕು ಪುಟ್ಟ ಪದಾರ್ಥವನ್ನು ಹೇಗೆ ದೀಪವಾಗಿಸಿದೆ' ಎಂದು ನೋಡಬೇಕೆಂದು ಡಿ. ಆರ್. ಅಭಿಪ್ರಾಯ ಪಡುತ್ತಾರೆ. ಭೂಮಿಯ ಮೇಲಿರುವ ಪ್ರತಿ ಪುಟ್ಟ ಪದಾರ್ಥವೂ, ಪ್ರತಿ ಜೀವಿಯೂ ತನ್ನೊಳಗೆ ಸ್ವಯಂ ದೀಪಕ ಶಕ್ತಿಯನ್ನು ಹೊಂದಿದೆ ಎಂಬ ನೈಸರ್ಗಿಕ ಸರಳ ಸತ್ಯದ ಅರಿವು ನಮಗೆ ಬರಬಾರದೆ ? ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ ? ಹಾಗಾದರೆ ಭಾರತೀಯ ವೈದಿಕಶಾಹಿ ಮತ್ತು ವಸಾಹತುಶಾಹಿಯ ಆಕ್ರಮಣವನ್ನು ನಿರೋಧಿಸುವ ಶಕ್ತಿ ಬಹುಮುಖೀ ಸಂಸ್ಕೃತಿಗೆ ಯಾವ ಮೂಲದಿಂದ ಹರಿದು ಬರಬೇಕು ? ಅಖಂಡ ಶೂದ್ರ ಸಮುದಾಯವು ತನ್ನ ಜನಾಂಗಿಕ ನೆನಪು ಮತ್ತು ಜನಾಂಗಿಕ ಕೌಶಲ್ಯಗಳಿಂದ ಮರುಹುಟ್ಟು ಪಡೆಯಲಾರದೆ ? ಈ ಮರುಹುಟ್ಟುವಿಕೆಯು, ಬಹುಮುಖೀ ಸಂಸ್ಕೃತಿಯ ಮಾತೃಗರ್ಭದಲ್ಲಿ ಧಾರಣವಾಗಿರುವ

ಅವಿನಾಶಿಯಾದ ಪ್ರತಿರೋಧದ ಶಕ್ತಿಮೂಲ. ಇದು ಕಾರಣ ಮೂಲ ಬೆಳಕು ಪುಟ್ಟ ಪದಾರ್ಥವನ್ನು ಹೇಗೆ ದೀಪವಾಗಿಸಿದೆ ಎಂದು ನೋಡುವುದರ ಪರ್ಯಾಯ ಕ್ರಮವೇ, ಪುಟ್ಟ ಪದಾರ್ಥವೂ ತನ್ನೊಳಗೆ ದೀಪವನ್ನು ಇರಿಸಿಕೊಂಡಿದೆ, ಅಥವಾ ಪುಟ್ಟಪದಾರ್ಥವೇ ಒಂದು ದೀಪ. ಈ ದೀಪದ ಬೆಳಕಿಗೂ ಮೂಲ ಬೆಳಕಿಗೂ ಇರುವ ಅಂತರ್ಗತ ಸಂಬಂಧ ಎತ್ತಣದೆಂದು ನೋಡುವುದು ಸ್ವಾಭಾವಿಕವೂ, ಅರ್ಥಪೂರ್ಣವೂ ಆಗಬಲ್ಲದು. ಬೌದ್ಧಿಕನಿಗಿರುವ ಭೂಮಿಗುಣವನ್ನು ಕಡೆಯಬಲ್ಲದು. ಭೂಮಿಗುಣ ವೆಂದರೆ ಬೆಳಕಿಗಾಗಿ ಸದಾ ಸೂರ್ಯನನ್ನು ಅವಲಂಬಿಸುವುದು, ಅಂದರೆ ವಿಚಾರ ಮಂಡನೆಗೆ ತರ್ಕವನ್ನು ಅನುಸರಿಸುವುದು.

೪

ಪ್ರಕಾಂಡ ಪಂಡಿತ ನಾಗಾರ್ಜುನ ಹಾಗೂ ಮಹಾಜ್ಞಾನಿ ಅಲ್ಲಮಪ್ರಭುವಿನ ಬಗ್ಗೆ ಡಿ. ಆರ್. ನಾಗರಾಜ್ ವ್ಯಕ್ತಪಡಿಸುವ ಅಭಿಪ್ರಾಯ ಅಸಂಬದ್ಧವಾಗಿದೆ. "ನಾಗಾರ್ಜುನ ಕೂಡ ಬಹುದೊಡ್ಡ ಅನುಭಾವಿ. ಆತ ದರ್ಶನ ಶಾಸ್ತ್ರದ ಸೂಕ್ಷ್ಮ ಪರಿಭಾಷೆಯಲ್ಲಿ ಮಾತನಾಡಿದ. ಅಲ್ಲಮಪ್ರಭು ಮೇಲುನೋಟಕ್ಕೆ ಬಹುದೊಡ್ಡ ಅನುಭಾವಿಯಂತೆ ಕಾಣುತ್ತಾನೆ". ಹಾಗೆ ನೋಡಿದರೆ ಅಲ್ಲಮಪ್ರಭು, ನಾಗಾರ್ಜುನ ಸಮಾನಾಂತರ ದಾರಿ ಕ್ರಮಿಸಿದವರು. ನಾಗಾರ್ಜುನ ರಸಸಿದ್ಧನಾಗಿದ್ದ. ಅಲ್ಲಮನು ಬಹುದೊಡ್ಡ ಅನುಭಾವಿ. ಅಲ್ಲಮನು ತಲುಪಿದ ಜ್ಞಾನಸ್ಥಲ ತಲುಪುವ ದಾರಿಯಲ್ಲಿ ರಸಸಿದ್ಧಿಯು ಒಂದು ಮೈಲಿಗಲ್ಲು ಮಾತ್ರ. ನಾಗಾರ್ಜುನ ಯಾವ ತರ್ಕದ ನಿರರ್ಥ ಕತೆಯನ್ನು ತರ್ಕದ ಮೂಲಕ ತಿಳಿಯಲು ಪ್ರಯತ್ನಿಸುವನೋ ಅದನ್ನು ಪ್ರಭುವು ಅನುಭಾವಿ ಕವಿಯಾಗಿ ಬೆಡಗಿನ ಭಾಷೆಯಲ್ಲಿ ಮಾತಾಡಿದ. 'ತರ್ಕವೆಂಬುದು ತಗರ ಹೋರಟೆ'ಯೆಂದು ಅರಿತು ನಿರಾಕರಿಸಿದ.

ನಾಗಾರ್ಜುನನು ಒಬ್ಬ ರಸಸಿದ್ಧನೆಂಬುದು ಮಿಥಿಲೆಯ ಜ್ಯೋತಿರೇಶ್ವರ ಠಾಗೂರರ ೧೪ನೇ ಶತಮಾನದ 'ವರ್ಣರತ್ನಾಕರ' ಎಂಬ ಗ್ರಂಥದಲ್ಲಿ ವ್ಯಕ್ತವಾಗಿದೆ. ಅವರು ಮಾಡಿರುವ ಸಿದ್ಧರ ಪಟ್ಟಿಯಲ್ಲಿ ನಾಗಾರ್ಜುನನ ಹೆಸರಿದೆ. ಅವನು ರಸಸಿದ್ಧ ಪಂಡಿತ. ರಸಸಿದ್ಧಿ ಪಡೆದು ವಜ್ರಯಾನಿಯಾದ. ಮೂಲ ಪ್ರಣೀತ ಬೌದ್ಧದರ್ಶನದ ವಿಕೃತ ರೂಪ ವಜ್ರಯಾನ. ಈ ಪ್ರಕಾರ ಪ್ರತಿಯೊಬ್ಬ ಸಾಧಕನು ಒಂದು ಮಹಾ ಮುದ್ರೆಯ ಸಂಪರ್ಕ ಇಟ್ಟುಕೊಳ್ಳಬೇಕು. ಪ್ರಜ್ಞಾಪಾರಮಿತೆಯು ಎಲ್ಲೆಡೆ ಹೆಣ್ಣಿನ ರೂಪದಲ್ಲಿರುತ್ತಾಳೆ. ವಜ್ರಯಾನದ ಅನುಯಾಯಿ ಸಾಧಕ ಮೊಟ್ಟಮೊದಲು 'ನೀಚ ಕುಲದ ಹೆಣ್ಣನ್ನು ಆರಿಸಿಕೊಳ್ಳುತ್ತಿದ್ದ'. ನಿರಂತರವಾಗಿ ವಿಷವನ್ನು ಸೇವಿಸುವ

ಮೂಲಕ ಹೇಗೆ ವಿಷದ ಪ್ರಭಾವದಿಂದ ಮುಕ್ತರಾಗುತ್ತಾರೋ, ಅದೇ ರೀತಿ ಭವದ ನಿರಂತರ ಭೋಗದಿಂದ ಭವ ದೂರವಾಗಬಹುದೆಂದು ಇದರ ನಂಬಿಕೆ. ಸಿದ್ಧರಲ್ಲಿ ವ್ಯಭಿಚಾರಿಗಳು ಇದ್ದರೆಂಬ ಅಭಿಪ್ರಾಯವಿದೆ. ನಾಗಾರ್ಜುನನಲ್ಲೂ ವ್ಯಭಿಚಾರೀ ಲಕ್ಷಣ ಇದ್ದವೆಂದು ಊಹಿಸಲು ಸಾಧ್ಯ. ನಾಗಾರ್ಜುನನು ಅದೃಶ್ಯ ಯೋಗ ಬಳಸಿ ರಾಣಿಯರ ಅಂತಃಪುರ ಪ್ರವೇಶಿಸಿ ರಮಿಸಿ ಅದೃಶ್ಯವಾಗುತ್ತಿದ್ದ. (ಇದನ್ನೇ ಡಿ. ಆರ್. ಅವರು ಎಂತಹ ಯೋಗ, ಎಂತಹ ಸುಖ! ಅನ್ನುವುದು). ಆದರೆ ಅಲ್ಲಮನು ಅದೃಶ್ಯ ಯೋಗ ಉಪಯೋಗಿಸಿದ ರೀತಿಯೇ ಬೇರೆ. ಗೋರಕ್ಷ ಹಾಗೂ ಅಲ್ಲಮನ ನಡುವೆ ಏರ್ಪಟ್ಟ ಸಿದ್ಧಿ ಪರೀಕ್ಷೆಯಲ್ಲಿ ಗೋರಕ್ಷನು ವಜ್ರಕಾಯನಾದರೆ ಅಲ್ಲಮನು ಕಾಯ ರಹಿತನಾದ. ಇದೊಂದು ಸಂತಕ್ರಿಯೆ. 'ರೂಪಕಾಯ'ವನ್ನು ವಿಸರ್ಜಿಸುವ ಬೌದ್ಧರ ಕ್ರಮ. ಆದರೆ ನಾಗಾರ್ಜುನನ 'ರೂಪಕಾಯ' ವಿಸರ್ಜನೆಯ ಕ್ರಮವೇ ಬೇರೆ. ರಸಸಿದ್ಧನಾದ ನಾಗಾರ್ಜುನನು ಚಿರಂಜೀವಿಯಾಗುವ ಬಯಕೆಯಿಂದ ವಜ್ರದೇಹಿಯಾಗುವನು. ಇನ್ನೂರು ವರ್ಷಗಳು ಬದುಕಿದ ನಂತರ ಇದು ಅನೈಸರ್ಗಿಕವೆಂದು ತಿಳಿದು ತನ್ನ ಪರಮ ಶಿಷ್ಯನಾದ ಆರ್ಯದೇವನಿಗೆ ತನ್ನ ವಿದ್ಯೆಯನ್ನು ಧಾರೆಯೆರೆದು ಖಡ್ಗ ನೀಡಿ ತಲೆ ಕಡಿಸಿಕೊಂಡನು. ಬಹು ದೊಡ್ಡ ಅನುಭಾವಿಯಾದ 'ನಾಗಾರ್ಜುನನೇಕೆ ತಲೆಯ ಕಡಿಸಿಕೊಂಡ ?'

೫

ಡಿ. ಆರ್. ನಾಗರಾಜ್ ಅವರು ಬುದ್ಧನ ಮಹಾ ಮೌನವನ್ನು ವ್ಯಾಖ್ಯಾನಿಸಿ ಈ ರೀತಿ ಹೇಳುತ್ತಾರೆ—'ಉತ್ತರಿಸಲೊಲ್ಲದೆ ಆತ ಮೌನ ತಳೆದ'. ಬುದ್ಧನ ಡಯಲೆಕ್ಟಿಕಲ್ ಚಿಂತನೆಯ ಉಗಮ ಆದದ್ದು ಇಲ್ಲಿಯೆ. ಎಲ್ಲ ಬಗೆಯ ವಿಮರ್ಶನ ಪ್ರತಿಫಲನ ಆದು. ಬುದ್ಧನ ನಿಲುವೆಂದರೆ ಮಾತಿಗೂ ಮೀರಿದ್ದನ್ನು ಮಾತಿನಲ್ಲಿ ಹಿಡಿಯಲಾಗುವುದಿಲ್ಲ ಎನ್ನುವುದು. ಬುದ್ಧನ ಮಹಾಮೌನವನ್ನು ಅರ್ಥೈಸುವುದೆಂದರೆ ಹಗಲು ಕಾಣದ ದಾರಿಯನ್ನು ರಾತ್ರಿ ಕಂಡಂತೆ. ಬುದ್ಧನ ಮಹಾಮೌನದ ಅರ್ಥವೇ ಶೂನ್ಯ. ಶೂನ್ಯವ ನುಡಿಯಲಾಗದು. ಇದು ಸತ್ಯದ್ವಯವನ್ನು ಗೆದ್ದ ಸ್ಥಿತಿ. ಇದನ್ನೇ ಅಲ್ಲಮಪ್ರಭು 'ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯಾ' ಅನ್ನುವುದು. ಶೂನ್ಯದಲ್ಲಿ ತಂಗಿದವನಿಗೆ ಮೌನವೇ ಒಂದು ರೀತಿ ಸಂವಾದ. ಈ ಮಹಾಮೌನವನ್ನೇ ತಾವೊ ಗುರುಗಳು 'Wisdom of no words' ಎಂದು ಕರೆಯುವುದು. ಅವರಿಗೆ ಮೌನ ಸಂವಹನ ಅಂತ್ಯವಲ್ಲ, ಆರಂಭ. ಅರಿವಿನ ನೆಲೆಯಲ್ಲಿ ಪೂರ್ಣ ಸಂವಹನ. ಆಶ್ಚರ್ಯವೆಂದರೆ ಅತ್ಯಂತ ಜ್ಞಾನಿಯಾದ ತಾವೊ ಗುರು ಸದಾ ಮೌನಿಯಾಗಿರುತ್ತಿದ್ದ. ಆದರೆ ಎಲ್ಲ ಜನರು ಗುರುವಿನ ಬಳಿಗೆ ಬಂದು ಹೋಗುತ್ತಿದ್ದರು. ಗುರುವನ್ನು ನಂಬುತ್ತಿ

ದ್ದರು. ತಾವೊ ಪರಿಭಾಷೆಯಲ್ಲಿ ಇದನ್ನೇ 'Wordless teaching and actionless action' ಎಂದು ಕರೆಯುವುದು. ಕ್ರಿಯೆ ಇಲ್ಲದ ಕ್ರಿಯೆಯಲ್ಲಿ ತಂಗಿದವನ ಸಂವಹನ ಮಾಧ್ಯಮವೇ ಮೌನ. ಅದು ಪ್ರತಿಕ್ರಿಯೆ ಅಲ್ಲ. ಬುದ್ಧನ ಮಹಾಮೌನದಲ್ಲಿ ಝೆನ್ ಮಾದರಿ ಜನ್ಮ ತಾಳಿದ್ದು. ಅರಿತವರು ಅರಿದೆವೆಂದು ಹೇಳಲೊಲ್ಲರು, ಅಥವಾ ಶಬ್ದಗಳು ಸಾಕಾಗುವುದಿಲ್ಲ. ಈ ಶಬ್ದದೊಳಗಿನ ನಿಶ್ಶಬ್ದವೇ ಶೂನ್ಯ. ಎಲ್ಲ ರೀತಿಯ ತರ್ಕ ವಿನ್ಯಾಸಗಳು ಇದರಲ್ಲಿ ಕರಗಿಹೋಗುತ್ತವೆ. ವಿತಂಡವಾದ ನಿಧನವಾಗಿ ಅರಿವು ಜನಿಸುತ್ತದೆ. ಅರಿವು ಮಹಾಮೌನದ ನಿಗೂಢ ಸಂಹಿತೆ. ಇದು ಕಾರಣ ಲೋಕದಲ್ಲಿ ದುಃಖ ಇದೆ ಅಥವಾ ಇಲ್ಲ ಎಂಬ ಅನುಮಾನ, ಪ್ರಶ್ನೆ, ಬುದ್ಧನ ಎದುರಿಗಿಲ್ಲ. ಲೋಕದ ಜೀವಿಗಳು ದುಃಖಿಗಳು ಎಂಬುದೇ ನಿತ್ಯಸತ್ಯ. ದುಃಖಿ ಜೀವಿಗಳ ಬಗೆಗಿನ ಕರುಣಾಮೈತ್ರಿಭಾವವೇ ಬುದ್ಧನ ಮಹಾಮೌನದ ಅರ್ಥ. ಹಾಗೆ ನೋಡಿದರೆ 'ನಿರಾಲಂಬ', ಅನಾಲಯ' 'ನಿರಾಶ್ರಯ', 'ಶೂನ್ಯತ' ಶಬ್ದಗಳ ಅರ್ಥವೇ ಮೌನ. ಅಲ್ಲಮನ ಮಾತಿನಲ್ಲಿ ಹೇಳುವುದಾದರೆ—

> ಆದಿ ಆಧಾರವಿಲ್ಲದಂದು
> ಹಮ್ಮು ಬಿಮ್ಮುಗಳಿಲ್ಲದಂದು
> ಸುರಾಳ ನಿರಾಳವಿಲ್ಲದಂದು
> ಸಚರಾಚರವೆಲ್ಲ ರಚನೆಗೆ ಬಾರದಂದು
> ಗುಹೇಶ್ವರ, ನಿಮ್ಮ ಶರಣನುದಯಿಸಿದನು.

೦

ಕಾವ್ಯ

೧. ಪುಟ್ಟ ಕೆಂಚವ್ವ

ಹೊತ್ತಾರೆ ಸೂರ್ಯನ ಕಿರಣಗಳು ಮುತ್ತಿಡಲು
ಹಾಳು ಹಕ್ಕಿಯು ಹಾಡು ಕಿವಿ ತುಂಬಲು
ಕಿಸುರುಗಣ್ಣನು ತೆರೆದು ಸೆಟೆದ ಹೂ–ಮೈಯು ಮುರಿದು
ಆಕಳಿಸುವಳು ನಮ್ಮ ಪುಟ್ಟ ಕೆಂಚವ್ವ

ಚೂರು ಅಂಗಳವನೆ ಪರಪರ ಕೆರೆದು
ಒಡೆದ ಗಡಿಗೆಯು ಸೊಂಟಕ್ಕೆ ಕರೆದು
ಊರ ಗಟ್ಟಿಗಿತ್ತಿಯರೊಡನೆ ಗುದ್ದಾಡಿ
ನೀರು ತರುವಳು ನಮ್ಮ ಪುಟ್ಟ ಕೆಂಚವ್ವ

ಕರವೀರದ ಕೊಂಬೆಗಳ ಕಡಿದು
ಒಣಗಿದ ರೆಂಬೆಗಳನು ಬಡಿದು
ಕಡ್ಡಿ–ಪುರಳೆಯು ಒಟ್ಟಿಗೆ ಒಗೆದು
ಬೆಂಕಿ ಉರಿಸುವಳು ನಮ್ಮ ಪುಟ್ಟ ಕೆಂಚವ್ವ

ಚಟಾಕು ಹಾಲಿಗೆ ಚಿಟಿಕೆ ಪುಡಿಯನು ಬೆರೆಸಿ
ಪಾವು ನೀರನೆ ಸುರಿದು
ಘಮ್ಮೆನ್ನುವ ಹಾಗೆ ಟೀ ಕುದಿಸುವಳು
ಮಾಯಾವಿ ಹುಡುಗಿ ನಮ್ಮ ಪುಟ್ಟ ಕೆಂಚವ್ವ

ಹೊಲದಲ್ಲಿ ಸಂಜೆಯು ತನಕ ದುಡಿದು
ಅಕ್ಕಿ–ಮೆಣಸಿನಕಾಯಿ ಪಡೆದು

ತಮ್ಮನ ಬಾಯ ಚಪಲಕ್ಕೆ ಉದ್ದು-ಕಡಲೆಯ
ಕದ್ದು ತರುವಳು ನಮ್ಮ ಪುಟ್ಟ ಕೆಂಚವ್ವ

ದಾರಿಯಲಿ ಅಂತರಗಟ್ಟಪ್ಪನಿಗೆ ಕೈ ಮುಗಿವಳು
ಹೊಟ್ಟೆ ಬಟ್ಟೆಗಿಟ್ಟು ಮಡಗು ಎಂದು ಬೇಡುವಳು
ಹಕ್ಕಿ ಗೂಡಿಗೆ ಮರಳುವಂತೆ
ಗುಡಲಿಗೆ ಮರಳುವಳು ನಮ್ಮ ಪುಟ್ಟ ಕೆಂಚವ್ವ

ಸೋರುವ ಬುಡ್ಡಿಯನೂ ಒಲಿಸಿ ಉರಿಸುವಳು
ಪಾವಕ್ಕಿಯಲಿ ತಂಗಿ-ತಮ್ಮನ ಹೊಟ್ಟೆ ತೂಗಿಸುವಳು
ಹರಿದ ಹಚ್ಚಡವನೆ ಸಮನಾಗಿ ಎಲ್ಲರಿಗೆ
ಹೊದಿಸಿ ಕೈಚಳಕ ಮೆರೆವಳು ನಮ್ಮ ಪುಟ್ಟ ಕೆಂಚವ್ವ

ಅಪ್ಪನ ಕುಡಿತ-ಜೂಜಿಗೆ ಬೆದರುವಳು
ಅವ್ವನ ದಮ್ಮು-ಗೂರಲಿಗೆ ನೋಯುವಳು
ಸಿಟ್ಟಿನಲಿ 'ಕಟ್ಟಿರುವೆ' ಚಿಟ್ಟೆ ನಗೆಯುವಳು
ದಿಟ್ಟ ನಡೆಯುವಳು ನಮ್ಮ ಪುಟ್ಟ ಕೆಂಚವ್ವ

ಹೂವಿನ ವಾಸನೆ ಹಿಡಿದು ಹೆಸರು ಹೇಳುವಳು
ಹಕ್ಕಿಯ ಕೂಗನಳೆದು ಅಣಕಿಸುವಳು
ಎರೆಮಣ್ಣನು ಕಲಸಿ ಬೊಂಬೆಯ ಮಾಡುವಳು
ಬೊಂಬೆಗೂ ಜೀವ ಕೊಡುವಳು ನಮ್ಮ ಪುಟ್ಟ ಕೆಂಚವ್ವ

ಹುಲಿಯನಿಗೆ ಹಳ್ಳದಲಿ ಮಜ್ಜನ ಮಾಡಿಸುವಳು
ಭೂತಾಯಿ ಮೀನ ಕಿರುಬೆರಳಲಿ ಕುಣಿಸುವಳು
ಗಟ್ಟಿಗುಂಡಿಗೆಯವಳು, ಕಾಳವ್ವನ
'ಕಿಡಿ' ಇವಳು ನಮ್ಮ ಪುಟ್ಟ ಕೆಂಚವ್ವ

೨. ಹೊಳೆಮಗಳು

ಅವಳು ಹಳ್ಳ
ಇವಳು ಹೊಳೆ

ಹಳ್ಳದ ಬಳ್ಳಿಯಲಿ
ಹರಿದು ಬಂದವಳು
ಹೊಳೆ ಮಗಳು

ತಾಯಿ—
ಹೊಳೆಮಗಳ ಹುಬ್ಬನು ತೀಡುವಳು
ಸುಳಿ ಮುಂಗುರುಳ ಬಾಚುವಳು
ದಿಟ್ಟಿಯ ಬೊಟ್ಟಿಟ್ಟು
ಅಕ್ಕರೆಯ ಮುತ್ತಿಟ್ಟು
ಮುನ್ನಡೆಸುವಳು

ಇದು ಬೆಟ್ಟ ಇದು ಗಾಳಿ
ಇದು ಹೂವು ಇದು ಎಲೆ
ಎಂದು ಮಗಳಿಗೆ
ಪರಿಚಯಿಸುವಳು

ಮಗಳು—
ಕಲಿಯುವಳು
ಗಿಡಮರಗಳ ಅಡಿಯಲಿ ಬಾಗಿ
ಕಣಿವೆ ಕೊರಕಲು ಬಂಡೆ
ಹಾದಿಯಲಿ ಬಳುಕಿ ಸಾಗುವಳು

ಅವ್ವನಿಗೆ ತೋರುವಳು—
ಸಂಭ್ರಮಿಸಿ ಹೇಳುವಳು
ನಕ್ಷತ್ರಗಣವಿರುವುದು
ನನ್ನೊಳಗೆ
ಚಂದಿರನಿರುವನು ತಳಗೆ

ಮಾರ್ಚ್-ಏಪ್ರಿಲ್ ೧೯೯೪/೧೧

ತಾಯಿ ನಸುನಕ್ಕು—
ನುಣ್ಣನೆಯ ನಡೆಯುವಳೆ
ಸಣ್ಣನೆಯ ದನಿಯುವಳೆ
ನನ್ನ ಕರುಳಿನ ಕುಡಿಯೆ
ನನ್ನ ಆಶೆಯ ಕಿಡಿಯೆ
ಎಂದು ಮಗಳ ಮುದ್ದಾಡುವಳು

ತಾಯಿ ಎಚ್ಚರಿಸುವಳು :
ಚಿಣ್ಣರನು ಮುಳುಗಿಸದಿರು
ಮೀನುಗಳ ಒಣಗಿಸದಿರು
ಕಲ್ಲುಗಳ ಮಿದುಗೊಳಿಸಿ
ಸಹನೆಯಲಿ ನೀರುಣಿಸಿ
ಹರಿವ ಹಾದಿಯಲೆಲ್ಲ
ಜೀವದೀಪವನುರಿಸು

ವಿಷಕಂಠನನುಸರಿಸಿ
ಕೊಳೆ ಕಳಂಕವ ಧರಿಸಿ
ಕಾಳಿಯಾವೇಶವ ತಾಳಿ
ಕೇಡಿನೆದೆಗೂಡ ಸೆಳೆದು
ಮಡುವಿನಲಿ ಮುಳುಗಿಸು

ಸೂರ್ಯನ ಕರುಣೆ
ನೆಲದ ಋಣ
ತಾಯ ಹರಕೆ
ಕೊನೆವರೆಗೆ ಕಾಯುವುದು

ತಾಯಿ
ನಿಂತಲ್ಲೆ ನಿಲ್ಲುವಳು
ತಪಸ್ವಿನಿ
'ತಾವರೆ' ಈಗವಳು

ಹಳ್ಳದ ಬಳ್ಳಿಯನು ಕಡಿದು
ಕಣ್ಣೀರ ತಡೆ ತಡೆದು
ಮುಂದೆ ಸಾಗುವಳು
ಹಿಂದೆ ನೋಡುವಳು
ಹೊಳೆ ಮಗಳು.

—ಸವಿತಾ ನಾಗಭೂಷಣ

ಹಸ್ತಿನಿ

ನಿನ್ನಜ್ಞಾತ ಸಭೆಗಳಲಿ
ದೀಪದ ಮಂದ ಬೆಳಕಿನಲಿ
ನೊರೆಗರೆದ ಸೋಡಾ, ವಿಸ್ಕಿಯ ಮತ್ತಿನಲಿ
ದೇಶ–ಕಾಲದುತ್ಥಾನ ಚಿಂತೆಯಲಿ
ಎಷ್ಟೊಂದು ಬಳಲಿದ್ದೀಯ
ಗೆಳೆಯಾ

ಟಿಸಿಲು ನಾಲಗೆ ಹಾವು ವಕ್ಕರಿಸಿ
ತೊಗಲ ಮಿಂಚುಗಳೆಷ್ಟೋ ಮಿಂಚಿ
ತೊದಲುವವರೆಗೂ ಮೆಲ್ಲಗೆ ಸರಿದು
ಬೇಲಿಗೂ ಭಯ ಬಡಿದು
ಪಂಚತಾರಾ ಮೂಲೆಗತ್ತಲಲಿ
ಒಂದು ಇಲಿ ಹಿಡಿದು
ಹುಲಿಯ ಮುಖವಾಡ ತೊಡಿಸಿದ್ದು
ಬೇರೆ ಬಿಡು

ಒಂದು ಸ್ಫೋಟದವಸರಕ್ಕೆ
ಜೀವ ಸಾವಿರ ಬಲಿಗೊಟ್ಟು

ಶಬ್ದಾರ್ಥ ಸಾವಿನ ನೈಟಿವೇಷದ ಹೆಣ್ಣು
ಕಂಗಳಲಿ ಬೆಂಕಿಪ್ರೇಮುವ ಕರೆದು
ತುಂಬಿ ಕಾಗದದ ಹೂವ ಪರಾಗಕ್ಕೆಳೆದು
ಬಚ್ಚಲ ತುರಿಕೆಗೆ
ದಿಕ್ಕು ದಿಕ್ಕಿನ ದೇಶ, ವಿದೇಶ ಚದುರರಿಗೆ
ಹಾಸಿದ್ದು, ಕಿಸಿದದ್ದು
ತನ್ನಾಕಾಶ ತೆರೆದು
ಚುಕ್ಕಿ ಕಲೆಗಳ ತೋರಿದ್ದು
ಒಂದಪರೂಪ ದೃಶ್ಯ.

ವಿಸ್ಫೋಟಿ,
ನೀನವಳ ಗುಲಾಮು ಲಾಂಗೂಲ
ಭೂತಕನ್ನಡಿಯು ಕನ್ನಡಕ ಕಣ್ಣಲ್ಲಿ
ದೂರ ದರ್ಶನ ಕುಂತ ತಾವಲ್ಲಿ
ಆಡಿಸಿದೆ ನಿನ್ನ ಸರ್ವಸ್ವ ಹಲ್ಲು ಗಿಂಜಿ
ವರ್ತಮಾನವ ಅಲ್ಲಲ್ಲೆ ಹಿಂಜಿ.

ತಲೆಯೊಳಗೇನು ? ಗಡ್ಡದೊಳಗೂ ಹೇನು
ಅತ್ತಿ ಹಣ್ಣಿನ ಚಂದ ಮುಖದವನು
ಕಾರು ಬ್ರೇಕಿಗೆ ನಿಂತ ಕೆಂಪು ದೀಪದ ಬೆದರಿಕೆ–
ಯಲ್ಲೂ
ಹಸುರಿಂದೊಗೆದಂತೆ ಕೆಂಪು ಹೂವಿನ ಕಂಪುಂಡು ಕುಂತವನು
(ಏನವನ ಸ್ಟೈಲು, ಏನವನ ಘನಗಂಭೀರ ಐಲು)
ಹೊರಗೆ ಜಗವ್ಯಾಪಿ ಬೆಳಕಿನ ಸಾಗರಕೆ ಮುಖ ತಿರುವಿದವನು.

ಅಯ್ಯಾ
ಕಗ್ಗತ್ತಲ ಚರಂಡಿಯೊಳಕ್ಕೆ
ಪಿತಿಗುಡುವ ಹೇಲುಳಗಳ ಹಕ್ಕೆ
ದಕ್ಕಿದ್ದು
ಮಧ್ಯಾಹ್ನದೇಕಾಕಿ
ಬಿಸಿಗಾಳಿ ಸಂಚಾರಿ

ಇಂಥವೆಷ್ಟೋ ಲೆಕ್ಕವಿರದ
ರುಣ ಚಿತ್ರಗಳ ಸ್ವತಃ ರೂವಾರಿ.

ಚಿಂದಿ ಹಸಿವಿನ ಭವ್ಯ ತಾಳಕ್ಕೆ
ಸಿಕ್ಕ ಸಿಕ್ಕವರ ಬೇಡುವ, ಪಡೆಯುವ
ಎಂಜಲಿನ ಹರತಾಳ
ತಿರು ತಿರುವಿ ಬೀಳುವ ದಾಳ
ಎರವಿನೆರವಿಗೆ ಬಂದವಳು
ಕಾಳ ರಾತ್ರಿಯ ಗಣಿಕೆ
ಚಾಕು ಚೈನಿಗೂ ಮೆದು ಹಿಡಿಕೆ.

ಈ ಕೂಡಿಕೆಯು
ಬೀದಿ ಗಬ್ಬಿನ ಗಬ್ಬದಲಿ
ನವಜಾತ ಶಿಶು ಕಂಡದ್ದು
ಥರಾವರಿ ಕನಸು.

ಠೇಂಕಾರದೊಂದು ಕತ್ತಿಗೂಟವೆ ನಿಮಿರಿ ನಿಂತು
ತನ್ನ ಕತ್ತನೆ ಒಡ್ಡಿ, ಬಡ್ಡಿ ತೆತ್ತರೂ
ಸಾಲಕ್ಕೆ ಕಚಕ್ಕನೆ ಕತ್ತರಿಸುತ್ತಿದೆ
ಕರುಳ ನೂಲು
ಕೊರಳು ಹಾಡುತ್ತಿದೆ ಸಿಕ್ಕ ಸಿಕ್ಕ ಹಾಡು.

ಬ್ರೇಕ್ ಡ್ಯಾನ್ಸಿನ ಮಮ್ಮಿತಾಯಿ
ರಂಗೇರಿ ಕುಣಿವಾಗ
ಕಂದ ಅತ್ತವನ ಸಂತೈಸಲಾರ
ತಂದೆ ಎಂಬ ಡ್ಯಾಡಿ
ಅಪ್ಪ ಅಮ್ಮನ ಮಗ
ಎಲ್ಲವನ ನೊಗ
ಪಟಗಾಣಿ, ಮೂಗುದಾರವೆ ಇರದೆ
ಹುಚ್ಚೆದ್ದ ರೊಚ್ಚಿಗೆ ಕುಣಿವ
ಇರುಳ ಬೆಡಗು.

ನಾನೊಬ್ಬ ಮೂರ್ಖನಿರಬಹುದೆ
ಈ ಭೂಮಿಯು, ಈ ಪರಿಯು
ಜೀವ ಜಾಲದ ಗುರಿಯು
ಹುಡುಕುತ್ತ ಕುಂತಿದ್ದೇನೆ
ಹೌದೆ !

ನನಗೂ ಹತ್ತುತ್ತಿದೆ ಅಮಲು
ಸುತ್ತಿ ರುಮಾಲು
ಬಿಗಿದ ಕಚ್ಚೆ ಸಡಿಲು
ಧಿಕ್ ಧಿಕ್ ಹೆಜ್ಜೆ ಇಡಲು
ಧರೆ ಹತ್ತಿ ಧರೆ ಸುತ್ತಿ ಸಿಡಿಲು
ಅಧರೆ ಮುತ್ತಿ ಮುತ್ತುತ್ತಿರಲು
ಹೊಗೆ ಪರ್ವತ ಘುಮಲು
ಬೆಂಕಿ ಇರಲೇ ಬೇಕೆಂಬುದೇನು
ತರ್ಕದೂಹೆ
ಚಿಂತಾಗ್ನಿ ಮಥನಾನಂತರವು
ಅಗ್ನಿ ಸದ್ಯೋಜಾತ.

ಬಳಲಿದರೂ ಭಸ್ಮ ವಿಶಿಷ್ಟ ನೃತ್ಯಕ್ಕಿನ್ನು ಮುಕ್ಕಣ್ಣೂ ಸಾಲದು
ನಿನ್ನ ಮಾತ್ತಿನ ಲೀಲೆ ಮತ್ತೆ ಮತ್ತೆ ಭವಿಷ್ಯ ಕೆತ್ತಿದ ಸನದು.

—ಚಂದ್ರಶೇಖರ ಕಾಳ್ಯ

೧. ಪಾಕ

ಕುಟ್ಟುತ್ತೇನೆ ಬೀಸುತ್ತೇನೆ
ಹೊಟ್ಟು ಗೇರಿ ಸೋಸುತ್ತೇನೆ
ಲಕ್ಷದಕ್ಷರ ರಾಶಿ ಬೆಳೆಯಲಾಯಿತೆ.

ಕೊಳಗ ಹಚ್ಚಿ ಅಳೆದು ಸುರಿದು
ತಳಮಳಿಸುವೆಸರಿನಲ್ಲಿ
ಒಲೆಯನೂದಿ ಉರಿಸುತ್ತೇನೆ ಮರಳತೊಡಗಿತೇ

ಬೆಂದೂ ಬೇಯದ ಬೇಳೆ
ಹೊಗೆಯ ಹಾಸಿ ಮಲಗಿದೊಲೆ
ಬೆರೆಯಲೊಲ್ಲದು ಬೆಲ್ಲ ತಿರುಳಿನೋದಿಗೆ

ತುರಿದು ಹುರಿದ ಕೊಬರಿಯಿಕ್ಕಿ
ಹಿರಿದ ಸೌಂಟು ಮಗುಚಿ ಎತ್ತಿ
ಒರಳಿಗಿಕ್ಕಿ ತಿರುವುತ್ತೇನೆ ನುರಿಯುತಿಲ್ಲವೆ

ತಿರುಗಲೊಲ್ಲದು ಕಲ್ಲು
ಎಳೆಯಲಾರದು ತೋಳು
ಬೆವರು ಕಿತ್ತು ಹರಿಯಿತೆಷ್ಟೊ ತಿಳಿಯಲಾರದು

ಕಣಕದಿಂದ ಒಳಗು ಮುಚ್ಚಿ
ಹೊರಗೆ ಚಂದ ಲಟ್ಟಣಿಸಿ
ಕೊನೆಯ ಕಾವಲಿಯಲ್ಲಿ ಬೇಯ ಹಚ್ಚಿದೆ

ಹಸಿಯು ಬೆಂದಾರಲಿಲ್ಲ
ಬಿಸಿಯ ಬಿಟ್ಟೇಳಲಿಲ್ಲ
ಎತ್ತಲೆಂದ ಕೈಗೆ ಬಂತು ಮೇಣದುಂಡೆಯು

ಬಾಳೆಗಿಡಲೆ ಬಾಯಿಗಿಡಲೆ ?
ನಾಯಿಯೆದುರು ಒಗೆದುಕೊಡಲೆ ?
ಕಿಟ್ಟ ಅಡಿಗೆ ಅಟ್ಟು ಬಡಿಸಿ ಜಾಣೆಯಾಗಲೆ ?

ಬೇಳೆ ಯಾಕೊ ಬೆಲ್ಲವ್ಯಾಕೊ ?
ಬಾಳಿನೊರಳು ಕಲ್ಲಿದ್ಯಾಕೊ ?
ತಿರುವಲ್ಯಾಕೊ ತಿನ್ನಲ್ಯಾಕೊ ? ಕೇಳಬಾರದು

ಮಾರ್ಚ್-ಏಪ್ರಿಲ್ ೧೯೯೪/೧೭

ನುರಿದು ನುರಿಯುದಂಥ ಪಾಡು
ಆರಿದು ನುರಿಯುದಂಥ ಜಾಡು
ತಿಳಿವು ತನ್ನೆದೆಯು ಕದವ ತೆರೆಯಲೊಲ್ಲದು ○

ಗಡಿಯವ್ವ

ಹೆತ್ತಿದ್ದು ಒಂದೆರಡೆ ?
ನಾಲ್ಕುಕೋಟಿ ಆದರೆ
ಪ್ರತಿಯೊಂದೂ
ಏಳಕ್ಕೆ ಇಳಿದ ಸೂಲು
ಬಳ್ಳಿ ಕೈಕಾಲು
ಬಳುಕುವ ಬೆನ್ನು ಹುರಿ
ನೆತ್ತಿಯಂತೂ ಅತ್ತೀಹಣ್ಣು ?
ದನಿಯಲ್ಲದ ದನಿ ತೆಗೆದು
ಬುದ್ಬುದಗಳು ಅತ್ತಾಗ
ಮೈಮುರಿದು ಮೇಲೆದ್ದ ಅವ್ವ
ಅಸಂಖ್ಯ ತೋಳುಗಳಿಂದ
ಎದೆಗೊತ್ತಿ ಹಾಲೂಡಿಸಿ
ಒಂದೊಂದಕ್ಕೂ ಉಸಿರಾಗಿ
ಉಸಿರಿಡುತ್ತಾಳೆ
ನಿಃಶಕ್ತ ಪಿಂಡಗಳ ಕೈಕಾಲು ನೀವಿ
ನೀರೆರೆದು ಲಾಲಿ ತೂಗುತ್ತಾಳೆ
ತನ್ನ ಜೀವದ ಶಬ್ದ ಭಾವವನ್ನಷ್ಟೂ
ನಿಃಶಬ್ದದೆದೆಗೆ ಗುದ್ದಿಸುತ್ತಾಳೆ
ಆದರೆ–
ಅನ್ನವಿಕ್ಕಿದ ಮನೆಗೆ ಕನ್ನ ಹಾಕುವ ಕಾಯಕ
ಅವಳಿಗೆ ಗೊತ್ತಿರಲಿಲ್ಲ.

ಹಡೆದವ್ವನ ಒಡಲ ಹರಾಜು ಹಾಕುವ ಹುನ್ನಾರು
ಅವಳು ಕಂಡಿರಲಿಲ್ಲ.
ಗಡಿಯುವ್ಮನ ಪಡೆ ನುಗ್ಗಿ
ಮನೆ ತುಂಬ ಹರಕು ಮೊರ ಪೊರಕೆ
ಅಡ್ಡಾದಿಡ್ಡಿ ಹಾರಾಡುವದ ಕಾಣಬೇಕಿರಲಿಲ್ಲ
ಕೆನ್ನೆಗೆ ಕೈ ಅಡ್ಡ ಹಿಡಿದು
ತಲೆ ತುಂಬ ಸೆರಗು ಎಳೆದು
ಕೂಗುತ್ತಾಳೆ ಅವ್ವ–ಮಕ್ಕಳೇ ಮುದ್ದು ಮಕ್ಕಳೇ
ಮಲತಾಯಿಯೆದೆಯಲ್ಲಿ ಹಾಲಿಲ್ಲ ಕಾಣಿರೊ–ಕಾಣಿರೊ
ಸಾಗರದಪಾರ ನೀರು ಬಾಯಾರಿಕೆಗೆ ಸಲ್ಲ ಕೇಳಿರೊ–ಕೇಳಿರೊ
ಬೀದಿಯ ಮೆರವಣಿಗೆ
ಬರೀ ಉರವಣಿಗೆ ತಿಳಿಯಿರೊ–ತಿಳಿಯಿರೋ
ನೀವು ನಿಮಗಾಗಿ–ನೀವು ನೀವಾಗಿ
ನನ್ನೆದೆಯ ಅಂಗಳಕೆ ಬನ್ನಿರೊ–ಬನ್ನಿರೊ
ಅವ್ವ ಕರೆಯುತ್ತೇನೆ ಬನ್ನಿರೊ–ಬನ್ನಿರೊ
ನಿರಭಿಮಾನದ ಪೊರೆಯ ಕಿತ್ತೊಗೆದು
ಬನ್ನಿರೊ–ಬನ್ನಿರೊ
ಬನ್ನಿರೊ–ಬನ್ನಿರೊ–ಬನ್ನಿರೊ.

—ಭಾಗೀರಥಿ ಹೆಗಡೆ

ಪ್ರಯೋಗಾರಂಭ....

-ಗಿಜುಭಾಯಿ ಬಧೇಕಾ

ನಾನು ಈ ಬಗ್ಗೆ ಸಾಕಷ್ಟು ಓದಿದ್ದು ಯೋಚಿಸಿದ್ದು ಮಾಡಿದ್ದೆನಲ್ಲದೆ ನನಗೆ ಆಚರಣೆಯ ಅನುಭವವಿರಲಿಲ್ಲ. ಈ ಚಿಂತನೆಗಳ ಪ್ರಾಯೋಗಿಕ ಅನುಭವವನ್ನು ಪಡೆದುಕೊಳ್ಳಬೇಕೆನಿಸಿತು. ಹಾಗಾದಾಗ ಮಾತ್ರ ನನ್ನ ಯೋಚನೆಗಳು ಒಂದು ನಿರ್ದಿಷ್ಟ ರೂಪ ತಾಳಲು, ಮತ್ತು ಅವು ಪಕ್ವಗೊಳ್ಳಲು ಸಾಧ್ಯವಾಗುತ್ತದೆಂದು ಯೋಚಿಸಿದೆ. ಇಂಥ ಪ್ರಯೋಗದ ನೆಲೆಯಲ್ಲಿ ಮಾತ್ರ ಈ ಯೋಚನೆಗಳು ಸರಿಯಾದವುಗಳೇ ಅಥವಾ ಇವು ಬರೀ ಭ್ರಮಾತ್ಮಕವಾದ ಕಲ್ಪನೆಗಳೇ ಎನ್ನುವದು ನನಗೆ ತಿಳಿಯಲು ಸಾಧ್ಯವಿತ್ತು.

ನಾನು ಜಿಲ್ಲೆಯ ಶಿಕ್ಷಣ ಇಲಾಖೆಯ ಮುಖ್ಯಸ್ಥರನ್ನು ಭೆಟ್ಟಿಯಾಗಿ ನನ್ನ ಪ್ರಯೋಗಕ್ಕಾಗಿ ಪ್ರಾಥಮಿಕ ಶಾಲೆಯ ತರಗತಿಯೊಂದನ್ನು ನೀಡಬೇಕೆಂದು ವಿನಂತಿಸಿದೆ. ಆ ಶಿಕ್ಷಣಾಧಿಕಾರಿಗಳು ನಕ್ಕು ಬಿಟ್ಟು "ಈ ಸುದ್ದೀ ಬಿಟ್ಟು ಬಿಡಿ. ಏನು ಮಾಡಲೂ ಆಗುವುದಿಲ್ಲ. ಹುಡುಗರುಗಳಿಗೆ ಕಲಿಸುವುದು–ಅದೂ ಪ್ರಾಥಮಿಕ ಶಾಲೆಯ ಹುಡುಗಣ್ಣಗಳಿಗೆ ಕಲಿಸುವುದೆಂದರೆ ಅದೇನೂ ತಮಾಷೆಯಲ್ಲ. ಭಯಂಕರ ವಾದದ್ದದು. ನೀವು ಬರಹಗಾರರು–ಚಿಂತಕರು ಹೌದು. ಆದರೆ ಆರಾಮವಾಗಿ ಟೇಬಲ್ಲಿನ ಮುಂದೆ ಕುಳಿತುಕೊಂಡು ಲೇಖನವೊಂದನ್ನು ಗೀಚಿ ಬಿಸಾಕುವಂಥ ಸುಲಭದ ಕೆಲಸ ಅಲ್ಲ ಇದು. ನಿಮ್ಮಷ್ಟಕ್ಕೆ ನೀವೇ ಈ ಕಲಿಸುವ ಬಗೆಗಿನ ಕಲ್ಪನೆ ಹೆಣೆಯು ವದು ಸುಲಭದ ಕೆಲಸ. ಆದರೆ ನಿಮ್ಮ ಯೋಚನೆಗಳನ್ನು ಆಚರಣೆಗಿಳಿಸಿ ಪ್ರಯೋಗ ನಡೆಸುವದು ಮಾತ್ರ ಅತ್ಯಂತ ಕಠಿಣವಾದ ಕೆಲಸ."

"ಅದಕ್ಕೇ ನಾನು ಈ ಪ್ರಯೋಗ ನಡೆಸಿಯೇ ತಿಳಿದುಕೊಳ್ಳಬೇಕೆಂದಿರುವದು. ನಾನು ವಾಸ್ತವದ ನೆಲೆಗಟ್ಟಿನ ಮೇಲೆ ನಿರ್ಧಾರಗಳನ್ನು ತಲುಪಬೇಕಾಗಿದೆ." ಎಂದೆ. ಅಂತೂ ಕೊನೆಗೆ ಶಿಕ್ಷಣಾಧಿಕಾರಿಗಳು ಒಪ್ಪಿದರು. "ಆಯ್ತು. ನಿಮಗೆ ಇಷ್ಟೊಂದು ಆಸಕ್ತಿ ಇದೆ ಎಂದಾದರೆ ಒಂದು ವರ್ಷ ಪ್ರಯತ್ನಿಸಿಯೇ ಬಿಡಿ. ನಾನು ನಿಮಗೆ ಒಂದು ಶಾಲೆಯಲ್ಲಿನ ನಾಲ್ಕನೆಯ ತರಗತಿಯನ್ನು ಒದಗಿಸುತ್ತೇನೆ. ಇದು ತಗೊಳ್ಳಿ ಇದು ಆ ತರಗತಿಯ ಪಠ್ಯಕ್ರಮ. ಇವು ಪಠ್ಯ ಪುಸ್ತಕಗಳು. ರಜೆಗೆ ಸಂಬಂಧಪಟ್ಟ ಮತ್ತು ಇತರ ಉಪಯುಕ್ತ ನಿಯಮಗಳ ಪ್ರತಿ ಇಲ್ಲಿದೆ ನೋಡಿ" ಎಂದು ಶಿಕ್ಷಣಾಧಿಕಾರಿಗಳು ಹೇಳಿ ಇವುಗಳನ್ನೆಲ್ಲ ಕೊಟ್ಟರು. ನಾನು ಆ ಕಾಗದಗಳನ್ನು ಗಂಭೀರವಾಗಿ ನೋಡಿದೆ. ಪಠ್ಯಕ್ರಮದ ಪ್ರತಿಯನ್ನು ಎತ್ತಿಕೊಂಡು ಮಡಿಚಿ ಜೇಬಿಗಿಳಿಸಿದೆ. ನಾನು ಪುಸ್ತಕಗಳನ್ನು ಕಟ್ಟಿಕೊಳ್ಳುತ್ತಿದ್ದಂತೆ ಆ ಶಿಕ್ಷಣಾಧಿಕಾರಿಗಳು "ನೋಡಿ....ಒಂದು ವಿಚಾರ. ನೀವು ನಿಮಗೆ ಬೇಕಾದ ಪ್ರಯೋಗವನ್ನು ಮಾಡಿಕೊಳ್ಳಿ. ಆದರೆ ವರ್ಷದ ಕೊನೆಯಲ್ಲಿ ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಯಥಾ ರೀತಿ ಪರೀಕ್ಷೆ ನಡೆಯುವದು. ನಿಮ್ಮ ಪ್ರಯೋಗದ ಯಶಸ್ಸನ್ನು ಈ ಪರೀಕ್ಷೆಯ ಪರಿಣಾಮದ ಆಧಾರದ ಮೇಲೆಯೇ ಲೆಕ್ಕ ಹಾಕಲಾಗುವದು" ಎಂದರು. ನಾನು "ಆಗಲಿ. ಆದರೆ ಒಂದು ವಿನಂತಿ ಇದೆ. ನನ್ನ ಸಾಧನೆಯನ್ನು ಪರೀಕ್ಷಿಸಲು ನೀವೇ ಸ್ವತಃ ಬರಬೇಕು. ನನಗೆ ಪ್ರಯೋಗ ನಡೆಸಲು ನೀವು ಅನುಮತಿ ನೀಡುತ್ತಿರುವಿರಿ. ಆದ್ದರಿಂದ ನಾನು ನನ್ನ ಕೆಲಸವನ್ನು ನಿಮಗೇ ತೋರಿಸಬೇಕಾದದ್ದು ನ್ಯಾಯ. ನನ್ನ ಪ್ರಯೋಗದ ಯಶಾಪಯಶ ಗಳೇನಿದ್ದರೂ ಅವುಗಳ ಕಾರಣಗಳನ್ನು ನೀವು ತಿಳಿಯಬಲ್ಲವರಾಗಿದ್ದೀರಿ ಎನ್ನುವದು ನನ್ನ ಭಾವನೆ" ಎಂದು ಹೇಳಿದೆ. ಶಿಕ್ಷಣಾಧಿಕಾರಿಗಳು ಮುಗುಳು ನಗೆಯ ಮೂಲಕ ತಮ್ಮ ಒಪ್ಪಿಗೆ ಸೂಚಿಸಿದರು. ನಾನು ಅವರಿಂದ ಬೀಳ್ಕೊಂಡು ಬಂದೆ.

●

ನಾನು ಪಠ್ಯಕ್ರಮವನ್ನು ಇಡಿಯಾಗಿ ಓದಿದೆ. ಸ್ವಲ್ಪ ಬದಲಾವಣೆಗಳನ್ನು ಅಳವಡಿಸಿದರೆ ಉತ್ತಮ ಎಂದು ನನಗನಿಸಿತು. ಪಠ್ಯಪುಸ್ತಕಗಳನ್ನೂ ಓದಿದೆ. ಅವು ಗಳಲ್ಲಿ ಉಪಯುಕ್ತವಾದದ್ದು ಯಾವುದು ನಿರುಪಯುಕ್ತವಾದದ್ದು ಯಾವುದು ಎನ್ನು ವದನ್ನು ನಾನು ಸುಲಭವಾಗಿ ಗುರುತಿಸಿಕೊಂಡೆ. ಅವುಗಳಲ್ಲಿ ಅಳವಡಿಸಿಕೊಳ್ಳ ಬಹುದಾದ ಬದಲಾವಣೆಗಳನ್ನು ಯೋಚಿಸಿದೆ. ಮೊದಲ ದಿನದಿಂದ ಕೊನೆಯ ದಿನದವರೆಗಿನ ನನ್ನ ಯೋಜನೆಯನ್ನು ಸಂಪೂರ್ಣವಾಗಿ ಚಿತ್ರಿಸಿಕೊಂಡೆ. ನಾನು ಪರೀಕ್ಷೆಗಾಗಿ ಬೇಕಾಗುವ, ಪರಿಣಾಮ ಸಿದ್ಧಗೊಳಿಸಲು ಬೇಕಾಗುವ ದಿನಗಳ ಲೆಕ್ಕಹಾಕಿ

ಕೆಲಸಕ್ಕೆ ದೊರೆಯುವ ದಿನಗಳು ಇಷ್ಟು, ನಾನು ಅನುಸರಿಸಬೇಕಾದ ಕ್ರಮ ಹೀಗೆ ಮತ್ತು ಅದರಿಂದ ದೊರೆಯುವ ಪ್ರಯೋಜನ ಹೀಗೆ–ಎಂದು ಒಟ್ಟು ಯೋಜನೆ ಸಿದ್ಧಪಡಿಸಿದೆ. ನಾನು ನನ್ನ ಈ ಚಿಂತನೆಗಳಲ್ಲಿ ಎಷ್ಟು ಮುಳುಗಿ ಹೋಗಿದ್ದೆನೆಂದರೆ–ರಾತ್ರಿ ಎರಡು ಗಂಟೆಯಾದದ್ದೂ ನನ್ನ ಗಮನಕ್ಕೆ ಬಂದಿರಲಿಲ್ಲ. ನಾನು ಮರುದಿನಕ್ಕಾಗಿ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಂಡೆ. ಬೆಳಗಿನ ಮೂರುಗಂಟೆಯಷ್ಟೊತ್ತಿಗೆ ಮಲಗಿಕೊಂಡೆ.

ಬೆಳಿಗ್ಗೆ ಎದ್ದಾಗ ನನ್ನಲ್ಲಿ ಉತ್ಸಾಹ, ಆತ್ಮವಿಶ್ವಾಸ ತುಂಬಿದ್ದವು. ಏನನ್ನೋ ಮಹತ್ವವಾದದ್ದನ್ನು ಸಾಧಿಸುವ ಭಾವನೆ ನನ್ನಲ್ಲಿ ತುಂಬಿತ್ತು. ಲಗುಬಗೆಯಿಂದ ಸ್ನಾನ ಮುಗಿಸಿ ಒಂದಿಷ್ಟು ಹೊಟ್ಟೆಗೆ ಹಾಕಿಕೊಂಡು ಸಾಕಷ್ಟು ಮೊದಲೇ ಮೂರನೆಯ ನಂಬರಿನ ಶಾಲೆಯನ್ನು ತಲುಪಿದೆ. ಶಾಲೆಯ ಗೇಟುಗಳು ಇನ್ನೂ ತೆರೆದಿರಲಿಲ್ಲ. ಪ್ರಧಾನ ಗುರುಗಳಿನ್ನೂ ಬಂದಿರಲಿಲ್ಲ. ಶಾಲೆಯ ಜವಾನನು ಶಾಲೆಯ ಬೀಗದ ಕೈಗಳನ್ನು ತರಲು ಅವರ ಮನೆಗೆ ಹೋಗಿದ್ದನು. ಮಕ್ಕಳು ಬಂದು ಶಾಲೆಯ ಮುಂದಿನ ರಸ್ತೆಯಲ್ಲಿ ಅತ್ತಿತ್ತ ಅಲೆದಾಡುತ್ತಿದ್ದರು.

ಶಾಲೆ ತೆರೆಯುವುದಕ್ಕೆ, ನಾನು ನನ್ನ ತರಗತಿ ತೆಗೆದುಕೊಂಡು, ನನ್ನ ಕೆಲಸ ಆರಂಭಿಸುವುದಕ್ಕೆ, ನನ್ನ ಹೊಸ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸುವುದಕ್ಕೆ, ತರಗತಿಯಲ್ಲಿನ ಪಾಠವು ಆಸಕ್ತಿದಾಯಕವಾಗುವಂತೆ ಮಾಡಿ ನನ್ನ ವಿದ್ಯಾರ್ಥಿಗಳ ಹೃದಯ ಗೆಲ್ಲುವುದಕ್ಕೆ ಹೀಗೆ ಎಲ್ಲದಕ್ಕೆ ನನ್ನಲ್ಲಿ ಕುತೂಹಲ ತುಂಬಿತ್ತು. ನನ್ನ ಎದೆ ಬಡಿದುಕೊಳ್ಳುತ್ತಿತ್ತು........ ಗಂಟೆ ಬಾರಿಸಿತು....ವಿದ್ಯಾರ್ಥಿಗಳು ತರಗತಿಗಳನ್ನು ಹೊಕ್ಕರು. ಮುಖ್ಯೋಪಾಧ್ಯಾಯರು ನನ್ನ ತರಗತಿಗೆ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳಿಗೆ ನನ್ನನ್ನು ಪರಿಚಯಿಸಿ "ಇಲ್ಲಿ ಕೇಳಿ....ಇನ್ನು ಇವರು, ಶ್ರೀ ಲಕ್ಷ್ಮೀರಾಂ–ನಿಮ್ಮ ತರಗತಿಯ ಉಪಾಧ್ಯಾಯರು. ಇವರು ಹೇಳಿದಂತೆ ಕೇಳಿರಿ. ತಂಟೆ ತರಲೆ ಮಾಡಿದರೆ ನೋಡಿ, ಸರಿಯಾಗಲಿಕ್ಕಿಲ್ಲ" ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ಮುಂದಿನ ಹನ್ನೆರಡು ತಿಂಗಳು ನನ್ನ ಪಾಲನೆಯಲ್ಲಿರಬೇಕಾದ ಮಕ್ಕಳನ್ನು ನೋಡಿದೆ. ಕೆಲವರು ಮುಗುಳ್ನಗುತ್ತಿದ್ದರೆ ಕೆಲವರು ಪರಸ್ಪರ ಕಣ್ಣು ಮಿಟುಕಿಸುತ್ತಿದ್ದರು. ಕೆಲವರು ಗಂಭೀರವಾಗಿ ತಲೆಯಾಡಿಸುತ್ತಿದ್ದರು. ಒಂದಿಬ್ಬರು ಹುಡುಗರು ತಮಾಷೆಯಿಂದೆನ್ನುವಂತೆ ನನ್ನನ್ನು ದಿಟ್ಟಿಸುತ್ತಿದ್ದರು. ಉಳಿದವರು ಏನೇನೂ ಹಚ್ಚಿಕೊಳ್ಳದೆ ನಿರುಂಬಳವಾಗಿದ್ದರು. ನಾನು ಅವರನ್ನು ನೋಡುತ್ತಿದ್ದಂತೆಯೇ–"ಈ ಹುಡುಗರಿಗೆ ಕಲಿಸುವದು ! ...ಈ ತಂಟೆಕೋರರಿಗೆ ! ಎನ್ನುವ ಭಾವನೆ ನನ್ನಲ್ಲಿ ಮೂಡಿತು. ಸ್ವಲ್ಪ ಹಿಂಜರಿಕೆ ಉಂಟಾಯಿ

ತಾದರೂ ಕೂಡಲೇ ಸಾವರಿಸಿಕೊಂಡೆ. "ಅಂಜುವಂಥದ್ದು ಏನೂ ಇಲ್ಲ" ಎಂದು ನನಗೆ ನಾನೇ ಹೇಳಿಕೊಂಡೆ. ಸ್ವಲ್ಪ ಸ್ವಲ್ಪವಾಗಿ ಗೆಲ್ಲಬಹುದು ಎಂದುಕೊಂಡೆ.

ನಾನು ರಾತ್ರಿ ಸಿದ್ಧಪಡಿಸಿಕೊಂಡ ಟಿಪ್ಪಣಿಯನ್ನು ಜೇಬಿನಿಂದ ಹೊರತೆಗೆದು ನಾನು ಆರಂಭಿಸಬೇಕಾದ ಚಟುವಟಿಕೆಗಳ ಪಟ್ಟಿಯನ್ನು ನೋಡಿಕೊಂಡೆ. ಮೊದಲನೆಯದು : ಮೌನದ ಆಟ; ನಂತರ: ತರಗತಿಯ ಸ್ವಚ್ಛತೆಯ ಪರಿವೀಕ್ಷಣೆ; ಆ ನಂತರ: ಸಾಮೂಹಿಕ ಗೀತೆ, ಮತ್ತು ಕೊನೆಯದಾಗಿ: ವಿದ್ಯಾರ್ಥಿಗಳೊಂದಿಗೆ ಒಂದಿಷ್ಟು ಸಂಭಾಷಣೆ. ಸರಿ, ನಾನು ವಿದ್ಯಾರ್ಥಿಗಳಿಗೆ "ಈಗ ಒಂದು ಆಟ. 'ಮೌನದ ಆಟ', ನಾನು 'ಓಂ ಶಾಂತಿ' ಎನ್ನುತ್ತಿದ್ದಂತೆಯೇ ನೀವೆಲ್ಲರೂ ಸಂಪೂರ್ಣವಾಗಿ ಮೌನದಿಂದಿರಬೇಕು. ನಾನು ಬಾಗಿಲು ಮುಚ್ಚುತ್ತೇನೆ. ತರಗತಿಯಲ್ಲಿ ಮಂದ ಬೆಳಕಿರುತ್ತದೆ. ನಾವೆಲ್ಲರೂ ಮೌನವಾಗಿ ಶಾಂತರಾಗಿರುವುದರಿಂದ ಹೊರಗಿನ ಶಬ್ದಗಳನ್ನು ಕೇಳುತ್ತೇವೆ. ಈ ಆಟ ತುಂಬ ಮಜವಾಗಿರುತ್ತದೆ. ನೀವು ನಿಮ್ಮ ಸಮೀಪ ಹಾರಾಡುವ ನೊಣಗಳ ಗುಂಯ್ ಗುಟ್ಟುವಿಕೆಯನ್ನು, ನಿಮ್ಮ ಉಸಿರಾಟದ ಸದ್ದನ್ನೂ ಕೇಳಬಹುದು, ಆ ನಂತರ ನಾನು ಒಂದು ಹಾಡು ಹೇಳುತ್ತೇನೆ. ನೀವು ಆ ಹಾಡನ್ನು ಕೇಳುವಿರಂತೆ" ಎಂದು ಹೇಳಿ ಮುಗಿಸಿ ಆಟದ ಆರಂಭವನ್ನು ಘೋಷಿಸಿದೆ.... "ಓಂ ಶಾಂತಿಃ"....ಆದರೆ ವಿದ್ಯಾರ್ಥಿಗಳು ಮಾತಾಡುವದನ್ನು, ಒಬ್ಬರನ್ನು ಒಬ್ಬರು ಎಳೆದಾಡುವುದನ್ನು ಮುಂದುವರಿಸಿದರು....ನಾನು ಮತ್ತೆ ಮತ್ತೆ "ಓಂ ಶಾಂತಿಃ" ಎಂದು ಆರಂಭವನ್ನು ಘೋಷಿಸಿದೆ. ಆದರೆ ಪರಿಣಾಮ ಮಾತ್ರ ಶೂನ್ಯ! ನನಗೆ ಗೊಂದಲವುಂಟಾಯಿತು. ಅವರನ್ನು ಬೆದರಿಸಿ ಬಾಯಿಮುಚ್ಚಿಕೊಳ್ಳಲು, ಸರಿಯಾಗಿ ನಡೆದುಕೊಳ್ಳಲು ತಿಳಿಸಲು ನನಗೆ ಸಾಧ್ಯವಾಗಲಿಲ್ಲ. ಏಟು ಕೊಟ್ಟು ವಿಧೇಯತೆ ಕಲಿಸುವುದು ನನಗೆ ಬೇಕಿರಲಿಲ್ಲ. ಆದ್ದರಿಂದ ನಾನು ಮೌನದ ಆಟವನ್ನು ಮುಂದುವರಿಸಿದೆ! ಬಾಗಿಲು ಕಿಟಕಿಗಳನ್ನು ಮುಚ್ಚಿದೆ. ತರಗತಿಯಲ್ಲಿ ಕತ್ತಲು ಆವರಿಸಿತು. ವಿದ್ಯಾರ್ಥಿಗಳು ತಮ್ಮದೇ ಆಟಗಳನ್ನು ಆರಂಭಿಸಿದರು. ಕೆಲವರು ಸಣ್ಣ ದನಿಯಲ್ಲಿ ಆಲಾಪ ಮಾಡತೊಡಗಿದರು. ಕೆಲವರು 'ಮಿಯಾಂವ್' ಎಂದು ಧ್ವನಿ ಹೊರಡಿಸಿದರು. ಕೆಲವರು ಧಪಧಪ ಎಂದು ನೆಲ ಒದೆಯತೊಡಗಿದರು. ಯಾವನೋ ಒಬ್ಬ ಚಪ್ಪಾಳೆ ತಟ್ಟಿದ. ಕೂಡಲೇ ಉಳಿದವರೂ ಅವನನ್ನು ಅನುಸರಿಸಿದರು. ಯಾವನೋ ಒಬ್ಬ ನಕ್ಕ. ಇಡೀ ತರಗತಿಯೇ 'ಹೋ' ಎಂದು ನಕ್ಕಿತು. ನನಗೆ ದಿಕ್ಕೇ ತೋಚದಂತಾಯಿತು. ಬಾಯಿ ಒಣಗಿದಂತಾಯಿತು. ಬಾಗಿಲು ಕಿಟಕಿಗಳನ್ನೆಲ್ಲ ತೆರೆದು ಒಂದು ಕ್ಷಣ ತರಗತಿಯ ಹೊರಗೆ ಹೋದೆ. ಮರಳಿ ತರಗತಿಯೊಳಗೆ ಬಂದಾಗ ಇಡೀ ತರಗತಿಯೇ ಗಲಾಟೆಯಿಂದ ತುಂಬಿಬಿಟ್ಟಿತ್ತು. ಹುಡುಗರು "ಓಂ ಶಾಂತಿ"

ಎಂದು ಒಬ್ಬರಿಗೊಬ್ಬರು ಹೇಳುತ್ತ ನನ್ನನ್ನು ತಪಾಷೆ ಮಾಡುತ್ತಿದ್ದರು. ಒಂದಿಷ್ಟು ಹುಡುಗರು ಕಿಡಕಿಯ ಬಾಗಿಲುಗಳನ್ನು ಮುಚ್ಚುತ್ತಿದ್ದರು.

ನನ್ನ ಟಿಪ್ಪಣಿಗಳು ನಿಷ್ಪ್ರಯೋಜಕವಾಗುತ್ತಿವೆ ಎನ್ನಿಸಿತು. ಮನೆಯಲ್ಲಿ ಕುಳಿತುಕೊಂಡು ಕಲಿಸುವ ಬಗ್ಗೆ ಕಲ್ಪನೆಗಳನ್ನು ಹೆಣೆಯುವುದು, ಟಿಪ್ಪಣಿ ತಯಾರಿಸುವುದು ಸುಲಭ; ಆದರೆ ಆಚರಣೆ ತುಂಬ ಕಠಿಣ. ಸಂಪೂರ್ಣವಾಗಿ ಗದ್ದಲ ಮತ್ತು ಅನಿಯಂತ್ರಣದ ವಾತಾವರಣದಲ್ಲಿ ಬೆಳೆದು ಬಂದ ಇಂಥ ಹುಡುಗರೊಂದಿಗೆ ಮೌನದ ಆಟದ ಪ್ರಯೋಗವೇ ಅಸಂಬದ್ಧವಾದದ್ದು. ನಾನು ಎಲ್ಲಿ ತಪ್ಪಿದ್ದೇನೆಯೋ ಅಲ್ಲಿಂದ ಹೊಸದಾಗಿ ಆರಂಭಿಸಬೇಕು, ನನ್ನ ಮೊದಲ ಹೆಜ್ಜೆಯಲ್ಲಿಯೇ ನಾನು ಜಾರುವಂತಾದುದು ಒಳ್ಳೆಯದೇ ಆಯಿತು.....ನಾಳೆಯಿಂದ ಹೊಸ ರೀತಿಯ ಪ್ರಯತ್ನ ಮಾಡಬೇಕು ಎಂದು ದೀರ್ಘವಾಗಿ ಯೋಚಿಸಿದ. ಆಮೇಲೆ, "ಇಲ್ಲಿ ಕೇಳಿ....ಇವತ್ತಿಗ ನಿಮ್ಮ ಪಾಠ ಮುಗಿಯಿತು. ನಾಳೆ ಬನ್ನಿ, ಇವತ್ತಿಗೆ ನಿಮಗೆ ರಜೆ..." ಎಂದು ಹೇಳಿದೆ. 'ರಜೆ' ಎನ್ನುವ ಶಬ್ದ ಕೇಳುತ್ತಿದ್ದಂತೆಯೇ ಹುಡುಗರೆಲ್ಲ ರಜೆ–ರಜೆ–ಎಂದು ಕಿರಿಚಿಕೊಳ್ಳುತ್ತ ತರಗತಿಯ ಹೊರಗೆ ಧುಮುಕಿದರು. ಅವರು ನೆಗೆದಾಡುತ್ತ ಕಿರಿಚಾಡುತ್ತ ಓಡಿಹೋಗುತ್ತಿದ್ದರೆ ಬೇರೆ ತರಗತಿಗಳಲ್ಲಿನ ಹುಡುಗರು ಅಧ್ಯಾಪಕರು ಏನು ವಿಷಯ...ಎನ್ನುವಂತೆ ಆಶ್ಚರ್ಯದಿಂದ ಕಣ್ಣು ಕಣ್ಣು ಬಿಡುತ್ತಿದ್ದರು. ಹೆಡ್‌ಮಾಸ್ತರರು ತಮ್ಮ ಕೊಠಡಿಯಿಂದ ಹೊರಗೆ ಬಂದು "ಇನ್ನೂ ಎರಡು ತಾಸುಗಳಷ್ಟು ಶಾಲೆ ಇದೆ....ನೀವು ಹುಡುಗರನ್ನು ಹೇಗೆ ಕಳಿಸಿಬಿಟ್ಟಿರಿ ?" ಎಂದು ನನ್ನತ್ತ ಕೂಗಿಕೊಂಡರು. ಅವರು ಕಿಡಿಕಿಡಿಯಾಗಿದ್ದರು. "ವಿದ್ಯಾರ್ಥಿಗಳು ಕಲಿಯುವ ಮನಸ್ಸು ಹೊಂದಿರಲೇ ಇಲ್ಲ. ಅವರಲ್ಲಿ ಗೊಂದಲ ಮೂಡಿಬಿಟ್ಟಿತ್ತು. 'ಮೌನದ ಆಟ' ಆರಂಭಿಸುತ್ತಿದ್ದಂತೆಯೇ ನನಗೆ ಇದು ಸ್ಪಷ್ಟವಾಯಿತು....ಅದಕ್ಕೇ ಅವರನ್ನು ಕಳಿಸಿಬಿಟ್ಟೆ" ಎಂದು ಹೇಳಿದೆ. ಹೆಡ್ ಮಾಸ್ತರರು–"ನೋಡಿ, ನನ್ನ ಅಪ್ಪಣೆಯಿಲ್ಲದೇ ನೀವು ವಿದ್ಯಾರ್ಥಿಗಳನ್ನು ಹೀಗೆ ಕಳಿಸಿಬಿಡಕೂಡದು. ನಿಮ್ಮ ತರಗತಿಯ ಹುಡುಗರನ್ನು ಹೀಗೆ ಕಳಿಸಿಬಿಟ್ಟರೆ ಬೇರೆ ತರಗತಿಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಅವರು ಕಲಿಯುವುದು ಸಾಧ್ಯವಾಗುವುದಿಲ್ಲ..." ಎಂದು ಬಿರುಸಾಗಿ ಹೇಳಿದರು. ಆಮೇಲೆ ಅವರು ಸ್ವಲ್ಪ ವ್ಯಂಗ್ಯದಿಂದ "ಇಲ್ಲಿ ನೋಡಿ...ಕಲಿಯುವ ಮನಸ್ಸು....ಇತ್ಯಾದಿ ಇಂತಹ ನಿಮ್ಮ ಭ್ರಮೆಗಳನ್ನು ಗಂಟು ಕಟ್ಟಿಡಿ. ಮಾಂಟೆಸ್ಸರಿ ಶಾಲೆಗಳಲ್ಲಿ ಮೌನದ ಆಟ ಇತ್ಯಾದಿ ನಡೆಯಬಹುದು. ಇಲ್ಲಿ ಇಂಥಾ ಪ್ರಾಥಮಿಕ ಶಾಲೆಗಳೊಳಗೆ ಕೆನ್ನೆಗೆ ಒಂದು ಏಟು ಕೊಟ್ಟರೆ ವಿದ್ಯಾರ್ಥಿಗಳು ಶಾಂತರಾಗುತ್ತಾರೆ. ನೀವೂ ಬೇರೆ ಅಧ್ಯಾಪಕರಂತೆ ಕಲಿಸುವ ಹಾದಿಯನ್ನ ಹಿಡಿಯಿರಿ. ಅಂದರೆ ಪರೀಕ್ಷೆಯಲ್ಲಿ ಒಂದಿಷ್ಟು

ಒಳ್ಳೆಯ ಫಲಿತಾಂಶ ಬರಬಹುದು. ಈಗಂತೂ ಒಂದು ದಿನ ಕಳಕೊಂಡು ಪೆದ್ದುತನ ತೋರಿಸಿಬಿಟ್ಟಿರಿ" ಎಂದು ನನ್ನನ್ನು ಉದ್ದೇಶಿಸಿ ಉಪದೇಶದ ಭಾಷಣ ಬಿಗಿದರು.

ನನಗೆ ಹೆಡ್‌ಮಾಸ್ಟರರ ಮಾತಿನಿಂದ ವಿಷಾದವೆನಿಸಿತು. "ಸರ್.... ಎಲ್ಲರೂ ಹೀಗೆ ಹೊಡೆಯುವ ರೀತಿಯನ್ನೇ ಅನುಸರಿಸುವುದರಿಂದ ವಿದ್ಯಾರ್ಥಿಗಳು ವಿಷಮ ನಡವಳಿಕೆಯುವರು, ಒರಟರು, ಅಸಂತುಷ್ಟರು ಮತ್ತು ಸಂಯಮಹೀನರೂ ಆಗಿ ಹೋತಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ನನ್ನ ತರಗತಿಯ ವಿದ್ಯಾರ್ಥಿಗಳು ಕಲಿತದ್ದು ಇದನ್ನೇ. ಕೂಗಾಡುವದು–ಉಪಾಧ್ಯಾಯರನ್ನು ಕಂಡು ಸಿಳ್ಳೆ ಹೊಡೆಯುವುದು–ಕಾಲು ಅಪ್ಪಳಿಸುವುದು–ಚಪ್ಪಾಳೆ ತಟ್ಟುವುದು–ಇತ್ಯಾದಿ. ಅವರಿಗೆ ಶಾಲೆ ಎಂದರೇ ಅಪಥ್ಯ ! ಅನಿಷ್ಟ ! ... ನೋಡಿದಿರಲ್ಲ.... ರಜೆ ಎನ್ನುತ್ತಲೇ ಅವರೆಲ್ಲ ಅದೆಂತಹ ಖುಷಿಯಿಂದ ಓಡಿಹೋದರು" ಎಂದು ಹೇಳಿದೆ. ಮುಖ್ಯೋಪಾಧ್ಯಾಯರು ನನ್ನ ಮಾತಿನಲ್ಲಿರುವ ನಿಜವನ್ನು ನಿರಾಕರಿಸಲಾರದವರಾದರು. ಅವರು "ಓಹೋ ಹಾಗೋ ?.... ಸರಿ. ನೀವು ಇದನ್ನು ಹೇಗೆ ಸರಿಪಡಿಸುತ್ತೀರೆಂದು ನೋಡೋಣ" ಎಂದು ನುಡಿದು ಸುಮ್ಮನಾದರು.

●

ಸ್ವಲ್ಪ ನೊಂದು ಹೊಡೆದಂತಾಗಿ ಮನೆಗೆ ಮರಳಿದೆ.

ಈ ಕೆಲಸ ಸಾಕಷ್ಟು ಕಠಿಣವಾದದ್ದೇ ಎಂದೆಂದುಕೊಳ್ಳುತ್ತ ಕುಳಿತುಕೊಂಡೆ.... ನಿಜವಾಗಿಯೂ ಇದು ನಾನು ಅಂದುಕೊಂಡಂತೆ ಸುಲಭವಾಗಿ ನಡೆಯುವುದಿಲ್ಲ. ಇರಲಿ ನಾನು ಮಾತ್ರ ಇದನ್ನು ಬಿಟ್ಟುಕೊಡಲಾರೆ .. ಈ ಮೌನದ ಆಟವನ್ನು ಈ ರೀತಿಯಲ್ಲಿ ನಡೆಸಲಾಗದೆನ್ನುವುದು ನನಗೆ ಗೊತ್ತಿರಬೇಕಾಗಿತ್ತು. ಮಾಂಟೆಸ್ಸರಿ ಶಾಲೆಗಳಲ್ಲಿ ಈ ಮೌನದ ಆಟಕ್ಕಿಂತ ಮೊದಲು ಸಾಕಷ್ಟು ತಯಾರಿ ನಡೆಸಲಾಗಿರುತ್ತದೆ. ಇದನ್ನು ನಾನು ಮೊದಲ ದಿನವೇ ಇಟ್ಟುಕೊಂಡು ಮೂರ್ಖನಾದೆ ! ನಾನು ನನ್ನ ವಿದ್ಯಾರ್ಥಿಗಳನ್ನು ತಿಳಿದುಕೊಂಡು ಅವರೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಬೇಕಾಗಿತ್ತು. ಆಗ ಮಾತ್ರ ಅವರು ನನ್ನ ಸೂಚನೆಗಳನ್ನು ಕೇಳಿ ಅನುಸರಿಸುತ್ತಾರೆ. ಈ ಹುಡುಗರಿಗೋ ಶಾಲೆಯೇ ಬೇಡವಾಗಿದೆ. ರಜೆಗೆ ಹಪಾಹಿಸುವವರಾಗಿದ್ದಾರೆ. ಇವರೊಂದಿಗೆ ಕೆಲಸ ಮಾಡುವುದು ಸುಲಭವಲ್ಲ.... ಎಂದು ನಾನು ಯೋಚಿಸಿದೆ. ಮರುದಿನದ ಕೆಲಸದ ಬಗೆಗೆ ಯೋಜನೆಯೊಂದನ್ನು ಯೋಚಿಸಿ ಮಲಗಿಕೊಂಡೆ. ಆದಿನ ನಡೆದದ್ದನ್ನು, ಮರುದಿನದ ಕೆಲಸವನ್ನು ಕನಸುತ್ತ ರಾತ್ರಿಯನ್ನು ಕಳೆದೆ.

ನಾನು ಶಾಲೆಯನ್ನು ಪ್ರವೇಶಿಸಿದಾಗ ನನ್ನ ತರಗತಿಯ ಹುಡುಗರೆಲ್ಲ ನನ್ನ ಸುತ್ತಲೂ ಮುಗಿಬಿದ್ದು "ಸರ್ ...ಇವತ್ತೂ ರಜೆ ಕೊಡಿ ಸಾರ್" ಎಂದು ಕಿರುಚಿದರು. "ಆಗಲಿ.... ಇವತ್ತೂ ನಿಮಗೆ ರಜೆ ಕೊಡುತ್ತೇನೆ. ಆದರೆ ಇಡೀ ದಿನದ ರಜೆ ಅಲ್ಲ. ಕೊನೆಯ ಎರಡು ತಾಸಿಗೆ ರಜೆ. ಆದರೆ ಮೊದಲು ಒಂದು ಕಥೆ ಕೇಳಿರಿ. ನಾನು ಒಂದು ಕಥೆ ಹೇಳುತ್ತೇನೆ. ಆಮೇಲೆ ಉಳಿದ ಮಾತು" ಎಂದು ಹೇಳಿ, ಆ ನಂತರ ನನ್ನ ಕಥೆ ಆರಂಭಿಸಿದೆ....ಒಂದೂರಲ್ಲಿ ಒಬ್ಬ ರಾಜ ಇದ್ದ. ಅವನಿಗೆ ಏಳು ಜನ ರಾಣಿಯರು. ಪ್ರತಿಯೊಬ್ಬ ರಾಣಿಗೂ ಒಬ್ಬ ಮಗ ಒಬ್ಬ ಮಗಳು ...ಹುಡುಗರೆಲ್ಲ ಕಥೆ ಕೇಳಲು ನನ್ನ ಸುತ್ತಲೂ ಕುಳಿತುಕೊಂಡರು. ಹುಡುಗರು ಸರಿಯಾಗಿ ಕುಳಿತು ಕೊಳ್ಳಲಾರದೆ ಪರಸ್ಪರ ತಳ್ಳಾಡುತ್ತಿದ್ದರು. ನಾನು ಕಥೆ ನಿಲ್ಲಿಸಿ "ಇದು ಸರಿಯಲ್ಲ ನೋಡಿ. ನನ್ನ ಸುತ್ತಲೂ ಸರಿಯಾದ ಕ್ರಮದಲ್ಲ ಕುಳಿತುಕೊಳ್ಳಿರಿ" ಎಂದು ಹೇಳಿದಾಗ ಅವರು, ಸರ್ ಸರ್....ಕಥೆ ಹೇಳಿ.... ಮುಂದೇನಾಯಿತು ಸರ್.... ಎಂದು ಕೇಳತೊಡಗಿದರು. ನನ್ನ ಮುಖದ ಮೇಲೆ ಮುಗುಳುನಗೆ ಮೂಡಿತು. ನನಗೆ ಹಾದಿಯೊಂದು ಸಿಕ್ಕಂತಾಯಿತು....ಎಲ್ಲ ರಾಜಕುಮಾರಿಯರಿಗೂ ಅವರವರ ಅರಮನೆಗಳಿದ್ದವು. ಆ ಅರಮನೆಗಳ ಉದ್ಯಾನವನದಲ್ಲ ಏಳು ಏಳು ಮುತ್ತಿನ ಮರಗಳಿದ್ದವು.... ಎಲ್ಲ ವಿದ್ಯಾರ್ಥಿಗಳೂ ತಲ್ಲೀನರಾಗಿ ಕೇಳುತ್ತಿದ್ದಾರೆ. ಇಡೀ ತರಗತಿ ಶಾಂತವಾಗಿತ್ತು. ಒಂದಿನಿತೂ ಸದ್ದಿಂಬುದಿಲ್ಲ. ಅಂಥ ಸಂಪೂರ್ಣ ಸ್ತಬ್ಧತೆಯಿಂದ ಅಚ್ಚರಿಗೊಂಡ ಹೆಡ್‌ಮಾಸ್ಟರರು ಅಲ್ಲಿ ಏನಾಗುತ್ತಿದೆ ಎಂದು ನೋಡಲು ಬಂದರು. ಅವರು "ಕಥೆ ಹೇಳುತ್ತಿದ್ದೀರಾ ?" ಎಂದು ಕೇಳಿದರು. "ಹೌದು ಕಥೆ ಹೇಳುತ್ತಿದ್ದೇನೆ ಮತ್ತು ಜೊತೆ ಜೊತೆಗೇ ಹೊಸ ರೀತಿಯ ಮೌನದ ಆಟ"....ಎಂದು ಹೇಳಿದೆ. ಹೆಡ್ ಮಾಸ್ಟರರು ಮರಳಿದೊಡನೆ ನಾನು ನನ್ನ ಕಥೆಯನ್ನು ಮುಂದುವರಿಸಿದೆ. ಪಕ್ಕದ ಕೊಠಡಿಯಲ್ಲಿ ಸ್ವಲ್ಪ ಗಲಾಟೆಯಾಯಿತು. ನಾನು ವಿದ್ಯಾರ್ಥಿಗಳ ಗಮನವನ್ನು ಆ ಗಲಾಟೆಯತ್ತ ಸೆಳೆದು "ನೋಡಿ, ಪಕ್ಕದ ಕೊಠಡಿಯಲ್ಲಿನ ಸದ್ದು ನಮಗ ತೊಂದರೆ ಕೊಡುತ್ತದೆ ಅಲ್ಲವೆ ?" ಎಂದು ಕೇಳಿದಾಗ ಎಲ್ಲ ವಿದ್ಯಾರ್ಥಿಗಳೂ ಹೌದೆಂದು ಒಪ್ಪಿಕೊಂಡರು.

ಅರ್ಧದಷ್ಟು ಕಥೆ ಹೇಳಿ ನಿಲ್ಲಿಸಿ "ಈಗ ಹೇಳಿ. ನಿಮಗೆ ರಜೆ ಬೇಕಾದರೆ ನಾನು ಕಥೆಯನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ. ರಜೆ ಬೇಡವೆಂದಾದರೆ ಕಥೆಯನ್ನು ಮುಂದುವರಿಸೋಣ" ಎಂದು ಹೇಳಿದೆ. "ಇಲ್ಲ ಕಥೆ ಮುಂದುವರಿಸಿರಿ....ನಮಗೇನೂ ರಜೆ ಬೇಡ...." ಎಂದು ಎಲ್ಲರೂ ಒಕ್ಕೊರಲಿನಿಂದ ಹೇಳಿದರು. "ಹಾಗಾದರೆ ಸರಿ. ಕಥೆಯನ್ನು ಮುಂದುವರಿಸುತ್ತೇನೆ. ಆದರೆ ಅದಕ್ಕಿಂತ ಮೊದಲು ನಾವು ಒಂದಿಷ್ಟು

ಮಾತಾಡೋಣ. ಅದಾದಮೇಲೆ ಶಾಲೆ ಮುಗಿಯುವವರೆಗೆ ಕಥೆ ಹೇಳುತ್ತೇನೆ" ಎಂದೆ. ಒಬ್ಬ ಹುಡುಗ ಸಟಕ್ಕನೇ "ಸರ್....ಮಾತಾಡುವುದನ್ನ ನಾಳೆ ಮಾಡಬಹುದು. ಇವತ್ತು ಬರೀ ಕಥೆ ಹೇಳಿರಿ. ಇಲ್ಲವಾದರೆ ಕಥೆ ಅರ್ಧವಾಗಿಬಿಡುತ್ತದೆ" ಎಂದು ನುಡಿದ. ನಾನು, "ಈ ಕಥೆ ಬಹಳ ದೊಡ್ಡದು, ಇದು ಮುಗಿಯಲು ನಾಲ್ಕು ದಿನಗಳಾದರೂ ಬೇಕಾದೀತು" ಎಂದಾಗ ಹುಡುಗರು "ಅಬ್ಬಾ ಅಷ್ಟು ದೊಡ್ಡ ಕಥೆಯೇ ! ಹಾಗಾದರೆ ತುಂಬ ಚನ್ನಾಯಿತು" ಎಂದು ಕುತೂಹಲದ ಉದ್ಗಾರ ತೆಗೆದರು. ನಾನು ತರಗತಿಯ ಹಾಜರಾತಿ ಪುಸ್ತಕ ತೆಗೆದುಕೊಂಡು ವಿದ್ಯಾರ್ಥಿಗಳೆಲ್ಲರ ಹೆಸರುಗಳನ್ನು ಬರೆದೆ. ಅವರ ಹಾಜರಾತಿಯನ್ನು ಗುರುತಿಸಿದೆ. ಇವೆಲ್ಲ ಲಘುಬಗೆಯಿಂದ ನಡೆಯಿತು ಮತ್ತು ತರಗತಿಯ ಅಂದ ಒಂದಿನಿತೂ ಹಾಳಾಗಲಿಲ್ಲ. "ಪ್ರತಿದಿನವೂ ಮೊದಲು ಹಾಜರಾತಿ ಕರೆದು ಆಮೇಲೆ ಕಥೆ ಹೇಳುವುದು. ಆಗಬಹುದಲ್ಲವೇ...." ಎಂದು ನುಡಿದು ಮತ್ತೆ ಕಥೆಯನ್ನು ಮುಂದುವರಿಸಿದೆ. ಶಾಲೆಯ ಕೊನೆಯ ಗಂಟೆಯವರೆಗೂ ಕಥೆ ಹೇಳಿದೆ. ಶಾಲೆ ಮುಗಿಯಿತು. ಆದರೆ ಹುಡುಗರು ಎದ್ದೇಳುತ್ತಿಲ್ಲ ! ಅವರು ಕಥೆ ಕೇಳಲು ಇನ್ನೂ ಕುಳಿತುಕೊಳ್ಳಲು ಸಿದ್ಧರಾಗಿದ್ದರು. ನಾನು "ಸಾಕು ಸಾಕು....ನಾಳೆ ಮುಂದುವರಿಸುತ್ತೇನೆ. ಆದರೆ ಅದಕ್ಕಿಂತ ಮೊದಲು ಒಂದು ವಿಷಯದ ತೀರ್ಮಾನವಾಗಬೇಕಿದೆ. ...ಹೇಳಿ ನಾಳೆ ನಿಮಗೆ ರಜ ಬೇಕಲ್ಲವೇ ? ಅಥವಾ ರಜೆ ಬೇಡವೆಂದಾದರೆ ಕಥೆಯನ್ನು ಮುಂದುವರಿಸೋಣ" ಎಂದೆ. ಕಥೆ ಕಥೆ ಎಂದು ಎಲ್ಲ ಹುಡುಗರು ಕೂಗಿಕೊಂಡರು. ಅವರೆಲ್ಲ ತರಗತಿಯಿಂದ ಹೊರಗೆ ನಡೆದಾಗ ಪ್ರಾಂಗಣದಲ್ಲೆಲ್ಲ ಕಥೆ-ಕಥೆ....ಎನ್ನುವ ಶಬ್ದ ಅನುರಣನಗೊಂಡಿತು. ಅಬ್ಬಾ ! ಎಂದು ನಿಟ್ಟುಸಿರುಬಿಟ್ಟೆ. ದೇವರ ದಯದಿಂದ ಒಂದು ದಿನವನ್ನು ನಿಭಾಯಿಸಿದೆ....ಈ ಕಥೆ ಎನ್ನುವುದು ನಿಜವಾಗಿಯೂ ಜಾದೂ ಮಾಡಿಬಿಟ್ಟಿತು ! ಎಂದು ಸಮಾಧಾನ ತಾಳಿದೆ.

●

ಮರುದಿನ ತರಗತಿಯನ್ನು ಪ್ರವೇಶಿಸಿದಾಗ ಹುಡುಗರೆಲ್ಲ ನನ್ನ ಸುತ್ತ ಮುಗಿಬಿದ್ದರು. ಅವರು ಮುಗುಳುನಗೆ ಬೀರುತ್ತ ಸರ್....ಕಥೆ ಹೇಳಿ ಸರ್....ಎಂದು ದುಂಬಾಲುಬಿದ್ದರು. "ಮೊದಲು ಹಾಜರಾತಿ ಎಂದು ಹೇಳಿದ್ದೆನಲ್ಲ . .ಅದಾದಮೇಲೆ ನಾವು ಒಂದಿಷ್ಟು ಮಾತಾಡಿಯಾದಮೇಲೆ ಆ ನಂತರ ಕಥೆ" ಎಂದು ಹೇಳಿದೆ. ನಾನು ಒಂದು ಸೀಮೆಸುಣ್ಣದ ತುಂಡಿನಿಂದ ಕೊಠಡಿಯ ನೆಲದ ಮೇಲೆ ಒಂದು ದೊಡ್ಡ ವೃತ್ತವನ್ನು ಬರೆದೆ. "ಈ ವೃತ್ತದ ಹೊರಗೆ ಸರಿಯಾಗಿ ಕುಳಿತುಕೊಳ್ಳಿರಿ. ಪ್ರತಿದಿನ ಹೀಗೆಯೇ ಕುಳಿತುಕೊಳ್ಳಬೇಕು" ಎಂದು ಹೇಳಿ ನಾನೂ ಕುಳಿತುಕೊಂಡೆ. "ನಾನು

“ನಾನು ಕುಳಿತಂತೆ ಹೀಗೆ ನೀವೂ ಕುಳಿತುಕೊಳ್ಳಿರಿ....ನಾನು ಇಲ್ಲಿ ಕುಳಿತಿರುತ್ತೇನೆ....” ಎಂದಾಗ ಅವರೆಲ್ಲ ನಾನು ಹೇಳಿದಂತೆ ಕುಳಿತುಕೊಂಡರು. ನಾನು ಹಾಜರಿ ಹಾಕಿದೆ. ಕಥೆ ಹೇಳಲು ಆರಂಭಿಸಿದೆ. ಅವರು ತಲ್ಲೀನರಾಗಿ ಕೇಳತೊಡಗಿದರು. ಹೀಗಿರುವಾಗ ನಾನು ಒಮ್ಮೆ ಕಥೆ ನಿಲ್ಲಿಸಿ “ನಿಮಗೆ ಕಥೆ ಎಂದರೆ ಇಷ್ಟವಾ ?” ಎಂದೆ. “ಹೌದೂ ಸಾರ್....ತುಂಬಾ ಇಷ್ಟ” ಎಂದು ಅವರೆಲ್ಲ ಒಟ್ಟಾಗಿ ಹೇಳಿದರು. “ನಿಮಗೆ ಕಥೆ ಕೇಳುವದು ಮಾತ್ರ ಇಷ್ಟವೋ ಅಥವಾ ಓದುವದೂ ಇಷ್ಟವಾಗುತ್ತದೆಯೋ ?” ಎಂದಾಗ “ಹೌದು ಕಥೆ ಓದಲೂ ಇಷ್ಟವೇ. ಆದರೆ ನಮಗೆ ಓದಲಿಕ್ಕೆ ಕಥೆಯ ಪುಸ್ತಕಗಳು ಎಲ್ಲಿವೆ ?” ಎಂದು ಉತ್ತರಿಸಿದರು. “ನಾನು ಕಥೆಯ ಪುಸ್ತಕಗಳನ್ನು ತಂದುಕೊಟ್ಟರೆ ? ಓದುತ್ತೀರಾ ? ಎಂದು ಕೇಳಿದ್ದಕ್ಕೆ “ಖಂಡಿತವಾಗಿ ಸರ್....ಓದುತ್ತೇವೆ“ ಎಂದು ಖುಷಿಯಿಂದ ಉತ್ತರಿಸಿದರು.

ಒಬ್ಬ ಜಾಣ ಹುಡುಗ “ಆದರೆ ನೀವೂ ಕಥೆಯನ್ನು ಹೇಳುತ್ತಿರಬೇಕು. ಕಥೆಯನ್ನು ಓದಿದರಷ್ಟೇ ಸಾಲದು ನಮಗೆ” ಎಂದಾಗ ನಾನು ಆಗಲಿ ಎಂದು ಒಪ್ಪಿಕೊಂಡು ಮತ್ತೆ ನಿಲ್ಲಿಸಿದ ಕಥೆಯನ್ನು ಮುಂದುವರಿಸಿದೆ. ಕೊನೆಯ ಗಂಟೆ ಬಾರಿಸಿತು. ಹುಡುಗರೆಲ್ಲ ನನ್ನ ಸುತ್ತಲೂ ಗುಂಪುಗೂಡಿದರು. ಕೆಲವರು ಪ್ರೀತಿಯಿಂದ ನನನ್ನು ನಿಟ್ಟಿಸುತ್ತಿದ್ದರೆ ಇನ್ನೂ ಕೆಲವರು ಅನುಮಾನಿಸುತ್ತ ನನ್ನ ಕೈಗಳನ್ನು ಸ್ಪರ್ಶಿಸುವಂತೆ ಪ್ರಯತ್ನ ಮಾಡುತ್ತಿದ್ದರು. ಇನ್ನೊಂದಿಷ್ಟು ಹುಡುಗರು ಮೈಮೇಲೆ ಬಂದಂತೆ ನಿಂತುಬಿಟ್ಟಿದ್ದರು. “ಹೂಂ. ಶಾಲೆ ಮುಗಿಯಿತಲ್ಲ. ಹೊರಗೆ ನಡೆಯಿರಿ” ಎಂದೆ. “ಇಲ್ಲ ನಾವು ಹೋಗುವುದಿಲ್ಲ ...ಸಂಜೆ ಆಗುವವರೆಗೆ ಕುಳಿತುಕೊಳ್ಳುತ್ತೇವೆ. ನೀವು ಕಥೆ ಹೇಳಿರಿ”ಎಂದು ದುಂಬಾಲುಬಿದ್ದರು. ನಾನು ಅವರನ್ನು ಸಾಗುಹಾಕಿದೆ. ಆಗ ಹೇರೆ ಅಧ್ಯಾಪಕರು ನನ್ನ ತರಗತಿಗೆ ಬಂದು “ಪರವಾ ಇಲ್ಲರೀ. ಅದ್ಭುತವನ್ನೇ ಸಾಧಿಸಿದ್ದೀರಿ. ನಮ್ಮ ಹುಡುಗರೂ ಕಥೆ ಬೇಕೆನ್ನುತ್ತಿದ್ದಾರೆ. ಪಾಠದ ಕಡೆಗೆ ಗಮನ ಕಡಿಮೆಯಾಗಿಬಿಟ್ಟಿದೆ. ನಿಮ್ಮ ತರಗತಿಗೆ ಹೋಗುತ್ತೇವೆ ಎಂದು ನಮ್ಮ ಅನುಮತಿಗಾಗಿ ಕೇಳುತ್ತಿದ್ದಾರೆ. ಇಲ್ಲವೇ ನೀವೇ ಕಥೆ ಹೇಳಿರಿ ಎಂದು ನಮಗೆ ಗಂಟು ಬೀಳುತ್ತಿದ್ದಾರೆ” ಎಂದು ಹೇಳಿದರು. ನಾನು “ಹಾಗಾದರೆ ಅವರಿಗೆ ಕಥೆ ಹೇಳಿರಿ” ಎಂದೆ. ಅವರು “ಅಯ್ಯೋ....ಕಥೆ ಹೇಳಲಿಕ್ಕೆ ಯಾರಿಗೆ ಬರುತ್ತದೆ ? ನಮಗೆ ಹೇಳಬೇಕೆಂದರೆ ಒಂದು ಕಥೆಯೂ ಗೊತ್ತಿಲ್ಲ” ಎಂದು ಹೇಳಿದಾಗ ನಾನು ಮುಗುಳು ನಗೆ ನಕ್ಕೆ.

●

ಅದರ ಮರುದಿನ ಭಾನುವಾರವಾಗಿತ್ತು. ನಾನು ಶಿಕ್ಷಣಾಧಿಕಾರಿಗಳನ್ನು ಭೆಟ್ಟಿಯಾದೆ. "ಏನ್ರೀ ಲಕ್ಷ್ಮೀರಾಂ. ನೀವು ಇಡೀ ದಿನ ಬರೀ ಕಥೆ ಹೇಳುತ್ತಿರುತ್ತೀರೆಂದು ಹೆಡ್‌ಮಾಸ್ಟರರು ವರದಿ ಕಳಿಸಿದ್ದಾರಲ್ಲ ?" ಎಂದು ಕೇಳಿದರು. ನಾನು "ಅದು ನಿಜ. ನನ್ನ ಸದ್ಯದ ಕಾರ್ಯಕ್ರಮ ಕಥೆ ಹೇಳುವುದಾಗಿದೆ" ಎಂದೆ.

"ಹಾಗಾದರೆ ನಿಮ್ಮ ಪ್ರಯೋಗವನ್ನು ಯಾವಾಗ ಆರಂಭಿಸುತ್ತೀರಿ ? ನಿಗದಿ ಪಡಿಸಿದ ಪಠ್ಯಕ್ರಮವನ್ನು ಹೇಗೆ ಮುಗಿಸುತ್ತೀರಿ ?"

"ನನ್ನ ಪ್ರಯೋಗ ಈಗಾಗಲೇ ಆರಂಭಗೊಂಡಿದೆ ಸರ್ ! ವಿದ್ಯಾರ್ಥಿ ಮತ್ತು ಅಧ್ಯಾಪಕರ ನಡುವೆ ಸಂಬಂಧ ಸ್ಥಾಪಿಸಲು ಕಥೆ ಹೇಳುವದು ಅದ್ಭುತವಾದ ಸಾಧನ ಎನ್ನುವದು ನನ್ನ ವೈಯಕ್ತಿಕ ಅನುಭವವಾಗಿದೆ. ಮೊದಲ ದಿನ ನನ್ನ ಮಾತು ಕೇಳಲು ಸಿದ್ಧರಿಲ್ಲದ, ಬೆಕ್ಕು, ನಾಯಿಗಳಂತೆ ಕಿರುಚಿ ನನ್ನನ್ನು ಅಧೈರ್ಯಗೊಳಿಸಿದ ವಿದ್ಯಾರ್ಥಿಗಳು ನಾನು ಕಥೆ ಹೇಳಲು ಆರಂಭಿಸಿದ ಮೇಲೆ ಶಾಂತರಾಗಿ ಕುಳಿತುಕೊಳ್ಳುತ್ತಿದ್ದಾರೆ. ಅವರಲ್ಲಿ ನನ್ನ ಬಗ್ಗೆ ಪ್ರೀತಿ ಮೂಡುತ್ತಿದೆ. ನಾನು ಹೇಳಿದಂತೆ ಕುಳಿತು ಹೇಳಿದ್ದನ್ನು ಕೇಳುತ್ತಾರೆ. ಅವರನ್ನು ಶಾಂತರಾಗಿಸಲು ನಾನು ಕೂಗಿ ಗದ್ದರಿಸ ಬೇಕಾಗಿಲ್ಲ. ಈಗ ಅವರು ಶಾಲೆ ಬಿಟ್ಟಮೇಲೆ ಕೂಡ ಮನೆಗೆ ಹೊರಡಲು ಇಚ್ಛಿಸುವುದಿಲ್ಲ !"

"ಅದು ಸರಿ. ನನಗೆ ನೀವು ಹೇಳುವುದು ತಿಳಿಯಿತು. ಆದರೆ ನೀವು ಬೋಧನೆಯ ಹೊಸ ರೀತಿಗಳನ್ನು ಯಾವಾಗ ಆರಂಭಿಸಬೇಕೆನ್ನುತ್ತೀರಿ ?"

"ಸರ್....ಇದೇ ನಾನು ಆರಂಭಿಸಿರುವ ಹೊಸ ಬೋಧನೆಯ ರೀತಿ. ನಾನು ಕಥೆಗಳ ಮೂಲಕ ಅವರಿಗೆ ಸರಿಯಾದ ನಡವಳಿಕೆಯ ರೀತಿಯನ್ನು ಕಲಿಸುತ್ತಿದ್ದೇನೆ. ಅವರು ಹೀಗೆ ಪ್ರಚೋದಿತರಾಗುತ್ತಿದ್ದಾರೆ. ಅದಲ್ಲದೆ ನಾನು ಅವರನ್ನು ಭಾಷೆಯ ಅಭಿವ್ಯಕ್ತಿಯ ವಿಧಾನಗಳಿಗೆ ಮತ್ತು ಸಾಹಿತ್ಯಾಂಶಗಳಿಗೆ ಒಡ್ಡುತ್ತಿದ್ದೇನೆ. ಇವುಗಳನ್ನು ಅನುಸರಿಸಿಯೇ ಉಳಿದ ವಿಷಯಗಳ ಬೋಧನೆಯನ್ನು ಕೈಗೆತ್ತಿಕೊಳ್ಳುತ್ತೇನೆ."

"ಹಾಗೆಯೇ ಆಗಲಿ. ಆದರೆ ವರ್ಷವೆಲ್ಲವೂ ಕಥೆ ಹೇಳುತ್ತ ಕಳೆದುಬಿಡಬೇಡಿ ಮತ್ತೆ" ಎಂದು ಶಿಕ್ಷಣಾಧಿಕಾರಿಗಳು ಎಚ್ಚರಿಕೆಯ ಮಾತು ಹೇಳಿದರು.

●

ವಿದ್ಯಾರ್ಥಿಗಳು ಕಥಾಶ್ರವಣಕ್ಕೆ ಎಂದಿನಂತೆ ನಾನು ಎಳೆದ ವೃತ್ತದಗುಂಟ ಕುಳಿತಿದ್ದರು. ನಾನು ಕಪ್ಪುಹಲಗೆಯ ಬಳಿಗೆ ಹೋಗಿ ಹೀಗೆ ಬರೆದೆ :

ಇಂದಿನ ಕಾರ್ಯಕ್ರಮ :

೧. ಹಾಜರಾತಿ
೨. ಸಂಭಾಷಣೆ (ಮಾತುಕತೆ)
೩. ಕಥೆ

ಹಾಜರಾತಿಯಾದಮೇಲೆ ಅವರೊಂದಿಗೆ ಮಾತುಕತೆಯನಾರಂಭಿಸಿದೆ :

"ಬನ್ನಿ....ಈಗ ನಿಮ್ಮ ಉಗುರುಗಳನ್ನು ನೋಡೋಣ . ಎಲ್ಲರೂ ಎದ್ದುನಿಂತು ನಿಮ್ಮ ಕೈಗಳನ್ನು ಮುಂದಕ್ಕೆ ಚಾಚಿರಿ."

ಅವರ ಉಗುರುಗಳು ಉದ್ದವಾಗಿ ಬೆಳೆದು ಅವುಗಳಲ್ಲಿ ಹೊಲಸು ತುಂಬಿ ಕೊಂಡಿತ್ತು ..."ಈಗ ...ನಿಮ್ಮ ಟೊಪ್ಪಿಗೆಗಳನ್ನು ತೆಗೆಯಿರಿ ನೋಡೋಣ..." ಎಂದೆ. ಅವರ ಟೊಪ್ಪಿಗೆಗಳು ಕಮಟಿಕ್ಕಿದ್ದವು ಮತ್ತು ಹರಿದಿದ್ದವು.ವಿದ್ಯಾರ್ಥಿಗಳು ತಮ್ಮ ತಮ್ಮ ಟೊಪ್ಪಿಗೆಗಳನ್ನು ನೋಡಿಕೊಂಡರು."ಹೂಂ. ಈಗ ನಿಮ್ಮ ಶರ್ಟುಯಿಗಳನ್ನು ನೋಡಿರಿ. ಎಲ್ಲ ಬಿರಡಿಳಗು ಸರಿಯಾಗಿವೆಯೆ ?" ಅವರು ತಮ್ಮ ಬಟ್ಟೆಗಳನ್ನು ನೋಡಿಕೊಂಡರು. ಕೇವಲ ಕೆಲವೇ ಕೆಲವರ ಗುಂಡಿಗಳು ಸರಿಯಾಗಿದ್ದವು. "ಈಗ ಸದ್ಯಕ್ಕೆ ಇಷ್ಟು ಸಾಕು. ಇಲ್ಲವಾದರೆ ಕಥೆಗೆ ತಡವಾಗಿಬಿಡುತ್ತದೆ" ಎಂದು ಹೇಳಿ ಅವರನ್ನು ಕೂಡ್ರಿಸಿ ಕಥೆ ಆರಂಭಿಸಿದೆ. ಅಷ್ಟರಲ್ಲಿ ಒಬ್ಬ ಹುಡುಗ ಎದ್ದು ನಿಂತು "ಸರ್....ನಮಗೆ ಕಥೆಗಳ ಪುಸ್ತಕ ಕೊಡುತ್ತೇನೆ ಎಂದಿದ್ದಿರಿ...." ಎಂದು ಕೇಳಿದ. "ಹಾಂ. ಹೌದು.... ಇನ್ನೊಂದೆರಡು ದಿನಗಳಲ್ಲಿ ವ್ಯವಸ್ಥೆ ಮಾಡುತ್ತೇನೆ. ಕಥೆಗಳ ಪುಸ್ತಕ ಓದಬೇಕೆನ್ನು ವವರು ಕೈ ಮೇಲೆತ್ತಿರಿ" ಎಂದಾಗ ಎಲ್ಲರೂ ಕೈ ಎತ್ತಿದರು. "ನಿಮ್ಮಲ್ಲಿ ಎಷ್ಟು ಜನ ಕಥೆಗಳ ಪುಸ್ತಕ ಓದಿದ್ದೀರಿ ? ಯಾವ ಕಥೆಗಳ ಪುಸ್ತಕ ಓದಿದ್ದೀರಿ ಹೇಳಿ ನೋಡುವಾ" ಎಂದು ಕೇಳಿದರೆ ಒಂದೆರಡು ಹುಡುಗರು ಮಾತ್ರ ಒಂದೆರಡು ಬಿಡಿ ಕಥೆಗಳನ್ನು ಓದಿದ್ದರು. ನಾಲ್ಕನೆಯ ತರಗತಿಯ ಆ ವಿದ್ಯಾರ್ಥಿಗಳು ತಮ್ಮ ಪಠ್ಯ ಪುಸ್ತಕಗಳ ಆಚೆಗಿನದನ್ನು ಏನನ್ನೂ ಓದಿರಲಿಲ್ಲ !

"ನೀವು ಯಾವುದಾದರೂ ಪತ್ರಿಕೆಗಳನ್ನು ಓದುತ್ತೀರಾ ?"

"ಬಾಲಮಿತ್ರ ಓದುತ್ತೇವೆ ಸರ್" ಎಂದು ಇಬ್ಬರು ವಿದ್ಯಾರ್ಥಿಗಳು ಹೇಳಿದರು.

"ಆಯ್ತು. ಕಥೆಗಳ ಪುಸ್ತಕಗಳ ವ್ಯವಸ್ಥೆ ಮಾಡೋಣ. ನಿಮಗೆ ತೃಪ್ತಿ ಯಾಗುವಷ್ಟು ಓದುವಿರಂತೆ" ಎಂದಾಗ ಅವರು ಅತಿಯಾಗಿ ಸಂತೋಷಪಟ್ಟರು.

ಕಥೆ ಮುಂದುವರಿಯಿತು. ಶಾಲೆಯ ಕೊನೆಯ ಗಂಟೆಯಾಯಿತು. ನಾನು ವಿದ್ಯಾರ್ಥಿಗಳಿಗೆ "ಒಂದು ಕ್ಷಣ ನಿಮ್ಮ ಸ್ಥಳದಲ್ಲಿಯೇ ಕುಳಿತಿರಿ. ನೋಡಿ ನೀವು ನಿಮ್ಮ ಉಗುರುಗಳನ್ನು ತೆಗೆಯಬೇಕು. ನೀವೇ ತೆಗೆದುಕೊಳ್ಳಿರಿ ಇಲ್ಲವೇ ನಿಮ್ಮ ಅಪ್ಪ ಅಮ್ಮಂದಿರ ಸಹಾಯದಿಂದ ತೆಗೆದುಕೊಳ್ಳಿರಿ. ಇಲ್ಲವೆ ಕಾಯಕದವನಲ್ಲಿಗೆ ಹೋಗಿ ಉಗುರು ತೆಗೆಸಿಕೊಳ್ಳಿರಿ" ಎಂದು ಹೇಳಿದಾಗ ಒಬ್ಬ ಹುಡುಗನು "ನಾನು ನನ್ನ ಉಗುರನ್ನು ಈಗಲೇ ತೆಗೆದುಬಿಡುತ್ತೇನೆ ಸರ್ .. ಹಲ್ಲಿನಿಂದ ಕಚ್ಚಿ ತೆಗೆದುಹಾಕಿ ಬಿಡುತ್ತೇನೆ" ಎಂದು ಹೇಳಿದನು. "ಏ .. ಹಾಗೆ ಮಾಡಬಾರದು. ಕತ್ತರಿ ಇಲ್ಲವೆ ಉಗುರು ಕತ್ತರಿಸುವ ಚಿಮ್ಮಟಿಕೆಯಿಂದ ಉಗುರು ತೆಗೆಯಬೇಕು—ಈಗ ಒಂದು ಮಜಾ ಮಾಡೋಣವೇ...." ಎಂದೆ. ಅವರಲ್ಲಿ ಕುತೂಹಲ ಹುಟ್ಟಿತು . "ನೀವು ಶಾಲೆಗೆ ಟೊಪ್ಪಿಗೆ ಹಾಕದೇ ಬರಿದಲೆಯಿಂದ ಬರಬಹುದಲ್ಲ ? ಈ ಹೊಲಸು ಟೊಪ್ಪಿಗೆ ಗಳನ್ನೇಕೆ ಹಾಕಿಕೊಳ್ಳಬೇಕು ? ಅದಲ್ಲದೆ ಈ ಟೊಪ್ಪಿಗೆಯಿಂದ ನಮಗೆ ಆಗ ಬೇಕಾದಾದ್ದರೂ ಏನು ?" ಎಂದು ಕೇಳಿದಾಗ ಆ ಹುಡುಗರು ನಗತೊಡಗಿದರು. "ಶಾಲೆಗೆ ಬರಿದಲೆಯಿಂದ ಬರಬಾರದು ಸರ್. ಹೆಡ್‌ಮಾಸ್ತರರಿಗೆ ಸಿಟ್ಟು ಬಂದುಬಿಡು ತ್ತದೆ" ಎಂದು ಅವರು ಹೇಳಿದಾಗ, ನಾನು "ಒಂದು ವೇಳೆ ನಾಳೆ ನಾನು ಬರಿದಲೆಯಿಂದ ಬಂದರೆ ನೀವೂ ಹಾಗೆಯೇ ಮಾಡುತ್ತೀರಾ ?" ಎಂದು ಕೇಳಿದ. ಅವರು ಅನುಮಾನಕ್ಕೆ ಬಿದ್ದರು.... "ನಮ್ಮ ಅಪ್ಪ ಅಮ್ಮ ಟೊಪ್ಪಿಗೆಯಿಲ್ಲದೇ ಬರಿದಲೆಯಿಂದ ಹೋಗುವದು ಬೇಡವೆಂದರೆ ?" ಎಂದು ಕೇಳಿದರು.

"ನೀವು ಅವರಿಗೆ ಹೇಳಿರಿ. ಟೊಪ್ಪಿಗೆ ವಿನಾಕಾರಣ ತಲೆಭಾರ. ಅಷ್ಟಲ್ಲದೆ ಈ ಟೊಪ್ಪಿಗೆಗಳು ಕಮಟಿಕ್ಕಿವೆ ಮತ್ತು ಹರಿದಿವೆ....ಹೊಲಸು ಟೊಪ್ಪಿಗೆ ಹಾಕಿಕೊಳ್ಳು ವುದಕ್ಕಿಂತ ಹಾಗೆಯೇ ಇರುವುದು ಮೇಲು ಅಲ್ಲವೆ ? ... ಇನ್ನೊಂದು ಮಾತು. ನೀವು ಹರಿದುಹೋದ ಬಿರಡೆಗಳನ್ನು ಹಚ್ಚಿಸಿಕೊಳ್ಳಬೇಕು. ಬಿರಡೆಗಳಿಲ್ಲದಿದ್ದರೆ ಬಟ್ಟೆಗಳು ಅಸಹ್ಯವಾಗಿ ಕಾಣುತ್ತವೆ...." ನನ್ನ ಈ ಮಾತುಗಳು ಅವರಿಗೆ ವಿಚಾರಮಾಡಲು ಹಚ್ಚಿದವು. ಆ ವಿಚಾರದೊಂದಿಗೆ ಅವರು ಮನೆಗೆ ಹೋದರು.

ಹೆಡ್‌ಮಾಸ್ತರರು ಹೇಳಿಕಳಿಸಿದರು. ನಾನು ಅವರ ಬಳಿ ಹೋಗುತ್ತಿದ್ದಂತೆಯೇ "ರೀ ಲಕ್ಷ್ಮೀರಾಂ... ನೀವು ಸಮಸ್ಯೆಗಳನ್ನ ಹುಟ್ಟಿಸುತ್ತಿದ್ದೀರಪ್ಪ. ಇದೆಲ್ಲಾ ಏನು ? ಉಗುರು ಕತ್ತರಿಸು. ಬಿರಡಿಗಳನ್ನು ಹಚ್ಚು ...! ನೀವು ಅದೇನೋ ಕಲಿಸುವ ಹೊಸ ಪ್ರಯೋಗ ಮಾಡಲೆಂದು ಇಲ್ಲಿ ಬಂದಿದ್ದೀರಂತೆ. ಸುಮ್ಮನೇ ಅದನ್ನು ಮಾಡಿಕೊಂಡು ಹೋಗುವ ಬದಲು ಇದನ್ನೆಲ್ಲ ಏನು ಹಚ್ಚಿದ್ದೀರಿ ? ಉಗುರುತೆ ಗೆಯುವದು–ಬಿರಡೆ ಹಚ್ಚುವದು ಇವೆಲ್ಲ ಅಪ್ಪ ಅಮ್ಮಂದಿರಿಗೆ ಸಂಬಂಧಪಟ್ಟದ್ದು. ಶಾಲೆಯ ಜವಾಬ್ದಾರಿ

ಅಲ್ಲ....ಇನ್ನೊಂದು ಮಾತು. ಹುಡುಗರು ಟೊಪ್ಪಿಗೆಯಿಲ್ಲದೆ ಬರಿದಲೆಯಿಂದ ಶಾಲೆಗೆ ಬರಕೂಡದು. ಇದು ಅಶಿಸ್ತು. ಇದಕ್ಕೆ ಶಿಕ್ಷಣ ಇಲಾಖೆಯ ಅನುಮತಿ ಬೇಕು" ಎಂದು ಅಸಹನೆಯ ಎದನಿಯಿಂದ ಹೇಳಿದರು.

"ಸರ್ ಇವೆಲ್ಲ ನನ್ನ ಕಲಿಸುವಿಕೆಯ ಹೊಸ ಪ್ರಯೋಗದ ಅಂಶಗಳೇ. ಅಸ್ವಚ್ಛರಾದ, ಅವ್ಯವಸ್ಥೆಯಲ್ಲಿರುವ ಹುಡುಗರಿಗೆ ಇದನ್ನಲ್ಲದೇ ಇನ್ನೇನು ಕಲಿಸಲು ಆರಂಭಿಸುವದು ? ಸ್ವಚ್ಛತೆ ಮತ್ತು ಸರಿಯಾಗಿ ಬಟ್ಟೆ ಧರಿಸುವುದನ್ನೇ ಹೇಳಬೇಕಲ್ಲವೆ? ಅವರ ಅಸ್ವಚ್ಛತೆಯನ್ನು ತೋರಿಸಿಕೊಟ್ಟಾಗ ಆ ಹುಡುಗರೇ ನಾಚಿಕೊಂಡರು. ಅವರಿಗೆ ಹೊಲಸಾಗಿರಬಾರದೆಂದು ತಿಳಿದಿದೆ. ಸರಿಯಾಗಿ ಹೇಳಿಕೊಟ್ಟರೆ ಅವರಲ್ಲಿ ಕೆಲವರಾದರೂ ಸ್ವಚ್ಛವಾದ-ಸರಿಯಾದ ಬಟ್ಟೆ ಧರಿಸಿಬರುತ್ತಾರೆಂದು ನನಗೆ ಅನಿಸಿದೆ. ಇನ್ನು ಟೊಪ್ಪಿಗೆಯ ಬಗೆಗೆ ...ನಾನು ಶಿಕ್ಷಣಾಧಿಕಾರಿಗಳನ್ನು ಕಂಡು ಮಾತನಾಡುತ್ತೇನೆ. ಅವರು ಅನುಮತಿ ನೀಡದಿದ್ದರೆ ಹುಡುಗರು ಟೊಪ್ಪಿಗೆ ಹಾಕಿಕೊಂಡೇ ಶಾಲೆಗೆ ಬರುತ್ತಾರೆ" ಎಂದು ವಿವರಣೆ ನೀಡಿದೆ.

ಅಂದು ರಾತ್ರಿಯ ಊಟ ಮುಗಿದಮೇಲೆ ಶಿಕ್ಷಣಾಧಿಕಾರಿಗಳ ಮನೆಗೆ ಹೋದೆ "ಬನ್ನಿ....ಏನು ಇಷ್ಟು ಹೊತ್ತಿನಲ್ಲಿ ಬಂದಿರಲ್ಲ ?"

ನಾನು ಹುಡುಗರು ಟೊಪ್ಪಿಗೆಯಿಲ್ಲದೇ ಶಾಲೆಗೆ ಬರುವ ಬಗೆಗೆ ಅನುಮತಿ ಕೇಳಿದೆ. ಹುಡುಗರ ಟೊಪ್ಪಿಗೆಗಳು ಒಂದೇ ತರದ್ದಾಗಿರುವುದಿಲ್ಲ, ಬಹುಶಃ ಎಲ್ಲರೂ ಹರಿದ ಕೊಳಕಾದ ಟೊಪ್ಪಿಗೆ ಹಾಕಿಕೊಂಡು ಬರುತ್ತಾರೆ—ಇಷ್ಟಲ್ಲದೇ ಆ ಚಿಕ್ಕಮಕ್ಕಳ ತಲೆಯಮೇಲೆ ಈ ವಿನಾಕಾರಣ ಭಾರವೇಕೆ ಎಂದು ನನ್ನ ವಾದ ಮಂಡಿಸಿದೆ. ಆದರೆ ಶಿಕ್ಷಣಾಧಿಕಾರಿಗಳು ಸಾಮಾಜಿಕ ರೀತಿರಿವಾಜನ್ನು ಮೀರುವ ನನ್ನ ಕೇಳಿಕೆಯನ್ನು ಒಪ್ಪಲಿಲ್ಲ. ಆದರೆ ತರಗತಿಯ ಒಳಗಡೆಗ ಅವರು ಟೊಪ್ಪಿಗೆಯಿಲ್ಲದೇ ಬರಿದಲೆಯಿಂದ ಇರಬಹುದೆಂದು ಅನುಮತಿ ನೀಡಿದರು. ನಾನು ಈಗ ಪುಸ್ತಕಾಲಯದ ಮಾತು ಎತ್ತಿದೆ.

"ಇನ್ನೊಂದು ವಿಷಯ ...ನಾನು ನನ್ನ ತರಗತಿಯದ್ದೇ ಆದ ಚಿಕ್ಕ ಗ್ರಂಥಾಲಯ ಶುರು ಮಾಡಬೇಕು. ಅದಕ್ಕೆ ಗ್ರಾಂಟ್ ಕೊಡಲಿಕ್ಕೆ ಸಾಧ್ಯವೆ ?"

"ಇದಕ್ಕೆ ಹ್ಯಾಗೆ ವಿಶೇಷ ಗ್ರಾಂಟ್ ಕೊಡಲಿಕ್ಕಾಗುತ್ತದೆ ? ನಿಮ್ಮ ಪ್ರಯೋಗ ಏನಿದ್ದರೂ ಅದು ನನ್ನ ನಿಮ್ಮ ನಡುವಿನ ಒಪ್ಪಂದ. ಶಾಲೆಗೆ ಕೊಟ್ಟ ಗ್ರಾಂಟ್‌ನಲ್ಲಿಯೇ

ಆದರ ಎಲ್ಲ ಚಟುವಟಿಕೆಗಳು ನಡೆಯಬೇಕು. ನಿಮ್ಮ ತರಗತಿಗೆ ಏನು ಪಾಲು ದೊರೆಯುವದೋ ಅದರಲ್ಲಿಯೇ ಎಲ್ಲ ನಿಭಾಯಿಸಬೇಕು."

"ಹಾಗಿದ್ದರೆ ಇದನ್ನು ಹೇಗೆ ಮಾಡೋಣ ?"

"ಅದನ್ನು ಕೈಬಿಡುವದೊಂದೇ ದಾರಿ."

"ಹಾಗಿದ್ದರೆ .. ಈ ಬಗ್ಗೆ ನನ್ನದು ಬೇರೆ ಒಂದು ಯೋಚನೆಯಿದೆ. ನಿಮ್ಮ ಒಪ್ಪಿಗೆ ದೊರೆತರೆ ಹಾಗೆ ಮಾಡಬಹುದು .. ಈಗ ವಿದ್ಯಾರ್ಥಿಗಳೆಲ್ಲರೂ ಪಠ್ಯಪುಸ್ತಕ ಕೊಳ್ಳಬೇಕು....ಅವರಿಗೆ ಪಠ್ಯಪುಸ್ತಕ ಕೊಳ್ಳದಿರಲು ಹೇಳಿ ಅದೇ ದುಡ್ಡಿನಲ್ಲಿ ಅವರಲ್ಲಿ ಆಸಕ್ತಿ ಕೆರಳಿಸುವ ಉತ್ತಮ ಪುಸ್ತಕಗಳನ್ನು ಖರೀದಿಸುವದು . "

"....ಆದರೆ ಪಠ್ಯಪುಸ್ತಕಗಳಿಲ್ಲದೇ ನೀವು ಹೇಗೆ ಕಲಿಸುತ್ತೀರಿ !?"

"ನಾನು ಆ ಬಗ್ಗೆ ಯೋಚಿಸಿದ್ದೇನೆ.. ಈ ಬಗ್ಗೆ ನೀವು ತೃಪ್ತಿಪಡುವಂತಹ ಯೋಜನೆ ನನ್ನ ಬಳಿ ಇದೆ. ನೀವೇ ಅದನ್ನು ನೋಡುವಿರಂತೆ... "

ವಿದ್ಯಾಧಿಕಾರಿಗಳು ಪಠ್ಯಪುಸ್ತಕಗಳಿಲ್ಲದೇ ಕಲಿಸುವ ನನ್ನ ವಿಧಾನದ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತ ಪರೀಕ್ಷೆ ಮತ್ತು ಫಲಿತಾಂಶದ ಬಗ್ಗೆ ಇನ್ನೊಮ್ಮೆ ಎಚ್ಚರಿಕೆ ನೀಡಿದರು. ನನ್ನ ಪ್ರಯೋಗಗಳಿಗಾಗಿ ವಿದ್ಯಾರ್ಥಿಗಳು ತೊಂದರೆ ಅನುಭವಿಸು ವಂತಾಗಬಾರದೆಂದು ನೆನಪಿಸಿದರು. ಇಂಥ ಅನುಮಾನಗಳ ಅರೆಮನಸ್ಸಿನಿಂದಲೇ ನನ್ನ ಗ್ರಂಥಾಲಯದ ಯೋಜನೆಗೆ ಒಪ್ಪಿಗೆ ನೀಡಿದರು. ನಾನು ಧನ್ಯವಾದಗಳನ್ನರ್ಪಿಸಿ ಮನೆಗೆ ಬಂದೆ.

●

ಮರುದಿನ ಯಥಾರೀತಿ ಶಾಲೆ ಶುರುವಾಯಿತು. ನನ್ನ ತರಗತಿಯ ಹುಡುಗರು ಟೊಪ್ಪಿಗೆಯಿಲ್ಲದೇ ಬರಿದಲೆಯಿಂದ ಬಂದಿರುತ್ತಾರೆಂದು ಭಾವಿಸಿದ್ದೆ. ಆದರೆ ಎಲ್ಲರೂ ತಮ್ಮ ಕೊಳಕು ಟೊಪ್ಪಿಗೆ ತಲೆಗೆ ಸಿಕ್ಕಿಸಿಕೊಂಡು ಬಂದಿದ್ದರು. ಅಪ್ಪ ಅಮ್ಮಂದಿರು ಬರಿದಲೆಯಿಂದ ತಮ್ಮ ಮಕ್ಕಳು ಶಾಲೆಗೆ ಹೋಗಕೂಡದೆಂದು ನಿರ್ಬಂಧ ಮಾಡಿದ್ದು ತಿಳಿಯಿತು . ನಿಮ್ಮ ಮೋಜ್ಜಿಗೆ ತಲೆ ಕೆಟ್ಟಿರಬೇಕು.... ಎನ್ನುವದು ಅವರ ಟೀಕೆಯಾಗಿದ್ದಿತು. ನಾನು ಮಕ್ಕಳ ಉಗುರುಗಳನ್ನು ಪರೀಕ್ಷಿಸಿದೆ. ಯಾರೊಬ್ಬರೂ ಉಗುರು ತೆಗೆದಿರಲಿಲ್ಲ. ಕೇಳಿದ್ದಕ್ಕೆ ನೂರೆಂಟು ಕಾರಣ ಗಳನ್ನು ನೀಡಿದರು. ಅವರ ತಾಯಂದಿರ ಮಾತುಗಳನ್ನು ವರದಿ ಮಾಡಿದರು :

'ಅಂಗೀ ಬಿರಡೀ ಗಿರಡೀ ಹಚ್ಚಲಿಕ್ಕೆ ವ್ಯಾಳ್ಯಾ ಎಲ್ಲಿದ್ದ ?' ಒಬ್ಬ ತಾಯಿಯಂತೂ ನನಗೆ ಎಚ್ಚರಿಕೆಯ ಒಂದು ಸೂಚನೆಯನ್ನು ಕೊಟ್ಟು ಕಳಿಸಿದ್ದಳು–'ರೀ ಮೇಷ್ಟ್ರೇ ! ನೀವು ಇಲ್ಲಿ ಹುಡುಗರಿಗೆ ಕಲಿಸಲಿಕ್ಕೆ ಇದ್ದದ್ದಾದರೆ ತಣ್ಣಗೆ ಕಲಿಸುವ ಉದ್ಯೋಗ ಮಾಡಿರಿ. ನಿಮಗೆ ಸಂಬಂಧ ಇಲ್ಲದ್ದರಲ್ಲಿ ತಲೆ ಹಾಕಲಿಕ್ಕೆ ಹೋಗಬೇಡಿರಿ. ಹುಡುಗರ ಉಗುರು ತೆಗೆಯುವದೂ ಹರಿದುಹೋದ ಗುಂಡೀ ಹಚ್ಚುವದೂ ಮಾಡಿಕೋತ ಕೂಡಲಿಕ್ಕೆ ನಮಗ ಬ್ಯಾರೇ ಉದ್ಯೋಗ ಇಲ್ಲಂತ ತಿಳದೀರೇನು ? ನಮ್ಮ ಹುಡಗೋರು ಹೆಂಗಿದ್ದಾರೋ ಹಂಗs ಇರತಾರ....ಸಾಯಲಿಕ್ಕೂ ನಮಗ ವ್ಯಾಳ್ಯಾ ಇಲ್ಲ. ಇಂಥಾದ್ದರೊಳಗ ನೀವು ಇಲ್ಲದ ಉಸಾಬರೀ ಹಚ್ಚಬ್ಯಾಡರಿ....'

ನಾನು ಇದನ್ನೆಲ್ಲಾ ಕೇಳಿ ದಂಗಾಗಿಹೋದೆ. ಹುಡುಗರು ಸ್ವಚ್ಛವಾಗಿ ಕಳಕಳೆಯಾಗಿ ಬರುತ್ತಾರೆಂದು ಭಾವಿಸಿದ್ದರೆ ಅವರು ಬರುವಂತೆಯೇ ಬಂದದ್ದಲ್ಲದೇ ಇಂಥ ನಿರ್ದೇಶನಗಳನ್ನು ಬೇರೆ ತಂದಿದ್ದರು. ನಾನು–ಹೀಗಾದರೆ ಆಗುವುದಿಲ್ಲ ನನ್ನ ರೀತಿಗೆ ಪೋಷಕರ ಸಹಕಾರ ಪಡೆಯುವ ಬಗ್ಗೆ ಪ್ರಯತ್ನಿಸಬೇಕು ಮತ್ತು ಇಲ್ಲಿ ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಬಗ್ಗೆ ಆಸಕ್ತಿ ಹುಟ್ಟಿಸಬೇಕು ಎಂದು ನನಗೆ ನಾನೇ ಹೇಳಿಕೊಂಡೆ. ವಿದ್ಯಾರ್ಥಿಗಳೊಂದಿಗಿನ ನನ್ನ ಮಾತುಕತೆಯನ್ನು ಮತ್ತಷ್ಟು ಮುಂದುವರಿಸದೇ ಕಥೆ ಹೇಳುವ ಕೆಲಸದಲ್ಲಿ ತೊಡಗಿದೆ. ಆ ಕಥೆ ಮುಗಿಸಿದ ಕೂಡಲೇ 'ಇನ್ನೊಂದು ಕಥೆ ಸರ್ ಇನ್ನೊಂದು ಕಥೆ ಹೇಳ್ರಿ..' ಎಂದು ಹುಡುಗರು ಹುಯಿಲೆಬ್ಬಿಸಿದರು. ನಾನು 'ಇಂದು ಇಷ್ಟು ಸಾಕು. ನಾಳೆಗೆ ಹೊಸ ಕಥೆ.. ಈಗ ನಾವು ಆಟ ಆಡಲು ಹೋಗೋಣ' ಎಂದು ಹೇಳಿದಾಗ ಹುಡುಗರು ಆಶ್ಚರ್ಯಚಕಿತರಾಗಿ 'ಆಟಾ !'. ಎಂದು ಉದ್ಗಾರ ತೆಗೆದರು. 'ಇದು ಶಾಲೆ.. ಇಲ್ಲಿ ಯಾರೂ ಆಟ ಆಡುವುದಿಲ್ಲ' ಎಂದರು. 'ಈಗ ನಾನು ಆಡಿಸುತ್ತೇನೆ ಬನ್ನಿ...' ಎಂದು ಹೇಳಿದಾಗ ಆ ವಿದ್ಯಾರ್ಥಿಗಳಲ್ಲಿ ಕೆಲವರು ಸ್ತಂಭೀಭೂತರಾದಂತಾದರು. ಆದರೆ ಕೆಲವೇ ಕ್ಷಣಗಳಲ್ಲಿ ಅವರು ಆಟ....ಆಟ....ಎಂದು ಕಿರುಚುತ್ತ ಹೊರಗಡೆಗೆ ನುಗ್ಗಿದರು. ಬೇರೆ ತರಗತಿಗಳಲ್ಲಿನ ಹುಡುಗರು ಮತ್ತು ಅಧ್ಯಾಪಕರು ಏನು ಗಲಾಟೆ ಎಂದು ಕುತೂಹಲದಿಂದ ಹೊರಗೆ ಇಣಿಕಿ ನೋಡತೊಡಗಿದರು. ಹೆಡ್‌ಮಾಸ್ತರರು ಧಾವಿಸಿ ಬಂದು 'ರೀ.... ಇವರೇ....ಇಲ್ಲಿ ಆಟಗೀಟ ಅಂತ ಆಟಾ ಹೂಡಬೇಡಿ. ಬೇರೆ ತರಗತಿಗಳಿಗೆ ತೊಂದರೆಯಾಗುತ್ತದೆ. ನೀವು ಆಟಾ ಆಡಿಸಬೇಕೆಂದರೆ ಬಯಲಿಗೆ ಹೋಗಿರಿ....' ಎಂದು ಬಯ್ಯುವವರಂತೆ ಹೇಳಿದರು.

ಹುಡುಗರನ್ನು ಕರೆದುಕೊಂಡು ಬಯಲಿಗೆ ಹೋದದ್ದಾಯಿತು. ಆದರೆ ಹುಡುಗರನ್ನು ನಿಯಂತ್ರಿಸುವದೇ ಕಠಿಣವಾಯಿತು. ಒಬ್ಬ ಕಬಡ್ಡಿ ಆಡುವುದೆಂದರೆ

ಮತ್ತೊಬ್ಬನು ಖೋ ಖೋ .. ಎನ್ನುತ್ತಾನೆ. ನಾನು 'ನೋಡಿ....ನಾವು ಆಟ ಆಡಲು ಇಲ್ಲಿ ಬಂದದ್ದು. ನೀವು ಜಗಳಾಡಲು ಶುರು ಮಾಡಿದರೆ ನಾನು ನಿಮ್ಮನ್ನೆಲ್ಲ ಮತ್ತೆ ತರಗತಿಗೇ ಕರೆದುಕೊಂಡು ಹೋಗುತ್ತೇನೆ' ಎಂದು ಹೆದರಿಸಿದಾಗ ಅವರು ನಿಯಂತ್ರಣಕ್ಕೆ ಬಂದರು. ಖೋ ಖೋ ಆಟ ಆರಂಭವಾಯಿತು. ಸುಮ್ಮನೇ ಆಟವಾಡದೇ ಆಟದ ತುಂಬ ಬರೀ ವರಟು ಮಾತುಗಳು....ಬಾರೇ ಬಾರೇ....ಹಿಡಿಯುಬಾರವಾ ತಂಗೀ...ಯಾರನರ ಹಿಡಿಯೂದು ಅಂದರ ಅಳ್ಳಿಟ್ಟು ತಂಬಿಟ್ಟು ಅಲ್ಲ....ಏ ಆ ಕಡೇಲೇ....ನುಗ್ಗು... ಅಪನ್ನ ಬೆನ್ನ ಹತ್ತು....ಏಯ್ ಹೋಗಲೇ....ನಿನ್ನ ಕಟಿಗೊಂಡು ನಾವು ಸೋತಿವಿ....ಆಟ ಮುಗಿದ ಮೇಲೆ ಗೆದ್ದ ಟೀಮಿನ ಒಬ್ಬ ಸೋತ ಟೀಮಿನ ಒಬ್ಬನನ್ನು ಕಾಡಿಸಿದಾಗ ಸೋತವನು ಸಿಟ್ಟಿಗೆದ್ದು ಕಾಡಿಸಿದವನಿಗೆ ಕಲ್ಲು ತೆಗೆದುಕೊಂಡು ಹೊಡೆದನು ತಲೆ ಒಡೆದು ರಕ್ತ ಸೋರತೊಡಗಿತು. ನಾನು ಧಾವಿಸಿ ನನ್ನ ಕರ್ಚೀಫಿನಿಂದ ಅವನ ಗಾಯವನ್ನು ಬಿಗಿದು– 'ಆಯ್ತು....ಇಂದಿನಿಂದ ನಿಮ್ಮನ್ನು ಎಂದಿಗೂ ಆಡಲೆಂದು ಹೊರಗೆ ಕರೆತರುವುದಿಲ್ಲ' ಎಂದೆ. ಯಾಕೆ ಸರ್....ಯಾರೋ ಒಬ್ಬರು ತಪ್ಪು ಮಾಡಿದರೆ ಎಲ್ಲಾರಿಗೂ ಶಿಕ್ಷೆ ಯಾಕೆ....ಎಂದು ಅವರು ವಾದಿಸಿದರು. ನಾನು ಎರಡು ಕರಾರುಗಳನ್ನು ಹೇಳಿದೆ. ಒಂದು ಆಟ ಆಡುವಾಗ ಯಾರೂ ಮಾತಾಡಕೂಡದು. ಯಾರು ಮಾತಾಡುತ್ತಾರೋ ಅವರನ್ನು ಔಟ್ ಮಾಡಲಾಗುವದು. ಎರಡು–ಸೋತದ್ದಕ್ಕಾಗಲೀ ಗೆದ್ದದ್ದಕ್ಕಾಗಲೀ ಯಾರೂ ಜಗಳಾಡಕೂಡದು. ಇಂದು ಸೋತವರು ನಾಳೆ ಗೆಲ್ಲಬಹುದು....ನಾವು ಆಡುವದು ಆಟದ ಖುಷಿಗಾಗಿ. ಖುಶಿಯಿಂದ ಕಾಲ ಕಳೆಯುವುದಕ್ಕಾಗಿ. ಸೋಲು–ಗೆಲುವಿಗಾಗಿ ಜಗಳ ತೆಗೆದು ಬೇರೆಯವರ ತಲೆ ಒಡೆಯುವಂತಿಲ್ಲ. ಈ ಕರಾರುಗಳನ್ನು ಒಪ್ಪುವುದಾದರೆ ಮುಂದೆಯೂ ಆಟ ಆಡಲು ಹೊರಗೆ ಕರೆದುಕೊಂಡು ಬರುತ್ತೇನೆ ಎಂದಾಗ ಎಲ್ಲ ಹುಡುಗರೂ ಒಪ್ಪಿದರು. ನಾವು ಗಾಯಗೊಂಡ ಹುಡುಗನನ್ನು ಕರೆದುಕೊಂಡು ಶಾಲೆಗೆ ಮರಳಿದೆವು.

ಹುಡುಗರು 'ಓಹೋ... ಹೋಳೀ ಆಟಾ ಆಡಿದರೇನೋ....' ಎಂದು ಚಾಷ್ಟೀ ಮಾಡಿದರೆ ಅಧ್ಯಾಪಕರು ಸೋಟೆ ಓರೆ ಮಾಡಿ 'ಏನ್ರೀ ಲಕ್ಷ್ಮೀರಾಂ....ಯುದ್ಧದ ಆಟಾ ಆಡಿಸಿದಿರಂತ ಕಾಣಸತದ...' ಎಂದು ಕೊಂಕು ನುಡಿದರು. ಇನ್ನೊಬ್ಬ ಅಧ್ಯಾಪಕರು 'ಲಕ್ಷ್ಮೀರಾಂ....ಈ ಆಟಾ ಗೀಟಾ ಅಂತ ವಿನಾಕಾರಣ ಯಾಕ ತ್ರಾಸ ತಗೋತೀರಿ. ಈ ಹುಡಗೋರು ಎಂಥೆಂಥವರದೋ ಮನಿಗಳಿಂದ ಬಂದಿರತಾರ. ಅವರನ ನಾಕು ಗ್ವಾಡೀ ನಡವ ಕೂಡಿಹಾಕಿ ಬಾಯಿಪಾಠ ಮಾಡಲಿಕ್ಕೆ ಉರೂ ಹೊಡೀಲಿಕ್ಕೇ ಹಚ್ಚಬೇಕು. ಅವರನ ಹೊರಗ ಬಿಟ್ಟರ ಒಬ್ಬರ ತಲೀ ಒಬ್ಬರು

ಒಡ್ಯಾವರs....ನೀವs ನೋಡ್ರೀರಲಾ....ಇವತ್ತಿನ ದಿವಸ ದೇಶದೊಳಗ ಏನ ನಡದದ ಅನ್ನೂದನ....' ಎಂದು ಉಪದೇಶ ಮಾಡಿದರು. ಹೆಡ್‌ಮಾಸ್ತರರು 'ನನಗ ಗೊತ್ತ ಇತ್ತು....ಇಂಥಾ ಖ್ಯಾಂತಿ ಆಗತದ ಅಂತ ನನಗ ಮೊದಲs ತಿಳದಿತ್ತು. ಈ ಗೃಹಸ್ತನಿಗೆ ಬುದ್ಧಿ ಬರೂದಿಲ್ಲ. ಆಟಂತ ಆಟ !....ಶಾಲೆಗಳೊಳಗ ಆಟs ? ಅಸಂಬದ್ಧ ಅಸಂಬದ್ಧ....'. ನಾನು 'ಹಾಗಲ್ಲ ಸರ್...ಆಟಗಳೆಂದರೆ ನಿಜವಾದ ಶಿಕ್ಷಣ. ಅಸಾಮಾನ್ಯ ಪ್ರತಿಭೆ ಆಟದ ಬಯಲಿನಲ್ಲಿಯೇ ರೂಪತಾಳುತ್ತದಂತೆ. ಆಟಗಳು ಚಾರಿತ್ರ್ಯ ನಿರ್ಮಾಣದ ಮಾರ್ಗೋಪಾಯು....' ಎಂದು ನಾನು ವಾದಿಸಿದೆ. 'ಹಾಂ.... ಹೌದು. ಚಾರಿತ್ರ್ಯ ನಿರ್ಮಾಣವಾಗುತ್ತದೆ. ಅದಕ್ಕೇ ಅಲ್ಲವೇ ಈಗ ತಲೆ ಒಡೆದದ್ದು' ಎಂದು ಹೆಡ್‌ಮಾಸ್ಟರರು ವ್ಯಂಗ್ಯವಾಡಿದರು.

ನಮ್ಮ ಮಾತು ಹೀಗೆ ಸಾಗಿರುವಾಗಲೇ ತಲೆ ಒಡೆದುಕೊಂಡ ಹುಡುಗನ ತಂದೆ ಅಲ್ಲಿಗೆ ಬಂದು 'ಹಿಂತಾದ್ದೆಲ್ಲಾ ಕಲಸೂದು ಬೇಕಾಗಿಲ್ಲರೀ. ಈಗ ನೋಡ್ರಿ....ನನ್ನ ಮಗ ತಲೀ ಒಡಕೊಂಡಿದ್ದಾನೆ. ಹೆಡ್‌ಮಾಸ್ಟರ್ ಎಲ್ಲಿದ್ದಾರೆ... ನನ್ನ ಮಗನನ್ನು ಯಾರು ಹೊಡೆದವರು....' ಎಂದು ಸಿಟ್ಟಿನಿಂದ ಕೂಗಾಡತೊಡಗಿದನು. ನಾನು 'ಅಲ್ಲ ಯಜಮಾನರೇ... ಹುಡುಗರು ಆಟ ಆಡುವಾಗ ಜಗಳಾಡಿ ಅವನ ತಲೆ ಒಡೆದಿದೆ'. ಎಂದ ಹೇಳಿದೆ. 'ಅವನಿಗೆ ಆಟಾ ಆಡಲಿಕ್ಕೆ ಬಿಟ್ಟವರಾರು ? ಶಾಲೆಗಳು ಪಾಠಾ ಕಲಿಸಕ್ಕೆ ಅವನೋ ಏನು ಆಟ ಆಡಿಸಲಿಕ್ಕಾಗಿ ಅವನೋ ? ಇಡೀ ದಿನವೆಲ್ಲಾ ಹುಡುಗರು ರಸ್ತೆಯಲ್ಲಿ ಆಟ ಆಡಿಕೊಂಡು ಬಿದ್ದಿರತಾವೆ. ಶಾಲೆಗೆ ಬರುವದು ಪಾಠ ಕಲಿಯಲಿಕ್ಕೆ. ನಾನು ನಮ್ಮ ಹುಡುಗನ್ನ ಶಾಲೆಗೆ ಓದಲಿಕ್ಕೆ ಕಳಸೂದು ...' ಎಂದು ರಂಪಾಡಿಸಿದ. ನಾನು ಏನನ್ನೂ ಹೇಳಲಾರದವನಾಗಿ ಸುಮ್ಮನಾದೆ. ಹೆಡ್‌ಮಾಸ್ಟರರು ಮಧ್ಯ ಪ್ರವೇಶಿಸಿ 'ಯಜಮಾನರೇ ಇವರು ಹೊಸಬರು. ಕಲಿಸುವುದರಲ್ಲಿ ಏನೋ ಹೊಸಾ ಪ್ರಯೋಗ ಮಾಡುತ್ತಿದ್ದಾರೆ. ಇವತ್ತು ಈ ಆಟದ ಪ್ರಯೋಗ ಮಾಡಿ ದ್ದಾರೆ' ಎಂದರು. ಆ ಮನುಷ್ಯ 'ನೋಡಿರೀ ಈ ಪ್ರಯೋಗಗಿಯೋಗ ನನಗ ಬೇಕಾಗಿಲ್ಲ. ನಮ್ಮ ಹುಡಗೋರಿಗೆ ಎಲ್ಲಾರೂ ಕಲಸೂಹಂಗ ಕಲಸರಿ. ಇಲ್ಲಾತಂದರೆ ನಾನು ನಮ್ಮ ಹುಡಗನ್ನ ಸಾಲಿಗೇ ಕಳಸೂದುಲ್ಲ' ಎಂದು ಕೂಗಾಡಿದ. ಬೇರೆ ಮೇಷ್ಟು ಗಳೆಲ್ಲ ಮುಸಿ ಮುಸಿ ಎಂದು ನಗುತ್ತಿದ್ದರು. ನಾನು ಏನೂ ಮಾತಾಡದೇ ಮೂಕ ನಾದೆ. ಮುಖ ತಗ್ಗಿಸಿ ಮನೆಗೆ ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡೆ. ಎಂಥಾ ಅನಾಹುತ!....ಆದರೆ ಆಟ ಆಡಿಸುವುದನ್ನು ಬಿಡಲಾಗದು. ನಾನು ಈಗಾಗಲೇ ಆಟದ ನಿಯಮಗಳನ್ನು ಹೇಳಿದ್ದೇನೆ. ಇನ್ನಷ್ಟು ನಿಯಮಗಳನ್ನು ಸೇರಿಸಬೇಕು. ಅಂತೂ ಆಟ ಆಡಿಸುವುದನ್ನು ಬಿಡಲಾಗದು. ಅದು ನಿಜವಾದ ಶಿಕ್ಷಣ..

ಆಗ ನನಗೊಂದು ವಿಚಾರ ಬಂದಿತು....ನಾನು ಪೋಷಕರ ಒಂದು ಸಭೆಯನ್ನು

ಕರೆಯಬೇಕು. ಹೌದು... ಸಭೆ ಕರೆದು ಅವರಿಗೆ ಆಟಗಳ ಮಹತ್ವದ ಬಗೆಗೆ ಮನವರಿಕೆ ಮಾಡಿಕೊಡಬೇಕು ...ಮಕ್ಕಳನ್ನು ಸ್ವಚ್ಛವಾಗಿ ಇಡುವ ಬಗ್ಗೆಯೂ ಅವರ ಸಹಕಾರ ಕೇಳಬೇಕು. ಅವರ ಸಹಕಾರವಿಲ್ಲದಿದ್ದರೆ ಏನನ್ನೂ ಸಾಧಿಸಲಾಗದು. ಅವರಿಗೆ ಮನವರಿಕೆ ಮಾಡಿಕೊಟ್ಟರೆ ಖಂಡಿತವಾಗಿಯೂ ಅವರು ತಮ್ಮ ಮಕ್ಕಳ ಬಗೆಗೆ ಕಾಳಜಿ ವಹಿಸುತ್ತಾರೆ ನಾವು ಅಧ್ಯಾಪಕರು ಸೋಲುವದೇ ಇಲ್ಲಿ. ಪೋಷಕರ ಸಹಕಾರವನ್ನು ಕೇಳಲು ನಾವು ಹೋಗುವದೇ ಇಲ್ಲ ...ಹೌದು. ನಾಳೆಯೇ ನಾನು ಪೋಷಕರ ಸಭೆಯೊಂದನ್ನು ಕರೆಯುತ್ತೇನೆ....

ಮರುದಿನ ನಾನು ಪೋಷಕರ ಸಭೆ ಕರೆದೆ. ನಲವತ್ತು ಜನರನ್ನು ಆಹ್ವಾನಿಸಿದ್ದರೆ ಏಳು ಜನ ಬಂದಿದ್ದರು. ಅವರಲ್ಲಿಯೂ ಒಬ್ಬರಿಗೆ ಮನೆಯಿಂದ ಕರೆಬಂದು, ಅವರು ಎದ್ದುಹೋದರು. ಉಳಿದವರೂ ನನ್ನ ಮಾತುಗಳನ್ನು ನಿರಾಸಕ್ತಿಯಿಂದ ಆಕಳಿಸುತ್ತ ಕೇಳಿ ಅದು ಮುಗಿಯುತ್ತಲೇ ಧಡಧಡ ಎಂದು ಎದ್ದುಹೋದರು. ಶಿಕ್ಷಣಾಧಿಕಾರಿಗಳು ಮತ್ತು ಉಳಿದ ಮೇಷ್ಟ್ರುಗಳೆಲ್ಲ ನನ್ನನ್ನು ತಮಾಷೆ ಮಾಡುವಂತಾಯಿತು. ಮೇಷ್ಟ್ರುಗಳು ಅಮಾಸ್ತವದ ಪೊಟ್ಟೆ ಎಂದು ಆಡಿಕೊಳ್ಳುತ್ತ ಹೋದರು. ನನಗೆ ನಿರಾಸೆಯಾಯಿತು. ನಾನು ನಿಜವಾಗಿಯೂ ಅವಾಸ್ತವವಾದಿಯೇ ಇರಬೇಕೆನಿಸಿತು. ಈ ಜನಕ್ಕೆ ಅರ್ಥವಾಗುವಂತೆ ಮಾತಾಡುವ ರೀತಿಯೇ ನನಗೆ ತಿಳಿದಿರಲಿಕ್ಕಿಲ್ಲ ಎಂದುಕೊಂಡೆ.

●

ಮುಂದೆ ಆರೆಂಟು ದಿನಗಳ ನಂತರ ತರಗತಿಯ ಗ್ರಂಥಾಲಯದ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ತೊಡಗಿದೆ. ಈಗಾಗಲೇ ಹುಡುಗರಿಗೆ ಸಾಕಷ್ಟು ಕಥೆಗಳನ್ನು ಹೇಳಿದ್ದೆ. ನಾಲ್ಕನೆಯ ತರಗತಿಯ ಹುಡುಗರಾದ ಅವರು ಓದಿನ ರುಚಿ ಬೆಳೆಸಿಕೊಳ್ಳಬೇಕಾಗಿದ್ದಿತು. ನಾನು ಅವರಿಗೆ ಭಾಷೆ ಮತ್ತು ಇತಿಹಾಸದ ಪಠ್ಯ ಪುಸ್ತಕಗಳಿಗಾಗಿ ಹಣ ತರಲು ಹೇಳಿದೆ. ಮರುದಿನ ಒಬ್ಬ ಹುಡುಗ ನಮ್ಮ ತಂದೆ ಕಳೆದ ಪರೀಕ್ಷೆಯ ಫಲಿತಾಂಶದ ದಿನವೇ ಈ ಪುಸ್ತಕಗಳನ್ನು ಖರೀದಿಸಿದ್ದಾರೆ ಎಂದರೆ ಮತ್ತೊಬ್ಬನು ತನ್ನ ಅಣ್ಣನ ಹಳೆಯ ಪುಸ್ತಕಗಳನ್ನು ತಂದಿದ್ದ. ಇನ್ನೊಬ್ಬ ತನ್ನ ಚಿಕ್ಕಪ್ಪನು ಮುಂಬಯಿಯಿಂದ ಪುಸ್ತಕ ಕಳಿಸುತ್ತಾರೆ ಎಂದು ಹೇಳಿದ. ಮಗದೊಬ್ಬನು ತನ್ನ ತಂದೆ ತಾನೇ ಪುಸ್ತಕ ಕೊಡಿಸುತ್ತಾನಂತೆ. ನನ್ನ ಕೈಗೆ ಹಣ ಕೊಡಲು ಒಪ್ಪಲಿಲ್ಲ ಎಂದೂ ಹೇಳಿದ. ನಾನು–ಬಗಿಹರದಂಗಾತು....ಲೈಬ್ರರಿ ಸುರು ಮಾಡುವ ಕಲ್ಪನಾ ಬಹಳ ಸುಲಭವಾದದ್ದು. ಆದರೆ ಅದನ್ನು ಕಾರ್ಯಗತಗೊಳಿಸುವುದೆಂದರೆ ಸುಲಭವಲ್ಲ

ಎಂದು ನನಗೆ ನಾನೇ ಹೇಳಿಕೊಂಡೆ. ಕೆಲವು ಹುಡುಗರು ಹಣ ತಂದರು. ನಾನು ಅವರಿಂದ ಹಣ ಪಡೆದು ರಶೀದಿ ಕೊಟ್ಟೆನು. ಮರುದಿನ ಆ ಹುಡುಗರು ಪಠ್ಯಪುಸ್ತಕಗಳಿಗಾಗಿ ಪೀಡಿಸತೊಡಗಿದರು. ನಾನು ಅವರಿಗೆ–ನಿಮ್ಮ ಹಣದಿಂದ ಈ ಕಥೆಗಳ ಪುಸ್ತಕಗಳನ್ನು ತಂದಿದ್ದೇನೆ. ನೀವು ಕಥೆಗಳ ಪುಸ್ತಕ ಬೇಕೆನ್ನುತ್ತಿದ್ದಿರಲ್ಲ....ಎಂದು ನಾನು ತಂದ ಪುಸ್ತಕಗಳನ್ನು ಕೊಟ್ಟೆ. ಚಿತ್ರಗಳಿದ್ದ–ಬಣ್ಣಬಣ್ಣದ ಹೊದಿಕೆಯಿದ್ದ ಪುಸ್ತಕಗಳನ್ನು ನೋಡಿ ಆ ಹುಡುಗರಿಗೆ ಸಂತೋಷವಾಯಿತು. ಆ ಪುಸ್ತಕಗಳಿಗಾಗಿ ನೂಕು ನುಗ್ಗಲು ಉಂಟಾಯಿತು. 'ಇಲ್ಲಿ ಕೇಳಿ. ನಮ್ಮ ಹತ್ತಿರ ಈಗ ಹದಿನೈದು ಪುಸ್ತಕಗಳು ಮಾತ್ರ ಇವೆ. ಹದಿನೈದು ಹುಡುಗರು ಅವುಗಳನ್ನು ಓದಿರಿ. ಉಳಿದ ಇಪ್ಪತ್ತು ಜನ ನನ್ನ ಬಳಿ ಬಂದು ನಾನು ಓದುವುದನ್ನು ಕೇಳಿರಿ....ಈಗ ಮೊದಲ ಹದಿನೈದು ಜನ ಪುಸ್ತಕ ತೆಗೆದುಕೊಳ್ಳಿರಿ....' ಎಂದು ನಿರ್ದೇಶಿಸಿ ಉಳಿದ ಹುಡುಗರನ್ನು ನನ್ನ ಬಳಿಗೆ ಕರೆದೆ. ಹದಿನೈದು ಹುಡುಗರು ಪುಸ್ತಕ ದೊರೆತೊಡನೆಯೇ ಓದತೊಡಗಿದರು. ನಾನು–ನೀವು ಓದುತ್ತಿರುವ ಪುಸ್ತಕ ಮುಗಿದೊಡನೆಯೇ ಅದನ್ನು ತಂದು ನನ್ನ ಟೇಬಲ್ಲಿನ ಮೇಲಿಟ್ಟು ಬೇರೆ ಪುಸ್ತಕ ಕೊಂಡೊಯ್ಯಿರಿ. ಹೀಗೆ ನೀವು ಹದಿನೈದೂ ಪುಸ್ತಕಗಳನ್ನು ಓದಬಹುದು ಎಂದು ಹೇಳಿದೆ. ಇತ್ತ ಉಳಿದ ಹುಡುಗರಿಗೆ ಕಥೆಯ ಪುಸ್ತಕ ಒಂದನ್ನು ತೆಗೆದುಕೊಂಡು 'ಮಾದರಿಯ ಓದು' ಕೊಡತೊಡಗಿದೆ. ಯಾವ ಶಬ್ದಕ್ಕೆ ಎಲ್ಲಿ ಒತ್ತು ಕೊಟ್ಟು–ಧ್ವನಿಯ ತಕ್ಕ ಏರು ಇಳುವುಗಳೊಡನೆ ಹೇಗೆ ಓದುವುದೆಂದು ಓದಿ ತೋರಿಸತೊಡಗಿದೆ. ಆದರೆ ಹದಿನೈದು ಹುಡುಗರು ದೊಡ್ಡ ಗಲಾಟೆ ಎಬ್ಬಿಸಿದ್ದರು. ನಾನು ಅವರನ್ನು ತಡೆದು ಮೌನವಾಗಿ ಓದಲು ತಿಳಿಸಿದೆ. ಅವರು ಸ್ವಲ್ಪ ಧ್ವನಿ ತಗ್ಗಿಸಿ ಓದಲು ಸಾಧ್ಯವಾಯಿತು. ಅವರು ಮೌನದ ಓದು ಕಲಿತಿರಲಿಲ್ಲ. ಸ್ವಲ್ಪ ಹೊತ್ತು ಧ್ವನಿ ತಗ್ಗಿಸಿದವರು ಮತ್ತೆ ದೊಡ್ಡ ಗಂಟಲಿನಿಂದ ಓದತೊಡಗಿದರು. ಅವರನ್ನು ವರಾಂಡಾದಲ್ಲಿ ಬಿಡಿ ಬಿಡಿಯಾಗಿ ಕೂಡಿಸಿ ಓದಲು ಹಚ್ಚಿದೆ. ನಾನು ತರಗತಿಯಲ್ಲಿ ಉಳಿದು ಮಾದರಿಯ ಓದನ್ನು ಮುಂದುವರಿಸಿದೆ. ಹುಡುಗರೆಲ್ಲ ಅತ್ಯಂತ ಗಮನ ನೀಡಿ ಕೇಳಿಕೊಳ್ಳುತ್ತಿದ್ದರು. ಶಾಲೆಯ ಕೊನೆಯ ಗಂಟೆ ಹೊಡೆಯುವವರೆಗೆ ನಮ್ಮ ಈ ಚಟುವಟಿಕೆ ಮುಂದುವರಿಯಿತು.

●

ಕಥೆಗಳು–ಆಟ–ವಾಚನಾಲಯ–ಮಾದರಿ ಓದು–ವೈಯುಕ್ತಿಕ ಸ್ವಚ್ಛತೆಯ ಬಗೆಗಿನ ಕಾಳಜಿ ಇವುಗಳಲ್ಲಿ ಎರಡು ತಿಂಗಳು ಕಳೆದುಹೋದವು. ನಾನು ನನ್ನ ಕೆಲಸದ ಪರ್ಯಾಲೋಚನೆ ನಡೆಸಿದೆ. ನಾನು ಇನ್ನೂ ಆರಂಭಿಕ ಹಂತದಲ್ಲಿಯೇ ಇದ್ದೆ. ನಾನು ಪಠ್ಯ ವಿಷಯಗಳಾದ ಭಾಷೆ, ಗಣಿತ, ಇತಿಹಾಸ, ವಿಜ್ಞಾನ ಇವುಗಳನ್ನು ಕಲಿಸುವ ಬಗ್ಗೆ ಏನನ್ನೂ ಮಾಡಿರಲಿಲ್ಲ. ಬೇರೆ ತರಗತಿಗಳಲ್ಲಿ ಇವುಗಳ ಸಾಕಷ್ಟು ಪಾಠಗಳನ್ನು

ಪೂರೈಸಿದ್ದರು. ನಾನು ವರ್ಷ ಮುಗಿಯುವುದರೊಳಗಾಗಿಯೇ ಈ ಎಲ್ಲ ವಿಷಯಗಳನ್ನು ಪೂರ್ಣಗೊಳಿಸಬೇಕಿದ್ದಿತು. ಇದನ್ನು ಹೇಗೆ ಮಾಡುವುದೆಂದು ಯೋಚಿಸಿದರಾಯಿತು ಎಂದು ನನಗೆ ನಾನೇ ಹೇಳಿಕೊಂಡೆ. ಕಥೆ ಹೇಳುವದು ಮುಂದುವರಿದಿತ್ತು. ಹುಡುಗರು ಸ್ವಲ್ಪ ಶಿಸ್ತನ್ನು ಅಳವಡಿಸಿಕೊಳ್ಳುವಲ್ಲಿ ಈ ಕಥೆ ಹೇಳುವಿಕೆ ಸಹಾಯ ಮಾಡಿದ್ದಿತು. ಆದರೂ, ಚಂಪಕಲಾಲ್ ಮತ್ತು ರಮಣಲಾಲ್ ಅವರಿಗೆ ಕಥೆಗಳು ಅಷ್ಟೇನೂ ಸೇರುವುದಿಲ್ಲ. ರಾಮಜಿ ಮತ್ತು ಶಂಕರ ಇವರಿಗೆ ಈ ಕಥೆಗಳು ಬಹಳ ಸರಳ ಎನಿಸತೊಡಗಿದ್ದವು. ರಘು ಮತ್ತು ಮಧು ಯಾವಾಗಲೂ ಪರಸ್ಪರ ಕಣ್ಣು ಹೊಡೆಯುತ್ತ ಏನೋ ಸಂಕೇತ ಭಾಷೆಯಾಡುತ್ತಿರುತ್ತಾರೆ. ಅವರು ನಿರಾಸಕ್ತಿಯನ್ನು ಮತ್ತು ತುಂಟತನವನ್ನು ತೋರುತ್ತಿದ್ದರು. ಇವೆಲ್ಲದರ ಬಗೆಗೆ ಪರಿಹಾರ ಯೋಚಿಸಬೇಕಾಗಿದ್ದಿತು. ಇನ್ನು ಆಟಗಳ ಬಗ್ಗೆ ಹೇಳುವುದಾದರೆ–ಇವುಗಳಿಂದ ಹುಡುಗರು ನನಗೆ ಹೆಚ್ಚು ಆಪ್ತರಾದರಲ್ಲದೇ ನನ್ನನ್ನು ತಮ್ಮಲ್ಲಿ ಒಬ್ಬನೆಂದು ಭಾವಿಸುತ್ತ ಗೌರವಿಸತೊಡಗಿದ್ದರು. ನನ್ನನ್ನು ಕಂಡು ಮೊದಲಿನಂತೆ ಹೆದರುತ್ತಿರಲಿಲ್ಲ. ಆಟದ ನಂತರ ನಾನು ನೀಡುತ್ತಿದ್ದ ಮಾದರಿ ಓದನ್ನು ಲಕ್ಷಗೊಟ್ಟು ಕೇಳುತ್ತಿದ್ದರು. ಆದರೆ ಆಟದ ಸಮಯದಲ್ಲಿ ಮಾಡುತ್ತಿದ್ದ ಕೂಗಾಟ ಗಲಾಟೆಗಳು ಸ್ವಲ್ಪ ಮಾತ್ರ ಕಡಿಮೆಯಾಗಿದ್ದವು.

ವಾಚನಾಲಯದಲ್ಲಿ ಕೆಲವೇ ಪುಸ್ತಕಗಳು ಇದ್ದವು. ಪೋಷಕರಿಗೆ ಪಠ್ಯಪುಸ್ತಕಗಳ ಬದಲು ಈ ಕಥೆಗಳ ಪುಸ್ತಕಗಳನ್ನು ಕೊಳ್ಳುವ ಬಗ್ಗೆ ಮನ ಒಲಿಸಬೇಕಾಗಿದ್ದಿತು. ಆದರೆ ನನ್ನ ಮಾತನ್ನು ಕೇಳಲಾಗಲೀ ಅರ್ಥ ಮಾಡಿಕೊಳ್ಳಲಾಗಲೀ ಅವರಿಗೆ ಸಮಯವೇ ಇರಲಿಲ್ಲ ! ಅವರು ಹೇಳುತ್ತಿದ್ದದ್ದು ಒಂದೇ ಒಂದು–ಹುಡುಗರಿಗೆ ಪಾಠ ಹೇಳಿರಿ....ಆದರೆ ಎದೆಗೆಡಬೇಕಾಗಿಲ್ಲ. ನಾನು ಬೆನ್ನು ಹತ್ತಿದರೆ ಇಂದಲ್ಲ ನಾಳೆ ಇದು ಸಾಧ್ಯವಾಗುತ್ತದೆ. ಬೇಕಷ್ಟು ಸಮಯವಿದೆ. ಈ ಪ್ರಯೋಗ ಎನ್ನುವದು ಸುಲಭವಲ್ಲ. ನಮ್ಮ ಕಲ್ಪನೆ ಮತ್ತು ತಿಳುವಳಿಕೆ ವಿಶಾಲವಾಗುತ್ತ ಹೋದಂತೆ ನಮ್ಮ ಆದರ್ಶಗಳ ಮಟ್ಟವೂ ಗಗನಕ್ಕೇರುತ್ತ ಹೋಗುತ್ತವೆ ಮತ್ತು ಸಾಧನೆಯ ಮಾರ್ಗವೂ ಕಷ್ಟತರವಾಗುತ್ತ ಹೋಗುತ್ತದೆ.

ಅನೇಕ ಸಮಸ್ಯೆಗಳು ನನ್ನನ್ನು ಕಾಡುತ್ತಿದ್ದವು. ವೈಯಕ್ತಿಕ ಸ್ವಚ್ಛತೆಯ ಬಗೆಗಿನ ನನ್ನ ಪ್ರಯತ್ನಕ್ಕೆ ಏನೇನೂ ಯಶಸ್ಸು ದೊರೆತಿರಲಿಲ್ಲ. ಟೊಪ್ಪಿಗೆ ಮತ್ತು ಚಡ್ಡಿಗಳ ಅಚ್ಚುಕಟ್ಟುತನ ಮತ್ತು ಸ್ವಚ್ಛತೆಯ ಬಗೆಗಿನ ನನ್ನ ಪ್ರಯತ್ನಕ್ಕೆ ಒಂದೆರಡು ದಿನಗಳ ಕಾಲದ ಯಶಸ್ಸು ದೊರೆತು ಮತ್ತೆ ಅವು ತಮ್ಮ ಮೊದಲಿನ ಅಧಃಪತನಕ್ಕೆ ಕುಸಿದಿದ್ದವು. ಅವರ ಉಗುರುಗಳು ಯಥಾ ರೀತಿಯಾಗಿ ಹಾಗೆಯೇ ಉದ್ದವಾಗಿ

ಹೊಲಸು ತುಂಬಿಕೊಂಡಿರುತ್ತಿದ್ದವು. ಈ ಬಗೆಗಿನ ನನ್ನ ಪ್ರಯತ್ನ ಮುಂದುವರಿಸ ಬೇಕಾಗಿದ್ದಿತು. ಇದು ಅನಿವಾರ್ಯ. ಹೊಸ ಹವ್ಯಾಸಗಳನ್ನು ರೂಢಿಗತಗೊಳಿಸಲು ಪುನರಾವರ್ತನೆಯ ಅವಶ್ಯಕತೆ ಇದ್ದೇ ಇರುತ್ತದೆ.

ಬರೀ ಹುಡುಗರ ಸಮಸ್ಯೆ ಮಾತ್ರ ಅಲ್ಲ. ಅತ್ತ ಶಿಕ್ಷಣಾಧಿಕಾರಿಗಳು ದಿನದಿಂದ ದಿನಕ್ಕೆ ತಾಳ್ಮೆಯನ್ನು ಕಳೆದುಕೊಳ್ಳತೊಡಗಿದ್ದರು. ಅವರಿಗೆ ಅವರವೇ ಆದ ಸಮಸ್ಯೆ ಗಳಿದ್ದವು. ಅವರು ತಮ್ಮ ಮೇಲಧಿಕಾರಿಗಳನ್ನು ತೃಪ್ತಿಪಡಿಸಬೇಕಾಗಿದ್ದಿತು ಮತ್ತು ವಿರೋಧಿಗಳ ಬಾಯಿ ಮುಚ್ಚಿಸಬೇಕಾಗಿದ್ದಿತು. ಅವರು ನನ್ನ ಪ್ರಯೋಗದ ಯಶಸ್ಸಿ ನಲ್ಲಿ ಪಾಲುಗೊಳ್ಳಲು ಅಪೇಕ್ಷಿಸುವವರಾಗಿದ್ದರಿಂದ ನನ್ನ ಪ್ರಯೋಗದ ಫಲಿತಾಂಶದ ಬಗೆಗೆ ಅತ್ಯಾತುರವನ್ನು ಹೊಂದಿದ್ದರು. ಇಂಥ ಫಲಿತಾಂಶಗಳು ಅವರಿಗೆ ತಕ್ಷಣವೇ ಸಿಗಬೇಕಾಗಿದ್ದವು ! ಇನ್ನು ನನ್ನ ಸಹೋದ್ಯೋಗಿ ಅಧ್ಯಾಪಕರು ನನ್ನ ಬಗ್ಗೆ ಯಾವ ಕುತೂಹಲ ನಂಬಿಕೆಗಳನ್ನೂ ಹೊಂದಿರಲಿಲ್ಲ. ನಾನು ಒಬ್ಬ ಅವಾಸ್ತವವಾದಿ ಎಂದು ಅವರು ನಿರ್ಧರಿಸಿಬಿಟ್ಟಿದ್ದರು. ನಾನು ಹಾಗಿದ್ದರೂ ಇದ್ದಿರಬಹುದು. ಇಷ್ಟರ ಮೇಲೆ ನನಗೆ ಅನುಭವವಿರಲಿಲ್ಲ. ಆದರೆ ನನಗೆ ಅವರ ನಂಬಿಕೆಗಳು ಮತ್ತು ಕಲಿಸುವ ರೀತಿಯ ಬಗ್ಗೆ ಯಾವ ಸಹಾನುಭೂತಿಯೂ ಇರಲಿಲ್ಲ. ಅವರ ರೀತಿಗಳು ನನ್ನಲ್ಲಿ ಮಾನಸಿಕ ಕಿರಿಕಿರಿಯನ್ನುಂಟು ಮಾಡುತ್ತಿದ್ದವು. ನನ್ನ ಕಲಿಸುವ ರೀತಿಯೇ ಸರಿಯಾದದ್ದೆಂದು ನನಗೆ ನಂಬಿಕೆ ಹುಟ್ಟಿತ್ತು. ಅವರ ವಿದ್ಯಾರ್ಥಿಗಳು ಅವರ ಬೆನ್ನ ಹಿಂದೆಯೇ ಅವರನ್ನು ಅಣಕಿಸುತ್ತಿದ್ದರು. ಒಬ್ಬನಾದರೂ ವಿದ್ಯಾರ್ಥಿಯು ಅವರನ್ನು ಪ್ರೀತಿಯಿಂದ ಮಾತನಾಡಿಸುತ್ತಿರಲಿಲ್ಲ. ತರಗತಿಗಳಲ್ಲಿ ಅವರು ಮುಖ ಬಿಗಿದುಕೊಂಡು ಮೌನದಿಂದ ನಿಶ್ಚಲರಾಗಿ ಕುಳಿತಿರುತ್ತಿದ್ದರೆ ತರಗತಿಯ ಹೊರಗಡೆಗೆ ತರಲೆ ತಂಟೆ ಜಗಳಗಳಲ್ಲಿ ತೊಡಗಿರುತ್ತಿದ್ದರು. ನಾನು ನನ್ನ ವಿದ್ಯಾರ್ಥಿಗಳಿಗೆ ತಕ್ಕ ಸ್ವಾತಂತ್ರ್ಯ ನೀಡಿದ್ದ. ಅವರಿಗೆ ಅವರ ಬೇಚೈನನ್ನು ಹೊರಗೆಡವಲು ತಕ್ಕ ಅವಕಾಶ ಕಲ್ಪಿಸುತ್ತಿದ್ದೆ. ಹೀಗಾಗಿ ತರಗತಿಯ ಹೊರಗಡೆಗೆ ಅವರು ತರಲೆ ಮಾಡುತ್ತಿರಲಿಲ್ಲ. ಉಳಿದ ಮೇಷ್ಟ್ರುಗಳು, ಹುಡುಗರಿಗೆ ಹೆಚ್ಚಿನ ಸಲಿಗೆಯನ್ನು ಕೊಟ್ಟು ಅವರನ್ನು ಹಾಳು ಮಾಡುತ್ತಿದ್ದೇನೆ–ನಾನು ಬರೀ ಕಥೆ ಹೇಳುತ್ತ ಕಾಲ ಹಾಕುತ್ತಿದ್ದೇನೆ–ಬೇರೆ ಯಾವ ಪಾಠಗಳನ್ನೂ ಕಲಿಸುವುದಿಲ್ಲ–ನಾನು ಹುಡುಗರನ್ನು ಆಟ ಆಡಲು ಕರೆದೊಯ್ಯುತ್ತ ಅವರು ಪಾಠ ಕಲಿಯದಂತೆ ಮಾಡುತ್ತಿದ್ದೇನೆ–ಎಂದೆಲ್ಲ ಮಾತಾಡುತ್ತಿದ್ದರು .. ಸರಿ ನೋಡಿಯೇ ಬಿಡೋಣ. ಈ ಕಥೆಗಳು ಮತ್ತು ಆಟಗಳೇ ಶಿಕ್ಷಣದ ಅರ್ಧಭಾಗ ಎನ್ನುವದು ನನ್ನ ಮನಸ್ಸಿಗೆ ಖಾತ್ರಿಯಾಗಿದೆ. ಆದರೆ ಮುಂದೆ ನನ್ನ ಜವಾಬ್ದಾರಿ–ಉದ್ದೇಶ ಸಾಧನೆ ಹೆಚ್ಚು ಕ್ಲಿಷ್ಟವಾಗುತ್ತದೆನ್ನುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.... ○

ಪದಾರ್ಥ

-ರಸಿಕ

ಬಿಂಕದ ಸಿಂಗಾರಿ

ಬಿ. ಎಂ. ಶ್ರೀ. (ಮೂಲ : ಸ್ಕಾಟ್)

ಚಿಮ್ಮುತ ನಿರಿಯನು ಬನದಲಿ ಬಂದಳು
ಬಿಂಕದ ಸಿಂಗಾರಿ
ಹೊಮ್ಮಿದ ಹಸುರಲಿ ಮೆರೆಯಿತು ಹಕ್ಕಿ
ಕೊರಲಿನ ದನಿದೋರಿ

ಹೇಳಲೆ ಹಕ್ಕಿ ಚೆಲುವನು ಸಿಕ್ಕಿ,
ನನಗೆ ಮದುವೆಯೆಂದು ?
ಆಳಿಬ್ಬಿಬ್ಬರು ಕೇರಿಯ ಸುತ್ತಿ,
ಹೆಗಲಲಿ ಹೊತ್ತಂದು !

ಹಕ್ಕಿಯೆ ಹೇಳೈ ಒಸಗೆಯ ಮಂಚವ
ಸಿಂಗರಿಸುವರಾರು ?
ಸೊಕ್ಕಿನ ಹೆಣ್ಣೇ, ಮಣ್ಣಲಿ ಕುಳಿಯನು
ಆಳದಿ ತೆಗೆಯುವರು.

ಅಡವಿಯ ಮುಳ್ಳಲಿ ಮಿಂಚಿನ ಹುಳುಗಳು
ಪಂಜನು ಹಿಡಿಯುವುವು
ಗಿಡಗಳ ಹೊಳ್ಳಿನ ಗೂಬೆಗಳೆಲ್ಲಾ
ಬಾ ಹಸೆಗೆನ್ನುವುವು !

ಕವಿತೆಯ ಸಾಲುಗಳ ಹೊರಗೇ ಸಂಭವಿಸುವ ಕಾವ್ಯ ಈ ಬಿಂಕದ ಸಿಂಗಾರಿ ಸಾಲುಗಳ ಶಬ್ದಾರ್ಥಗಳಲ್ಲಿಯೇ ನಿಂತದ್ದಾದರೆ ಈ ಪದ್ಯ ನಮ್ಮ ಕೈಗೆ ಸಿಗದು.

ಪ್ರಕೃತಿ ಪ್ರೀತಿಯು ವಿಜೃಂಭಿಸುತ್ತಿದ್ದ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ ಸಂದರ್ಭದಲ್ಲಿ ನಿಂತು ಈ ಕವಿತೆಯ ಅನುಸಂಧಾನ ನಡೆಸಬೇಕಾಗುತ್ತದೆ.

ಕವಿತೆಯಲ್ಲಿ ಬರುವ ಸಿಂಗಾರಿ ಒಬ್ಬ ಹುಡುಗಿಯಲ್ಲ. ಹಾಗೆಯೇ ಆಕೆಯೊಂದಿಗೆ ಸಂಭಾಷಿಸುವ ಹಕ್ಕಿ ಹಕ್ಕಿಯಲ್ಲ. ಹಾಗಿದ್ದರೆ ಇವುಗಳು ಏನು ? ಸಿಂಗಾರಿ ಕೇಳುವ ಸಹಜ ಪ್ರಶ್ನೆಗಳಿಗೆ ಹಕ್ಕಿಯು ನೀಡುವ ವಿನಾಕಾರಣದ ಸಿಟ್ಟಿನ, ಕೆಡುಕಿನ ಉತ್ತರಗಳು ಈ ಹುಡುಗಿ ಮತ್ತು ಹಕ್ಕಿ ಯಾರೆಂಬುದರ ಬಗೆಗೆ ಸೂಚನೆ ನೀಡಬಲ್ಲವು. ಈ ಹುಡುಗಿ ಮತ್ತು ಹಕ್ಕಿ ಪರಸ್ಪರ ವಿರುದ್ಧವಾದ ಎರಡು ತತ್ವಗಳು. ಈ ಎರಡು ತತ್ವಗಳು ಕೃತಕ ನಾಗರೀಕತೆ ಮತ್ತು ಪ್ರಕೃತಿಗಳಾಗಿರುವ ಸಾಧ್ಯತೆ ಹೆಚ್ಚಾಗಿದೆ. ಈ ಸಿಂಗಾರಿ ಬಿಂಕದವಳು–ನಿರಿಗೆಗಳನ್ನು ಚಿಮ್ಮುತ್ತ 'ಬನ'ದಲ್ಲಿ ಹೊಕ್ಕು ತನ್ನ 'ಬಿಂಕ'ವನ್ನು ಮೆರೆಯಲು ನೋಡುವಳು. ಈ ಹುಡುಗಿ ನಿರ್ಜೀವ ಆವರಣದ ಬಿಂಕ ತೋರುವವಳು. ಇದಕ್ಕೆ ಪ್ರತಿಯಾಗಿ 'ಹಸುರಲಿ' ಮೆರೆಯುವ ಹಕ್ಕಿ ತನ್ನ ಜೀವಂತಿಕೆಯ, ಕೊರಳಿನ ದನಿಯನ್ನು ತೋರುವಂಥದು. ಮೊದಲ ಸ್ಟಾಂಜಾದ ಈ ತತ್ವಗಳ ಗ್ರಹಿಕೆ ಸಾಧ್ಯವಾದ ಮೇಲೆ ಪದ್ಯದ ಮುಂದಿನ ಓದು ಸುರಳೀತವಾಗುವುದು. ಪ್ರಕೃತಿ, ಈ ಕೃತಕ ನಾಗರೀಕತೆಗೆ ಅದರ ತಾತ್ಪೂರ್ತಿಕತೆಯನ್ನು ಬಿರುನುಡಿಗಳ ಮೂಲಕ ತಿಳಿಸುವುದು. ನೆಲವನಗಲಿ ಮಂಚದ ಕೃತಕತೆಯನ್ನೇರುವ ನಾಗರೀಕತೆ ಮಣ್ಣಿನಲಿ ಹೂತು ಮರೆಯಾಗಿ ಹೋಗುವುದೆನ್ನುವ ಎಚ್ಚರಿಕೆಯ ಮಾತನ್ನು ಹೇಳುತ್ತದೆ.

ನಗರೀಕರಣ, ಬೃಹತ್ ಉದ್ಯೋಗಗಳಿಂದ ಪರಿಸರವನ್ನು ನಾಶಗೈಯ್ಯುತ್ತಿರುವ ಇಂದಿನ ವಾಣಿಜ್ಯ ಸಂಸ್ಕೃತಿಯ ಸಂದರ್ಭದಲ್ಲಿ ಈ ಪದ್ಯದ ಅರ್ಥ ಇನ್ನಷ್ಟು ಪ್ರಜ್ವಲವಾಗಿ ತೋರಬಹುದು. ○

ಪ್ರಾಣದ ರಣಕೋಲಾಹಲಕ್ಕೆ ಹಿಮ್ಮೊಗ್ಗಲು ಇಂದ್ರಿಯದ ಐಂದ್ರಜಾಲಿಕ ಸೃಷ್ಟಿ: ಮುಮ್ಮೊಗ್ಗಲು ಚಿದಾಕಾಶದ ಮಾನಸಸೃಷ್ಟಿ. ಜಗತ್ತೆ ಚಿತ್ರವಾಗಿ ಬಿಡುವುದು. ಜೀವಿಯು ಸಾಕ್ಷಿಯಾಗುವನು. ಆ ಅನುಭವವು ಕೇವಲ ಬೋಧಸ್ವರೂಪವಾಗುವದು. ಈ ದೃಷ್ಟಿಯೇ ಪ್ರಕೃತಿಯಂತೆ ಕಲಾಕೃತಿಗಳ ಕಡೆಗೆ ಹೊರಳಿದರೆ. ರಸಿಕ ಸಹೃದಯತೆಯು ಪರಮಾವಧಿಯನ್ನು ಮುಟ್ಟುವದು. ಈ ಸಹೃದಯತೆಯಿರದಿದ್ದರೆ ಪ್ರಕೃತಿಯೂ ಹಾಳು; ಕೃತಿಯೂ ಹಾಳು. ಸೃಷ್ಟಿಯ ಸಾಫಲ್ಯವು ಸಾಕ್ಷಿಯಾಗಬಲ್ಲ ಹೃದಯದಲ್ಲಿದೆ. ಪೆಸರಿಟ್ಟು ಮೆಚ್ಚಬಲ್ಲ ಭೋಗಿ ಬೇಕು ಸೃಷ್ಟಿಗೆ.

—ಡಾ॥ ದ. ರಾ. ಬೇಂದ್ರೆ

ಸ್ವಾತಂತ್ರ್ಯದತ್ತ....

(ನೆಲ್ಸನ್ ಮಂಡೆಲಾನ ಆತ್ಮಚರಿತ್ರೆಯಿಂದ)

-ನೆಲ್ಸನ್ ಮಂಡೆಲಾ

ಗಟ್ಟಿಜೀವ, ಬಲವಾದ ದೇಹಪ್ರಕೃತಿ, ಥೆಂಬು ರಾಜ ಮನೆತನದೊಡನೆ ಬಲವಾದೊಂದು ಸಂಬಂಧ : ಇಷ್ಟನ್ನು ಬಿಟ್ಟರೆ ನಾನು ಹುಟ್ಟಿದಾಗ ನನ್ನ ತಂದೆ ನನಗೆ ಕೊಟ್ಟದ್ದೆಂದರೆ ರೋಲಿಹಾಲಾ ಎಂಬ ಹೆಸರು ಮಾತ್ರ. ಖೋಸಾ ಭಾಷೆಯಲ್ಲಿ ರೋಲಿಹಾಲಾ ಎಂದರೆ, ಅಕ್ಷರಶಃ, ಮರದ ಕೊಂಬೆಯನ್ನು ಜಗ್ಗುವುದು ಎಂದರ್ಥ. ಆಡು ಭಾಷೆಯಲ್ಲಿ ಕಿಡಿಗೇಡಿ ಎಂದೂ ಆಗುತ್ತದೆ. ಹೆಸರೇ ನಮ್ಮ ಭವಿಷ್ಯ ಸೂಚಕವೆಂದಾಗಲೀ ಅಥವಾ ತಂದೆಯು ನನ್ನ ಭವಿಷತ್ತನ್ನು ಮುಂದಾಗಿಯೇ ಕಂಡಿದ್ದನೆಂದಾಗಲೀ ನಾನು ನಂಬೆ. ಆದರೆ ನಾನು ಬೆಳೆದಂತೆ ನನ್ನ ಬಂಧುಗಳು ಹಾಗೂ ಸ್ನೇಹಿತರು ನಾನು ಎಬ್ಬಿಸಿದ ಹಾಗೂ ಎದುರಿಸಿ ನಿಂತ ಹಲವು ಬಿರುಗಾಳಿಗಳ ಕಾರಣವನ್ನು ನನ್ನ ಹೆಸರಿಗೆ ಅಂಟಿಸುವರು. ನಾನು ಶಾಲೆಗೆ ಸೇರಿದ ದಿನದವರೆಗೂ ನನ್ನ ಹೆಚ್ಚು ಪರಿಚಿತ ಕ್ರಿಶ್ಚಿಯನ್ ಹೆಸರು ನನಗೆ ಬಂದಿರಲಿಲ್ಲ.

ಟ್ರಾನ್ಸ್‌ಕೀ ರಾಜ್ಯದ ರಾಜಧಾನಿ ಉಮ್‌ಟಾಟಾದ ಜಿಲ್ಲೆಯಲ್ಲಿ ಎಂಬಾಷೆ ನದಿದಡದ ಎಂವೆಜೋನಲ್ಲಿ ೧೯೧೮ರ ಜುಲೈ ೧೮ ರಂದು ನಾನು ಹುಟ್ಟಿದೆ. ಮೊದಲ ಮಹಾಯುದ್ಧದ ಕೊನೆ, ವಿಶ್ವದಾದ್ಯಂತ ಮಿಲಿಯಗಟ್ಟಲೆ ಜನರನ್ನು ಬಲಿ ತೆಗೆದುಕೊಂಡ ಇನ್‌ಫ್ಲುಎಂಜಾ ಕಾಯಿಲೆ, ಅಲ್ಲದೆ ದಕ್ಷಿಣ ಆಫ್ರಿಕೆಯ ಆಫ್ರಿಕನ್ನರ ಕೊರತೆಗಳನ್ನು ವರ್ಸೇಲಿನ್ ಶಾಂತಿ ಸಮ್ಮೇಳನದಲ್ಲಿ ಮಂಡಿಸಲು ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ ಆಯೋಗದ ಪ್ರಯಾಣ ; ಇವು ನಾನು ಹುಟ್ಟಿದ ವರ್ಷದಲ್ಲಿ ಸಂಭವಿಸಿದವು.

ನನ್ನ ತಂದೆ ಎಂ ಫಕನಯೀಸವ ಗ್ಯಾಡ್ಲ ಹೆನ್ರಿ ತನ್ನ ಅನುವಂಶೀಯತೆಯಿಂದ ಹಾಗೂ ಪಾರಂಪರಿಕವಾಗಿ ಊರ ಮುಖ್ಯಸ್ಥನಾಗಿದ್ದ. ಥಂಬು ಬುಡಕಟ್ಟಿನ ರಾಜನಿಂದ ಅವನು ಎಂವೆಜೋದ ಮುಖ್ಯನೆಂದು ನೇಮಕಗೊಂಡಿದ್ದ.ಆದರೆ ಬ್ರಿಟಿಷ್ ಆಳ್ವಿಕೆಯಲ್ಲಿ ಅದು ತತ್ಸಮಾನವಾಗಿ ನ್ಯಾಯಿಕ ಸ್ಥಳೀಯ ದಂಡಾಧೀಶನೆಂದಾಗಬೇಕಾಯಿತು. ಈ ಸ್ಥಾನಿಕ ಬಲದಿಂದಾಗಿ ಆತನು ಗೌರವಧನಕ್ಕೂ, ಸರ್ಕಾರವು ದನಗಳ ಲಸಿಕೆ ಕಾರ್ಯಕ್ರಮ ಹಾಗೂ ಗೋಮಾಳಗಳ ಮೇಲೆ ವಿಧಿಸುತ್ತಿದ್ದ ಸೆಸ್ (ಕಂದಾಯ ಭಾಗ)ನ ಒಂದು ಭಾಗ ಆದಾಯಕ್ಕೂ ಪಾತ್ರನಾದನು. ಈ ಸ್ಥಾನವು ಗೌರವಾನ್ವಿತವಾದರೂ ೭೫ ವರ್ಷಗಳ ಹಿಂದೆಯೇ, ಸ್ನೇಹಪರವಲ್ಲದ ಬಿಳಿಯರ ಸರ್ಕಾರದ ನಿಯಂತ್ರಣಕ್ಕೊಳ ಪಟ್ಟು ಅದು ನಾಮಕಾವಸ್ಥೆಯ ಹುದ್ದೆಯಾಗಿಬಿಟ್ಟಿತ್ತು.

●

ಚಿಕ್ಕಂದಿನಿಂದಲೂ ನನ್ನ ಅತಿ ಹೆಚ್ಚು ಸಮಯವನ್ನು ವೆಲ್ಡ್‌ಕಾವಲುಗಳಲ್ಲಿ ಓರಗೆ ಹುಡುಗರೊಡನೆ ಆಟ ಜಗಳಾಟಗಳಲ್ಲಿ ಕಳೆಯುತ್ತಿದ್ದೆ. ತಾಯಿಯ ಸೆರಗಿಗೆ ಅಂಟಿಕೊಂಡ ಹುಡುಗರನ್ನು ಅಳುಮುಂಜಿಗಳೆಂದೇ ಗಣಿಸಲಾಗುತ್ತಿತ್ತು. ರಾತ್ರಿ ನಾನು ಇವರೊಡರೆಯೇ ಊಟ ಮಾಡಿ ಮಲಗುತ್ತಿದ್ದೆ. ನಾನು ದನಗಾಹಿಯ ಕೆಲಸಕ್ಕೆ ತೊಡಗಿದಾಗ ನನಗೆ ಐದು ಕೂಡ ತುಂಬಿರಲಿಲ್ಲ. ಕುರಿ ಮತ್ತು ಕರುಗಳನ್ನು ಕಾಯುತ್ತ ಖೋಸಿ ಜನರು ಸಾಕುಪ್ರಾಣಿಗಳೊಡನೆ ಒಂದು ಅನುಭಾವೀ ಸಂಬಂಧ ವನ್ನೇ ಇಟ್ಟುಕೊಂಡಿದ್ದಾರೆ ; ಅವುಗಳನ್ನು ಆಹಾರ, ಸಂಪತ್ತುಗಳಂತೆ ಅಷ್ಟೇ ಅಲ್ಲ, ದೇವರ ಆಶೀರ್ವಾದ ಮತ್ತು ಸುಖದ ಮೂಲ ಎಂದೇ ಭಾವಿಸುತ್ತಾರೆಂಬುದನ್ನು ಅರಿತೆ. ಹೊಲಗಳಲ್ಲೇ ನಾನು ಹಕ್ಕಿಗಳನ್ನು ಹೊಡೆದು ಉದುರಿಸುವ, ಜೇನು, ಹಣ್ಣು ಗಳು ಮತ್ತು ಖಾದ್ಯ ಕಂದ ಮೂಲಗಳನ್ನು ಸಂಗ್ರಹಿಸುವ, ಹಸುವಿನ ಮೊಲೆಗಳಿಂದ ನೇರವಾಗಿ ಬೆಚ್ಚಗಿನ ಸಿಹಿ ಹಾಲನ್ನು ಹೀರಿ ಕುಡಿಯುವ, ಸ್ವಚ್ಛ ನೀರಿನ ತಂಪು ಹಳ್ಳಗಳಲ್ಲಿ ಈಜುವ ಮತ್ತು ಹುರಿಗೊಳಿಸಿದ ಹರಿತ ತಂತಿ ಮತ್ತು ದಾರದ ತುದಿ ಗಳಿಂದ ಮೀನು ಹಿಡಿಯುವುದನ್ನು ಕಲಿತೆ. ಆಫ್ರಿಕದ ಯಾವುದೇ ಹುಡುಗನಿಗೆ ಅಗತ್ಯ ವೆನಿಸಿದ ದಂಡ ಯುದ್ಧದ ಕೌಶಲವನ್ನೂ ಕಲಿತೆ. ಮತ್ತು ದಾಳಿ ತಡೆ, ಒಂದು ದಿಕ್ಕಿನಲ್ಲಿ ನುಗ್ಗುತ್ತಲೇ ಮತ್ತೊಂದು ದಿಕ್ಕಿನತ್ತ ಹೊಡೆಯುವುದು, ಎದುರಾಳಿಯಿಂದ ದೂರ ಚಿಮ್ಮುವುದು ಈ ತಂತ್ರಗಳನ್ನು ಸಾಧಿಸಿದೆ. ಆಗಿನಿಂದಲೇ ವೆಲ್ಡ್‌ಹುಲ್ಲು ಗಾವಲಿನ ಬಗ್ಗೆ, ಬಯಲಿನ ಬಗೆಗೆ, ಪ್ರಕೃತಿಯ ಸರಳ ಸೌಂದರ್ಯಗಳು ಮತ್ತು ದಿಗಂತದ ಅಂಚುಗಳ ಬಗೆಗೆ ನನ್ನಲ್ಲಿ ಪ್ರೀತಿ ಬೆಳೆದವು.

೧೯೪೬ರ ಪ್ರಾರಂಭದಲ್ಲಿ ಇವೆಲಿನ್ ಮತ್ತು ನಾನು ಪೂರ್ವ ಆರ್ಲೆಂಡೋದ ನಮ್ಮ ಎರಡು ರೂಮಿನ ಮುನಿಸಿಪಲ್ ಸ್ವಂತ ಮನೆಗೆ ಹೋದೆವು. ನಂತರ ನಂಬರ್ ೮೧೧೫ರ ಪಶ್ಚಿಮ ಆರ್ಲೆಂಡೋದಲ್ಲಿನ ಮನೆಗೆ. ಕಡ್ಡಿಪೆಟ್ಟಿಗೆಗಳಂತಹ, ನಗರಸಭೆಯ ಮನೆಗಳಿರುವ, ಧೂಳು ತುಂಬಿದ ಪಶ್ಚಿಮ ಆರ್ಲೆಂಡೋ ಮುಂದೆ ಗ್ರೇಟರ್ ಸೊವೆಟೋದ ಭಾಗವಾಯಿತು. ಸೊವೆಟೋ ಅಂದರೆ 'ಸೌಥ ವೆಸ್ಟರ್ನ್ ಟೌನ್‌ಶಿಪ್' ಉತ್ತರಭಾಗದಲ್ಲಿದ್ದ ಬಿಳಿಯರು ತಮ್ಮ ಪ್ರದೇಶವನ್ನು ಕರೆದುಕೊಳ್ಳುತ್ತಿದ್ದ ರೀತಿಯಲ್ಲಿ ನಮ್ಮ ಮನೆಯಿದ್ದ ಪ್ರದೇಶವನ್ನು ನಾವು ವೆಸ್ಟ್‌ಕ್ಲಿಫ್ ಎಂದು ಕರೆಯುತ್ತಿದ್ದೆವು.

ಇವೆಲಿನ್ ಮತ್ತು ನನಗೆ ಸರ್ಕಾರವು ಮನೆಯನ್ನು ಕೊಟ್ಟಿದ್ದಕ್ಕೆ ಕಾರಣವೆಂದರೆ ನಾವೀಗ ಇಬ್ಬರೇ ಇರಲಿಲ್ಲ. ಮೂವರಾಗಿದ್ದೆವು. ಆ ವರ್ಷ ನಮ್ಮ ಮೊದಲನೆಯ ಮಗ ಮದಿಬ ಥೆಂಬಿಕಿಲೆ ಹುಟ್ಟಿದ. ಅವನಿಗೆ ನಮ್ಮ ಪದ್ಧತಿಯಂತೆ ಮದಿಬಾ ಎಂದು ಹೆಸರಿಟ್ಟಿದ್ದರೂ ಥೆಂಬಿ ಎಂದು ಕರೆಯುತ್ತಿದ್ದೆವು. ಅವನು ದುಂಡುದುಂಡಾಗಿ ಖುಷಿಯಾಗಿ ಕಾಣುತ್ತಿದ್ದ ಹುಡುಗ. ತಂದೆಗಿಂತ ತಾಯಿಯನ್ನೇ ಹೆಚ್ಚು ಹೋಲುವನೆನ್ನುತ್ತಿದ್ದರು. ಈಗ ನಾನೊಬ್ಬ ಉತ್ತರಾಧಿಕಾರಿಯನ್ನು ಹೊಂದಿದ್ದೆ–ಅವನಿಗೆ ಒಪ್ಪಿಸಿ ಕೊಡಲೇನೂ ಇಲ್ಲದಿದ್ದರೂ. ಆದರೆ ಮದೀಬ ಕುಲವನ್ನು, ಮೆಂಡೆಲಾ ಹೆಸರನ್ನು ಚಿರಸ್ಥಾಯಿಗೊಳಿಸಿದ್ದೆ–ಅದು ಖೋಸಿ ಗಂಡಸಿನ ಕರ್ತವ್ಯವಾಗಿತ್ತು ಸಹ.

ಅಂತೂ ನಾನು ಒಂದು ಖಚಿತ ನೆಲೆಯನ್ನು ಪಡೆದೆ....

●

ರಾಷ್ಟ್ರೀಯ ಪಕ್ಷದ ಗೆಲುವು ಆಫ್ರಿಕೇತರರ ದಬ್ಬಾಳಿಕೆಯ ಪ್ರಾರಂಭವಾಗಿತ್ತು. ಆಂಗ್ಲಭಾಷೆಯು ಅಧಿಕೃತವಾಗಿ ಆಫ್ರಿಕಾನ್ ನಂತರ ಎರಡನೆಯ ಭಾಷೆಯಾಗುವುದಿತ್ತು. ರಾಷ್ಟ್ರೀಯ ಪಕ್ಷದ ಗುರಿಯನ್ನು ಅವರ ಘೋಷಣೆ ಸಮರ್ಥವಾಗಿ ಸಂಗ್ರಹಿಸುತ್ತಿತ್ತು–"ನಮ್ಮದೇ ಜನತೆ, ನಮ್ಮದೇ ಭಾಷೆ, ನಮ್ಮದೇ ನಾಡು". ಆಫ್ರಿಕೇತರ ವಿರೂಪಗೊಂಡ ಜ್ಯೋತಿಶಾಸ್ತ್ರದಂತೆ ರಾಷ್ಟ್ರೀಯ ಪಕ್ಷದ ವಿಜಯವು ಇಸ್ರೇಲಿಗಳು ಪವಿತ್ರ ನಾಡಿಗೆ ಯಾತ್ರೆ ಮಾಡಿದಂಥ ಘಟನೆಯಾಗಿತ್ತು. ಅವರಿಗೆ ದೇವರಿತ್ತ ವಚನವು ಸಾಕಾರವಾದಂತೆ ಹಾಗೂ ದಕ್ಷಿಣ ಆಫ್ರಿಕಾ ಎಂದೆಂದಿಗೂ ಬಿಳಿಯರ ನಾಡು ಆಗಿರಬೇಕೆಂಬ ಅವರ ದೃಷ್ಟಿಕೋನಕ್ಕೆ ಜಯವಾದಂತೆ ಎಂದು ಭಾವಿಸಲು ಯೋಗ್ಯವಾಗಿತ್ತು.

ಈ ವಿಜಯ ಒಂದು ಆಘಾತವಾಗಿತ್ತು. ಸಂಯುಕ್ತ ಪಕ್ಷ ಮತ್ತು ಜನರಲ್ ಸ್ಮಟ್ಸ್ ಇವರು ನಾಜಿಗಳನ್ನು ಪರಾಭವಗೊಳಿಸಿ ಇದೀಗ ಅವರು ರಾಷ್ಟ್ರೀಯ

ಪಕ್ಷವನ್ನು ಸೋಲಿಸುವರೆಂಬ ಪರಿಸ್ಥಿತಿ ಇತ್ತು. ಚುನಾವಣೆಯ ದಿನ ನಾನು, ಆಲಿವರ್ ಟ್ಯಾಂಬೋ ಮತ್ತು ಇತರೆ ಹಲವರೊಡನೆ ಜೊಹಾನ್ಸ್‌ಬರ್ಗ್‌ನಲ್ಲಿ ಒಂದು ಸಭೆ ನಡೆಸಿದವು. ನಾವು ಒಂದು ರಾಷ್ಟ್ರೀಯ ಸರ್ಕಾರದ ಬಗ್ಗೆ ಆಲೋಚಿಸಲಿಲ್ಲ ; ಏಕೆಂದರೆ ಅಂಥ ನಿರೀಕ್ಷೆಯೇ ಸಾಧ್ಯವಿರಲಿಲ್ಲ. ಇಡೀ ರಾತ್ರಿ ಸಭೆ ನಡೆದು ಬೆಳಗಿನ ಜಾವ ಹೊರ ಬಂದಾಗ ಒಬ್ಬ ಪೇಪರ್ ಅಂಗಡಿಯುವ 'ರ್‍ಯಾಂಡ್ ಡೇಲಿ ಮೇಲ್' ಮಾರುತ್ತಿದ್ದ. ರಾಷ್ಟ್ರೀಯ ಪಕ್ಷದವರು ಗೆದ್ದಿದ್ದರು. ನಾನು ಸ್ತಂಭಿತನಾಗಿದ್ದೆ ಮತ್ತು ವಿಚಲಿತನಾದೆ. ಆದರೆ ಆಲಿವರ್ ಇನ್ನೂ ಸಮಾಧಾನದ ಅಭಿಪ್ರಾಯ ಕೊಟ್ಟ. ಅದು ಅವನಿಗೆ ಇಷ್ಟವಾಗಿತ್ತು. "ಏಕೆಂದು ಹೇಳಲಾರೆ. ಇದು ನನಗೆ ಇಷ್ಟವಾಗಿದೆ. ಈಗ ನಮಗೆ ತಿಳಿಯುತ್ತದೆ ; ನಮ್ಮ ಶತ್ರುಗಳು ಯಾರು–ನಾವೆಲ್ಲಿ ನಿಂತದ್ದೇವೆ ಎಂದು"

ಜನರಲ್ ಸ್ಮಟ್ಸ್ ಸಹ, ವರ್ಣಭೇದ ನೀತಿಯ ಬಗೆಗೆ ತನ್ನ ಅಸಮ್ಮತಿ ಸೂಚಿಸುತ್ತ ವರ್ಣಭೇದವು ಪೂರ್ವಾಗ್ರಹ ಮತ್ತು ಭಯದಿಂದ ಹುಟ್ಟಿದ ಪರಿಕಲ್ಪನೆ ಎಂದು ನುಡಿದ. ಇದರ ಅಪಾಯವನ್ನು ಗ್ರಹಿಸಿದ. ರಾಷ್ಟ್ರೀಯ ಪಕ್ಷದ ವಿಜಯದ ಕ್ಷಣದಿಂದಲೇ ನಮ್ಮ ನಾಡು ಮುಂದೆ, ಬಿಗಿ ವಾತಾವರಣದ–ಸಂಘರ್ಷದ ನಾಡಾಗುವು ದೆಂದು ನಮಗೆ ಗೊತ್ತಿತ್ತು. ದಕ್ಷಿಣ ಆಫ್ರಿಕಾ ಇತಿಹಾಸದಲ್ಲಿ ಮೊದಲ ಬಾರಿಗೆ ಪೂರ್ಣವಾಗಿ ಆಫ್ರಿಕೇತರ ಜನರ ಪಕ್ಷ ಸರ್ಕಾರವನ್ನು ನಡೆಸುವುದಿತ್ತು. ತನ್ನ ಭಾಷಣ ದಲ್ಲಿ ಮಲಾನ್ "ದಕ್ಷಿಣ ಆಫ್ರಿಕಾ ಇನ್ನೊಮ್ಮೆ ನಮಗೆ ಸೇರಿದೆ..." ಎಂದು ಘೋಷಿಸಿದ.

೧೯೫೬ರ ಡಿಸೆಂಬರ್ ೫ರಂದು ಬೆಳಗಾದ ತಕ್ಷಣ ನನ್ನ ಮನೆ ಬಾಗಿಲು ಜೋರಾಗಿ ಬಡಿದು ನನ್ನನ್ನು ಎಬ್ಬಿಸಿತು. ಯಾವ ನೆರೆಯವನೂ, ಅಥವಾ ಸ್ನೇಹಿತನೂ ಹಾಗೆ ಬಾಗಿಲು ಬಡಿಯುವುದಿಲ್ಲ. ಆ ಬಡಿತದಿಂದಲೇ ಅದು ಪೊಲೀಸ ರೆಂದು ಗೊತ್ತಾಯಿತು. ಮುಖ್ಯ ಪೇದೆ ರೂಸೋ, ನಮ್ಮ ಪ್ರದೇಶದಲ್ಲಿ ಚಿರಪರಿಚಿತ ನಾಗಿದ್ದ ಒಬ್ಬ ಭದ್ರತಾ ಅಧಿಕಾರಿ ಮತ್ತು ಇಬ್ಬರು ಪೇದೆಗಳು–ವಾರಂಟ್ ತೆಗೆದು ತೋರಿಸಿದರು. ಪೊಲೀಸರು ಮನೆಯನ್ನೆಲ್ಲ ಕ್ರಮವಾಗಿ ಶೋಧಿಸತೊಡಗಿದರು. ಮಕ್ಕಳು ಎದ್ದರು. ಅವರನ್ನು ನಾನು ದೃಷ್ಟಿಯಿಂದಲೇ ಸುಮ್ಮನಿರಿಸಿದೆ. ಅವರು ಸಾಂತ್ವನಕ್ಕಾಗಿ ನನ್ನತ್ತ ನೋಡುತ್ತಿದ್ದರು.ಡ್ರಾಗಳನ್ನು ಪೆಟ್ಟಿಗೆಗಳನ್ನು ಕಿತ್ತಿಹಾಕಿದರು. ನಿಷೇಧಿತವಾದದ್ದೇನಾದರೂ ಸಿಕ್ಕೀತೆಂದು ಹುಡುಕಿದರು. ೪೫ ನಿಮಿಷಗಳ ನಂತರ ರೂಸೋ ಬಾಯಿ ಬಿಟ್ಟ. "ಮಂಡೆಲ, ನಿಮ್ಮನ್ನು ಬಂಧಿಸಲು ನಮ್ಮಲ್ಲಿ

ವಾರೆಂಟ್ ಇದೆ, ನನ್ನೊಡನೆ ಬನ್ನಿ". ನಾನು ವಾರೇಟ್ ನೋಡಿದೆ. ಅದರ ಸಂದೇಶ ನನಗೆ ಅಪ್ಪಳಿಸಿದಂತಾಯಿತು–"ಭಾರೀ ದೇಶದ್ರೋಹ !"

ಅವರೊಡನೆ ಕಾರಿಗೆ ನಡೆದೆ. ಮಕ್ಕಳೆದುರಿನಲ್ಲೇ ಬಂಧನಕ್ಕೊಳಗಾಗುವುದು ರೋಚಕ ಅನುಭವವೇನಲ್ಲ–ಅದೂ ತಾನು ಮಾಡುತ್ತಿರುವುದುಸರಿ ಎಂದು ಗೊತ್ತಿದ್ದಾಗ ಕೂಡ. ಆದರೆ ಮಕ್ಕಳು ಪರಿಸ್ಥಿತಿಯ ಸಂಕೀರ್ಣತೆಯನ್ನು ತಿಳಿದುಕೊಳ್ಳಲಾರರು. ಮಾತಾಡದೇ, ಬಿಳಿಯ ಅಧಿಕಾರಿಗಳು ಯಾವ ವಿವರಣೆ ನೀಡದೇ ತಮ್ಮ ತಂದೆಯನ್ನು ಕರೆದುಕೊಂಡು ಹೋಗುವುದನ್ನು ಅವರು ನೋಡುತ್ತಾ ನಿಂತರು.

ಇವೆಲಿನ್ ಮತ್ತು ನಾನು ಒಪ್ಪಂದಕ್ಕೆ ಬಾರದಂತಹ ಭಿನ್ನಾಭಿಪ್ರಾಯ ಹೊಂದಿದ್ದೆವು. ನಾನು ಹೋರಾಟ ಬಿಡಲಾರದವನಾಗಿದ್ದೆ. ತನ್ನ ಮತ್ತು ಸಂಸಾರ ಬಿಟ್ಟು ಬೇರೆಡೆ ನನ್ನ ಗಮನ ಹರಿಯಬಾರದೆಂದು ಅವಳ ಅಭಿಪ್ರಾಯವಿತ್ತು. ಅವಳು ಆಕರ್ಷಕ, ದೃಢವಾದ ಹೆಂಗುಸಾಗಿದ್ದಳು ಮತ್ತು ಒಳ್ಳೆಯ ತಾಯಿಯಾಗಿದ್ದಳು. ಅವಳ ಬಗ್ಗೆ ನಾನು ಎಂದೂ ಗೌರವ ಮತ್ತು ಮೆಚ್ಚಿಕೆ ಕಳೆದುಕೊಳ್ಳಲಿಲ್ಲ. ಆದರೆ ಕೊನೆಗೂ ನಮ್ಮ ಮದುವೆ ಉಳಿಯುವಂತೆ ಮಾಡಲಾರದಾದೆವು.

●

ಒಂದು ಮಧ್ಯಾಹ್ನ ಪೂರ್ವಸಿದ್ಧತೆ ಪರೀಕ್ಷೆಯ ಬಿಡುವಿನ ಸಮಯದಲ್ಲಿ ಆರ್ಲೆಂಡೋದಿಂದ ನನ್ನ ಸ್ನೇಹಿತನನ್ನು ವಿಟ್‌ವಾಟರ್ಸ್‌ರ್ಯಾಂಡ್‌ನಲ್ಲಿ ಜೋಹಾನ್ಸ್ ಬರ್ಗ್‌ನ ಪ್ರಮುಖ ಕಪ್ಪು ಆಸ್ಪತ್ರೆಯಾದ ಬರಗ್ವನಾಥ್ ಆಸ್ಪತ್ರೆ ದಾಟಿ ಡ್ರೈವ್ ಮಾಡಿಕೊಂಡು ಹೊರಟಿದ್ದೆ. ಬಸ್‌ಸ್ಟಾಪ್ ದಾಟುತ್ತಿದ್ದಂತೆ ನನ್ನ ಕಣ್ಣ ಕೊನೆಯಿಂದ ಬಸ್‌ಗಾಗಿ ಕಾಯುತ್ತಿದ್ದ ಒಬ್ಬ ಆಕರ್ಷಕ ತರುಣಿಯನ್ನು ಗಮನಿಸಿದೆ. ಅವಳ ಸೌಂದರ್ಯ ನನ್ನನ್ನು ತಟ್ಟಿತು. ತಲೆ ತಿರುಗಿಸಿದೆ. ಆದರೆ ಕಾರಿನ ವೇಗ ತುಂಬ ಹೆಚ್ಚಾಗಿತ್ತು. ಅವಳನ್ನು ಗಮನಿಸದಾದೆ. ಕಾರನ್ನು ತಿರುಗಿಸೋಣವೇ ಎಂದುಕೊಂಡೆ; ಆದರೆ ಮುಂದೆ ನಡೆಸಿದೆ. ಆ ಸೌಂದರ್ಯ ನನ್ನ ಕಣ್ಣಲ್ಲಿ ನಿಂತುಬಿಟ್ಟಿತು.....

ಕೆಲವು ವಾರಗಳ ನಂತರ ಒಂದು ಕುತೂಹಲಕಾರಿ ಘಟನೆ ನಡೆಯಿತು. ನನ್ನ ಆಫೀಸಿನಲ್ಲಿದ್ದೆ. ಅಲ್ಲಿ ಆಲಿವರ್‌ನನ್ನು ನೋಡಲು ಹಣಕಿದಾಗ ಅವನ ಡೆಸ್ಕಿನೆದುರು ಈ ತರುಣಿಯೇ !....ತನ್ನ ಸಹೋದರನೊಡನೆ ಕುಳಿತಿದ್ದಳು. ನಾನು ಗಾಬರಿಯಾದೆ. ನನ್ನ ಸಂತಸ ಅಥವಾ ಆಶ್ಚರ್ಯವನ್ನು ತೋರಿಸದಿರಲು ಬಹುವಾಗಿ ಪ್ರಯತ್ನಿಸಿದೆ. ಆಲಿವರ್ ನನ್ನನ್ನು ಅವಳಿಗೆ ಪರಿಚಯ ಮಾಡಿಸಿದ. ಅವಳು ಕಾನೂನು ಸಲಹೆಗಾಗಿ ಅವನೆಡೆಗೆ ಬಂದಿರುವುದಾಗಿ ತಿಳಿಸಿದ.

ಅವಳ ಹೆಸರು ನೋಂಜಾಮೊ ವಿನಿಫ್ರೆಡ್ ಮೆದಿಕಿಜೆಲ. ಆದರೆ ವಿನ್ನಿ ಎಂದು ಪರಿಚಿತಳು. ಅವಳು ಜೋಹಾನ್ಸ್‌ಬರ್ಗ್‌ನ ಜಾನ್ ಹಾಫ್‌ಮಯರ್ ಸಮಾಜ ಶಾಸ್ತ್ರ ಶಾಲೆಯಲ್ಲಿ ತನ್ನ ವಿದ್ಯಾಭ್ಯಾಸವನ್ನು ಆಗತಾನೆ ಮುಗಿಸಿದ್ದಳು. ಬರಗ್ವನಾಥ ಆಸ್ಪತ್ರೆಯಲ್ಲಿ ಮೊದಲನೆಯ ಕಪ್ಪು ಸಮಾಜ ಕಾರ್ಯಕರ್ತೆಯಾಗಿ ಕೆಲಸ ಮಾಡು ತ್ತಿದ್ದಳು. ಆಗ ಅವಳ ಹಿನ್ನೆಲೆಗಾಗಲೀ ಕಾನೂನು ಸಲಹೆಗಾಗಲೀ ಲಕ್ಷ್ಯ ಕೊಡಲಿಲ್ಲ ; ಏಕೆಂದರೆ ನನ್ನಲ್ಲಿ ಅದಕ್ಕೂ ಆಳದ ಭಾವನೆಯೊಂದು ಕುಡಿಯೊಡೆದಿತ್ತು. ಪ್ರಥಮ ದರ್ಶನದಲ್ಲಿ ಪ್ರೇಮ ಎಂಬುದಿದೆಯೇ ಎಂದು ನಾನು ಹೇಳಲಾರೆ.....ಆದರೆ ವಿನ್ನಿ ನೋಂಜಮೋಳನ್ನು ನೋಡಿದಕ್ಷಣ ಅವಳನ್ನು ಬಾಳ ಸಂಗಾತಿಯಾಗಿ ಪಡೆಯಬೇಕೆನಿಸಿತು....

●

೧೯೬೦ರ ಮಾರ್ಚ್ ೩೦ರಂದು, ಬೆಳಗಿನ ೧–೩ಂಕ್ಕೆ ನನ್ನ ಬಾಗಿಲ ಮೇಲೆ ಸ್ನೇಹಪರವಲ್ಲದ ಬಡಿತ ಕೇಳಿಸಿತು. ಸಂಶಯವೇ ಇಲ್ಲದ ಪೊಲೀಸ್‌ಕರೆ ಅದು! ಬಾಗಿಲು ತೆಗೆದರೆ ಅರ್ಧ ಡಜನ್ ಸಶಸ್ತ್ರ ರಕ್ಷಣಾ ಪೋಲೀಸರು ! ಮನೆಯನ್ನು ಸಂಪೂರ್ಣವಾಗಿ ಶೋಧಿಸಿದರು. ನಾನು ಬರೆಯುತ್ತಿದ್ದ ನನ್ನ ತಾಯಿಯ ನೆನಪಿನ, ಕುಟುಂಬದ ಇತಿಹಾಸ ಮತ್ತು ಬುಡಕಟ್ಟು ನೀತಿ ಕಥೆಗಳ ಹಾಳೆಗಳ ಸಮೇತವಾಗಿ ಪ್ರತಿಯೊಂದು ಹಾಳೆಯ ಚೂರನ್ನೂ ಕೂಲಂಕುಷವಾಗಿ ಪರಿಶೀಲಿಸಿದರು. ಆ ಹಾಳೆಗಳನ್ನು ಪುನಃ ನಾನು ನೋಡಲಿಲ್ಲ. ನಂತರ ಬಂಧನದ ಆಜ್ಞೆಯಿಲ್ಲದೆ ನಾನು ಬಂಧಿಸಲ್ಪಟ್ಟೆ. ನನ್ನ ವಕೀಲರಿಗೆ ಫೋನ್ ಮಾಡಲಾಗಲಿಲ್ಲ. ನನ್ನನ್ನೆಲ್ಲಿಗೆ ಕೊಂಡೊಯ್ಯುತ್ತಿರುವರೆಂಬ ಬಗ್ಗೆ ನನ್ನ ಪತ್ನಿಗೆ ಕೂಡ ಅವರು ತಿಳಿಸಲಿಲ್ಲ. ನಾನು ತಲೆಯಾಡಿಸಿದೆನಷ್ಟೇ. ಸಾಂತ್ವನದ ಶಬ್ದಗಳಿಗೆ ಆದು ಸಮಯವಾಗಿರಲಿಲ್ಲ.

೩೦ ನಿಮಿಷಗಳ ನಂತರ ನ್ಯೂಲ್ಯಾಂಡ್ಸ್ ಪೊಲೀಸ್ ಠಾಣೆಗೆ ಬಂದೆವು. ಹಲವು ಬಾರಿ ನನ್ನ ಕಕ್ಷಿಗಳನ್ನು ನೋಡಲು ಹೋಗಿದ್ದ ಆ ಠಾಣೆ ನನಗೆ ಪರಿಚಿತವಾಗಿತ್ತು. ಅದು ಸೋಫಿಯಾಟೌನ್ ಅಥವಾ ಅದರ ಅಳಿದುಳಿದ ಭಾಗದಲ್ಲಿತ್ತು. ಒಂದೊಮ್ಮೆ ಜನ ಜಾತ್ರೆಯಿಂದ ಗಿಜಿಗುಡುತ್ತಿದ್ದ ಆ ನಗರ ಭಾಗವು ಈಗ ಬುಲ್‌ಡೋಜರ್‌ಗಳು ಕೆಡವಿಹಾಕಿದ ಕಟ್ಟಡಗಳ ಖಾಲಿ ಸ್ಥಳಗಳ ಬೀಡಾಗಿತ್ತು, ಅಲ್ಲಿ ನನ್ನಂತೆಯೇ ನಿದ್ದೆಯಿಂದೆಬ್ಬಿಸಿ ಎಳೆದು ತಂದಿದ್ದ ನನ್ನ ಹಲವು ಸಹೋದ್ಯೋಗಿಗಳಿದ್ದರು. ರಾತ್ರಿ ಬೆಳೆದಂತೆ ಇನ್ನೂ ಅನೇಕರನ್ನು ಎಳೆತರಲಾಯಿತು. ಬೆಳಗಿನ ಹೊತ್ತಿಗೆ ೪೦ ಜನರಿದ್ದೆವು. ಆಕಾಶಕ್ಕೆ ತೆರೆದುಕೊಂಡ. ಒಂದು ಇಕ್ಕಟ್ಟಿನಲ್ಲಿ, ಮಂದ ದೀಪವಿದ್ದ ಸ್ಥಳದಲ್ಲಿ

ನಮ್ಮನ್ನು ಕೂಡಿದ್ದರು. ಇಡೀ ರಾತ್ರಿ ನಾವು ನಿಂತೇ ಕಳೆಯುವಷ್ಟು ಮಾತ್ರ ಅಲ್ಲಿ ಸ್ಥಳವಿತ್ತು.

ಈ ಕಾಲದಲ್ಲಿಯೇ ನಾನೊಂದು ಅತಿ ದುಃಖದಾಯಕ ನಷ್ಟವನ್ನನುಭವಿಸಿದೆ. ವಿನ್ನಿಯ ಬಂಧನದ ಬಗ್ಗೆ ಕೇಳಿದ ಮೂರು ತಿಂಗಳ ಮೇಲೆ ರಾಬೆನ್ ದ್ವೀಪದ ಮುಖ್ಯ ಪೋಲೀಸ್ ಕಛೇರಿಗೆ ಕರೆಸಲ್ಪಟ್ಟೆ. ಒಂದು ಟೆಲಿಗ್ರಾಂ ಕೊಟ್ಟರು. ಅದು ನನ್ನ ಚಿಕ್ಕ ಮಗ ಮಕ್‌ಗಥೋನಿಂದ ಬಂದಿತ್ತು. ಒಂದೇ ವಾಕ್ಯದ ಉದ್ದ. ಟ್ರಾನ್ಸ್‌ಕೀನಲ್ಲಿ ಅವನ ಹಿರಿಯಣ್ಣ, ನನ್ನ ಹಿರಿಯಮಗ ಥೆಂಬಿ ಒಂದು ಕಾರು ಅಕಸ್ಮಿಕದಲ್ಲಿ ಕೊಲ್ಲಲ್ಪಟ್ಟನೆಂದು ಅವನು ತಿಳಿಸಿದ್ದ. ಥೆಂಬಿಗೆ ಆಗ 25 ವರ್ಷ. ಎರಡು ಚಿಕ್ಕ ಮಕ್ಕಳ ತಂದೆಯಾಗಿದ್ದನವ.

ನನಗೆ ಆಗಲೇ ಹೆಂಡತಿಯ ಚಿಂತೆ ಸಾಕಷ್ಟಿತ್ತು. ತಾಯಿಗಾಗಿ ಇನ್ನೂ ದುಃಖಿಸುತ್ತಿದ್ದೆ. ಅದರ ಮೇಲಿಂಥ ಸುದ್ದಿ ಕೇಳುವುದೆಂದರೆ .. ನನ್ನ ದುಃಖವನ್ನು ವಿವರಿಸಲು ನನ್ನಲ್ಲಿ ಶಬ್ದಗಳಿಲ್ಲ. ಅದು ನನ್ನ ಹೃದಯದಲ್ಲೊಂದು ಮಾಯದ ರಂಧ್ರವನ್ನುಳಿಸಿತು....

●

ಫೆಬ್ರವರಿ ೯. ಪಾರ್ಲಿಮೆಂಟ್ ಉದ್ಘಾಟನೆಯಲ್ಲಿ ಮಿ. ಡಿ ಕ್ಲರ್ಕ್‌ನ ಭಾಷಣವಾದ ಏಳು ದಿನಗಳ ನಂತರ ನಾನು ಪುನಃ ಟುಯಿನ್‌ಹ್ಯೂಗೆ ಹೋಗಲಿದ್ದೇನೆಂದು ತಿಳಿಸಿದರು. ಸಂಜೆ ೬ ಘಂಟೆಗೆ ಅಲ್ಲಿ ತಲುಪಿದ ನಾನು, ಹಸನ್ಮುಖಿ ಮಿ. ಡಿಕ್ಲರ್ಕ್‌ರನ್ನು ಅವನ ಕಛೇರಿಯಲ್ಲಿ ಕಂಡೆ. ನಾವು ಕೈ ಕುಲುಕುತ್ತಿದ್ದಾಗ ಮರುದಿನ ನನ್ನನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ ಆತ. ದಕ್ಷಿಣ ಆಫ್ರಿಕದ ಪತ್ರಿಕಾರಂಗ ಹಾಗೂ ವಿಶ್ವದಾದ್ಯಂತ ನನ್ನ ಬಿಡುಗಡೆ ಅತಿ ಸನ್ನಿಹಿತವೆಂದು ಪ್ರಚಾರ ಮಾಡಿದ್ದರೂ ಮಿ. ಡಿ ಕ್ಲರ್ಕ್‌ನ ಘೋಷಣೆ ನನಗೆ ಆಶ್ಚರ್ಯ ತಂದಿತು. ನನ್ನನ್ನು ಸ್ವತಂತ್ರ ಮನುಷ್ಯನಾಗಿಸುವ ಸುದ್ದಿ ತಿಳಿಸಲೆಂದೇ ಮಿ. ಡಿ ಕ್ಲರ್ಕ್ ನನ್ನನ್ನು ನೋಡಬಯಸಿದ್ದನೆಂದು ನನಗೆ ತಿಳಿದಿರಲಿಲ್ಲ.

ನನ್ನ ಸ್ಥಿತಿಗೂ ನನ್ನ ಭಾವನೆಗಳಿಗೂ ಒಳತೋಟಿ ಉಂಟಾಯಿತು. ಅದಷ್ಟು ಬೇಗ ಬಂಧನದಿಂದ ಹೊರಬರಲು ನನಗೆ ಇಷ್ಟವಿದ್ದರೂ, ಒಮ್ಮೆಲೇ ಹೊರಬರುವುದು ಬುದ್ಧಿವಂತಿಕೆಯಾಗಿರಲಿಲ್ಲ. ನಾನು ಮಿ. ಡಿ ಕ್ಲರ್ಕ್‌ಗೆ ಕೃತಜ್ಞತೆ ಹೇಳಿದೆ.

ಕೊಟ್ಟ ಮಾತನ್ನು ಮರಳಿ ಪಡೆಯುವ ಅಪಾಯದ ನಡುವೆಯೂ, ನನ್ನ ಕುಟುಂಬ ಮತ್ತು ನನ್ನ ಸಂಘಟನೆಗಳು ನನ್ನ ಬಿಡುಗಡೆಗೆ ಸಿದ್ಧವಾಗಲು ಒಂದು ವಾರದ ಅವಧಿಯಾದರೂ ಬೇಕೆಂದು ಹೇಳಿದೆ. ನಾಳೆ ಬೆಳಗಾಗ ಎದ್ದು ಸುಮ್ಮನೆ ಹೊರಬಂದರೆ ಅದೊಂದು ಅಸಾಧ್ಯ ಗೊಂದಲಕ್ಕೆ ದಾರಿಯಾಗುವುದೆಂದು ಹೇಳಿದೆ. ೨೭ ವರ್ಷಗಳು ಕಾದ ಮೇಲೆ ಒಂದು ವಾರದ್ದೇನು ಲೆಕ್ಕ ! ಖಂಡಿತವಾಗಿ ಕಾಯಬಲ್ಲವನಾಗಿದ್ದೆ....

●

ಗೇಟಿನ ಬಳಿ ಇಪ್ಪತ್ತು ಅಡಿಗಳ ದೂರದಿಂದ ಕ್ಯಾಮೆರಾಗಳು ಯಾವುದೋ ಲೋಹ ಮೃಗಗಳ ಹಿಂಡಿನ ಗರ್ಜನೆ ಎಂಬಂತೆ–ಕೆಲಸ ತೊಡಗಿದವು. ರಿಪೋರ್ಟರ್‌ಗಳ ಪ್ರಶ್ನೆಗಳ ಕೂಗು....ಟೆಲಿವಿಷನ್‌ನವರು ಹತ್ತಿರ ಹತ್ತಿರ ಸರಿದರು. ಎ.ಎನ್.ಸಿ. ಬೆಂಬಲಿಗರು ಕೂಗುತ್ತಿದ್ದರು–"ಚೀರು"ತ್ತಿದ್ದರು. ಅದೊಂದು ಸಂತೋಷದ, ಸ್ವಲ್ಪ ತಬ್ಬಿಬ್ಬು ಮಾಡುವ ಗೊಂದಲವೇ! ಒಬ್ಬ ಟೆಲಿವಿಷನ್ ಕೆಲಸಗಾರ ನನ್ನತ್ತ ಒಂದು ಉದ್ದದ ಉಣ್ಣೆಮೈನ ವಸ್ತುವನ್ನು ಚಾಚಿದಾಗ, ಅದು ನಾನು ಬಂಧನದಲ್ಲಿದ್ದಾಗ ಕಂಡುಹಿಡಿದು ಅಭಿವೃದ್ಧಿಪಡಿಸಿರಬಹುದಾದ ಹೊಸ ಶಸ್ತ್ರ ಯಾವುದೋ ಇರಬಹುದೆಂದು ಸ್ವಲ್ಪ ಹಿಂದೆ ಸರಿದೆ. ವಿನ್ನಿ, ಅದು ಮೈಕ್ರೊಫೋನೆಂದು ತಿಳಿಸಿದಳು.

ಸಂದಣಿಯ ಮಧ್ಯೆ ನಿಂತು ನನ್ನ ಬಲಗೈ ಮುಷ್ಟಿ ಮಾಡಿ ಮೇಲೆತ್ತಿದ್ದೆ. ಜನ ಹೋ ಎಂದಿತು. ೨೭ ವರ್ಷ ನಾನು ಹಾಗೆ ಮಾಡಲಾರದವನಾಗಿದ್ದೆ. ನನ್ನಲ್ಲಿ ಸಂತೋಷ ಮತ್ತು ಶಕ್ತಿ ತುಂಬಿ ಉಕ್ಕಿದಂತೆನಿಸಿತು. ಕೇಪ್ ಟೌನ್‌ಗೆ ಹೊರಡುವ ಕಾರನ್ನೇರುವ ಮೊದಲು ಕೆಲವು ನಿಮಿಷಗಳು ನಾನು ಜನರ ನಡುವಿದ್ದೆ. ನನಗೆ ದೊರೆತ ಸ್ವಾಗತದಿಂದ ಸಂತೋಷವೆನಿಸಿದರೂ ನಾನು ಹೊರಬರುವಾಗ ಬಂದಿಖಾನೆ ಅಧಿಕಾರಿ ವರ್ಗಕ್ಕೆ ವಿದಾಯ ಹೇಳಲು ಸಾಧ್ಯವಾಗದ್ದಕ್ಕೆ ನನಗೆ ಖೇದವೆನಿಸಿತು. ಆ ಬಾಗಿಲು ದಾಟಿ ಆಚೆ ಇದ್ದ ಕಾರನ್ನೇರಲು ನಾನು ಹೊರ ನಡೆದಾಗ ನನ್ನ ೭೧ ವರ್ಷಗಳ ವಯಸ್ಸಿನಲ್ಲೂ–ನನ್ನ ಜೀವನ ಹೊಸದಾಗಿ ಪ್ರಾರಂಭವಾಗುತ್ತಿರುವಂತೆನಿಸಿತು. ನನ್ನ ೧೦,೦೦೦ ದಿನಗಳ ಬಂಧನ ಮುಗಿಯುತ್ತಿತ್ತು....

'ಸ್ವತಂತ್ರದತ್ತ ದೀರ್ಘನಡಿಗೆ' ಇಂದ ಉದ್ಧೃತ

–ಕನ್ನಡಕ್ಕೆ ಸಿ. ಆರ್. ಅಣಜಿ

ನಿರಂತರ ಸವಾಲುಗಳು....
ನಿರಂತರ ಸಂವಾದ- ಒಂದಿಷ್ಟು ಟಿಪ್ಪಣಿಗಳು

ರಾಘವೇಂದ್ರ ಪಾಟೀಲ

ಪ್ರತಿಯೊಂದು ಸಾಹಿತ್ಯಿಕ–ಸಾಂಸ್ಕೃತಿಕ ಪತ್ರಿಕೆಯ ಹಿಂದೆ ಕೆಲಸ ಮಾಡುತ್ತಿರುವ ಮನಸ್ಸನ್ನು ಕುರಿತು ನನಗೆ ಒಂದು ರೂಪಕ ಹೊಳೆಯುತ್ತದೆ. ಅದಾವುದೆಂದರೆ : ಡಾನ್‌ಕ್ವಿಕ್ಸೋಟನದು. ಈ ಡಾನ್‌ಕ್ವಿಕ್ಸೋಟ್, ರಟ್ಟಿನ ಚಿಲಕತ್ತ್ರಗಳನ್ನು ಧರಿಸಿ ಸಾಂಕೋಪಾಂಜ್ಞಾನನ್ನು ಬೆಂಗಾವಲಿಗಿಟ್ಟುಕೊಂಡು ಹೊರಟು ಸುತ್ತಲಿನ ಜಗತ್ತಿನಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಉದ್ಯುಕ್ತನಾದವನು ! ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿ ದೇವರಿಗೆ ಪ್ರಿಯವಾಗುವಂತಹ ಲೋಕವನ್ನು ಕಟ್ಟುತ್ತೇನೆಂದು ದಿಗ್ವಿಜಯಕ್ಕೆ ಹೊರಡುವ ಕ್ವಿಕ್ಸೋಟನಂತಹ ಪ್ರಜ್ಞೆ ಸಾಹಿತ್ಯಿಕ–ಸಾಂಸ್ಕೃತಿಕ ಸಣ್ಣ ಪತ್ರಿಕೆಗಳ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿರುತ್ತದೆ. ಇದು ಮುಗ್ಧತೆಯ ಪ್ರಜ್ಞೆ. ಈ ಮುಗ್ಧತೆಯಿಂದ ಏನೇನು ಸಾಧ್ಯವಾಗುತ್ತದೆ ನೋಡಿ : ತನ್ನ ವರ್ಗಜಾತಿ ಮುಂತಾದ ಸಂಬಂಧಗಳನ್ನು ಮೀರಿ ಅವುಗಳಲ್ಲಿ ಬೆರೆತುಕೊಂಡಿರುವ ಕೊಳಕುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ–ಕೊಳಕುಗಳಿಲ್ಲದ ಚಂದದ ಸಂದರ್ಭವನ್ನು ಕನಸಿನ ಮಾರ್ಗವಾಗಿ ಕಂಡುಕೊಳ್ಳುತ್ತ, ಆ ದಿಕ್ಕಿನತ್ತಲಿನ ಪ್ರಯಾಣಕ್ಕೆ ಸಜ್ಜುಗೊಳ್ಳುವದು ಸಾಧ್ಯವಾಗುತ್ತದೆ–ಸಂಬಂಧಗಳ ನೆಲೆಯಲ್ಲಿ ವೈಚಾರಿಕ ಮಾದರಿಗಳ ಪೆಡಸುತನದ ಗ್ರಹಿಕೆ ಸಾಧ್ಯವಾಗುತ್ತ ನಿರ್ಜೀವಕ್ಕೆ ಜೋತು ಬಿದ್ದ ಕಣ್ಣುಕಪ್ಪಡಿಗೆ ಬಿಡುಗಡೆ ದೊರೆತು, ಜೀವಂತಿಕೆಗೆ ಪ್ರವೇಶ ದೊರೆಯಲು ಸಾಧ್ಯ

ವಾಗುತ್ತದೆ. ಮುಗ್ಧತೆ ಇದ್ದಾಗ ಮಾತ್ರ ಹುಂಬತನ ಮತ್ತು ಆ ಮೂಲಕದ ಮಹತ್ವಾಕಾಂಕ್ಷೆಯ ನೆಗೆತಗಳು ಸಾಧ್ಯವಾಗುತ್ತವೆ.

ಈ ಕ್ವಿಕ್ಸೋಟನ ಪ್ರಶ್ನೆಯ ರೂಪಕವನ್ನು ಇದಕ್ಕಿಂತ ಉದ್ದವಾಗಿ ಬೆಳೆಸಿಕೊಂಡು ಹೋಗಲಾಗದು. ಮುಗ್ಧತೆಗೆ ಈತ ಅತ್ಯಂತ ಸಮರ್ಥವಾದ ಪ್ರತಿಮೆಯಾಗುತ್ತಾ ನೆನ್ನುವಲ್ಲಿಯೇ ಈ ರೂಪಕವನ್ನು ನಿಲ್ಲಿಸಬೇಕು. ಯಾಕೆಂದರೆ ಕ್ವಿಕ್ಸೋಟನದು ಪೆದ್ದು ಪೆದ್ದಾದ ಮುಗ್ಧತೆ. ವಿಂಡ್‌ಮಿಲ್ಲನ್ನು ರಾಕ್ಷಸನೆಂದು ಭಾವಿಸುತ್ತ ಅದರೊಂದಿಗೆ ಯುದ್ಧಕ್ಕೆ ನಿಲ್ಲುವ ಪೆದ್ದುತನ ಅವನಲ್ಲಿದೆ. ಈ ಘಟನೆಯಿಂದ ಕೂಡ, ವಿಜ್ಞಾನವನ್ನು ಸಂಕೇತಿಸುವ ವಿಂಡ್‌ಮಿಲ್‌ನ್ನು ವಿರೋಧಿಸುವ ಅರ್ಥ ಹೊರಡುತ್ತದೆಯಾದರೂ ನಾನು ಈ ರೂಪಕವೊಂದಿಗೆ ಇನ್ನಷ್ಟು ಮುಂದುವರಿಯುವುದಿಲ್ಲ. ಪೆದ್ದುತನವಿಲ್ಲದ. ವಾಸ್ತವವನ್ನು ಉಧ್ವಸ್ತಗೊಳಿಸದೇ ನೋಡಬಲ್ಲ, ಸಮಸ್ಥಿತಿಯ ಮುಗ್ಧತೆ ನಿಜವಾಗಿ ಮಹತ್ವಾಕಾಂಕ್ಷೆಯ ಕನಸು ಕಾಣುತ್ತದೆ ಮತ್ತು ಆ ದಿಕ್ಕಿನತ್ತ ಸಾಗಲು ಉದ್ಯುಕ್ತವಾಗುತ್ತದೆ. ಬಸವಣ್ಣ ಕನಸಿದ ಅನುಭವ ಮಂಟಪ ಇಂಥ ಒಂದು ಮಹತ್ವಾಕಾಂಕ್ಷೆ. ಮುಗ್ಧತೆಯ ಭಂಡಾರಿಯಾದ ಬಸವಣ್ಣ ಅದನ್ನು ಬಿಜ್ಜಳನಿಗೆ ಕೊಟ್ಟ–ಸೂಳೆಸಂಕವ್ವ ರಾದಿಯಾಗಿ ವಿವಿಧ ಕಾಯಕದವರಿಗೆ ಹಂಚಿದ–ಬ್ರಾಹ್ಮಣ ಮಧುವರಸನಿಗೂ ನೀಡಿದ, ಆಗ ಎಲ್ಲರೂ ಮಾತಾಡಬಲ್ಲವರಾದರು. ಎಲ್ಲರೂ ಒಂದೆಡೆಗೆ ಸಮಾನರಾಗಿ ಸೇರುವ, ಸೇರಿ ತಮ್ಮ ಒಳಗಿನ ಮಾತನ್ನು ಹೇಳುವ ವಚನ ಚಳುವಳಿಯ ಅನುಭವ ಮಂಟಪವನ್ನು ಕಟ್ಟಿದ. ಇದೀಗ ನೋಡಿ ಪ್ರತಿಯೊಂದು ಸಾಹಿತ್ಯಿಕ–ಸಾಂಸ್ಕೃತಿಕ ಪತ್ರಿಕೆಯ ಹಿನ್ನೆಲೆಯಲ್ಲಿ ಇರಬೇಕಾದ ಮುಗ್ಧತೆಯ ಮಹತ್ವಾಕಾಂಕ್ಷೆ!

ಬಹುಶಃ ಪ್ರತಿಯೊಂದು ಸಾಹಿತ್ಯಿಕ–ಸಾಂಸ್ಕೃತಿಕ ಪತ್ರಿಕೆಯ ಹಿಂದೆ ಇರಬೇಕಾದ ಅತ್ಯುತ್ಕೃಷ್ಟ ಕನಸು ಈ ಅನುಭವ ಮಂಟಪವಾಗಿದೆ. ಈ ಅನುಭವ ಮಂಟಪವನ್ನು ಆದರ್ಶವಾಗಿಟ್ಟುಕೊಳ್ಳಬೇಕೆಂದು ಹೇಳುವಾಗ ಸಾಹಿತ್ಯಿಕ–ಸಾಂಸ್ಕೃತಿಕ ಪತ್ರಿಕೆಗಳ ಅತ್ಯುನ್ನತವಾದ ಕನಸನ್ನು ಮಾತ್ರ ಹೇಳುತ್ತಿದ್ದೇನೆ. ಇದು ಜಟ್ಟಿಯೊಬ್ಬ, ನಾನು ಸಾಮುಗೀಮು ಮಾಡಿದ್ದೇನೆ–ಸ್ನಾಯುಬಲ ಸಂಪಾದಿಸಿದ್ದೇನೆ, ಆದ್ದರಿಂದ ಈಗ ಆಕಾಶಕ್ಕೆ ನೆಗೆಯುತ್ತೇನೆ ಎಂದೆನ್ನುವಂತಹ ಅವಾಸ್ತವವಾದ ಆದರ್ಶ. ಆದರೆ ಆ ಜಟ್ಟಿ ಮುಗಿಲಿನತ್ತ ನೆಗೆಯುವ ಕ್ರಿಯೆಯನ್ನು ಸುಳ್ಳು ಎಂದು ಹೇಳಲಾಗದು. ಅದು ನಿಜವಾದದ್ದೇ. ಹೀಗೆಯೇ ನಾವು ಕೂಡ ಅನುಭವ ಮಂಟಪದಂತಹ ಸಾಧನೆಯತ್ತ ನಡೆಯಬೇಕು. ಅನುಭವ ಮಂಟಪದತ್ತ ಬರೀ ನಡೆಯುವುದು ಎಂದು ಹೇಳುವಾಗ ನಾವು ಈ ಸಾಹಿತ್ಯಿಕ–ಸಾಂಸ್ಕೃತಿಕ ಪತ್ರಿಕೆಗಳನ್ನು ನಡೆಸುವುದರಲ್ಲಿ ಇರುವ ಸವಾಲುಗಳ ಗಾಢತೆ ಗಂಭೀರತೆಗಳು ಹೊಳೆಯುತ್ತವೆ.

ಅತಿ ದೊಡ್ಡದಾದ ಒಂದು ಸವಾಲೆಂದರೆ ಈ ಪತ್ರಿಕೆಗಳ ಹಿನ್ನೆಲೆಯಲ್ಲಿ ಇರುವ ಮನಸ್ಸಿನ ಮುಗ್ಧತೆ ಕಳೆದುಹೋಗುವುದು. ಬಸವಣ್ಣನು ಬಿಜ್ಜಳನಲ್ಲಿ ಬಿತ್ತಿ ಬೆಳೆಸಿದ್ದ ಮುಗ್ಧತೆಯ ಬೆಳೆಯನ್ನು ಕೊಳಕು ಮನಸ್ಸುಗಳು ನಾಶ ಮಾಡಿಬಿಟ್ಟಾಗ ಬಸವಣ್ಣ ಕಪ್ಪಡಿ ಸಂಗಮಕ್ಕೆ ನಡೆದ–ಅಕ್ಕ ಅಲ್ಲಮ ಕದಳಿಗೆ–ಚನ್ನಬಸವಣ್ಣ ಉಳವಿಗೆ–ಉಳಿದ ಶರಣರು ತಮತಮಗೆ ತಿಳಿದಲ್ಲಿಗೆ ! ಅನುಭವ ಮಂಟಪ ಎನ್ನುವುದಕ್ಕೆ ಒಂದು ಛತ್ತು ಎನ್ನುವಂತಹದು ಇದ್ದಿದ್ದರೆ ಜಡವಾದ ಅದು ಕುಸಿದು ಹೋಗಿರುತ್ತದೆ. ಈ ಅನುಭವ ಮಂಟಪದಂತಹ ಅನುಭವ ಮಂಟಪವೇ ಕುಸಿದು ಹೋಗಿರುವಾಗ ಇನ್ನು ಅದನ್ನು ಆದರ್ಶದ ನೆಲೆಯಲ್ಲಿ ಮಾತ್ರ ಪರಿಭಾವಿಸಿಕೊಂಡು ಸಾಗುವ ಸಾಹಿತ್ಯಿಕ–ಸಾಂಸ್ಕೃತಿಕ ಸಣ್ಣ ಪತ್ರಿಕೆಗಳ ಮಾತು ಎಲ್ಲಿಗೆ ತಲುಪುತ್ತದೆಂದು ಹೇಳುವುದು ಬಲು ಕಷ್ಟ. ಮುಗ್ಧತೆಯನ್ನು ಸ್ಥಾನಪಲ್ಲಟಗೊಳಿಸಿ ಅದರ ಸ್ಥಾನದಲ್ಲಿ ಬಂದು ಕುಳಿತು ಕೊಳ್ಳುವ ವೈಯಕ್ತಿಕ ಆಸೆ ಆಕಾಂಕ್ಷೆಗಳು, ಪರಸ್ಪರ ದ್ವೇಷಗಳು, ಪ್ರೀತಿ ವ್ಯಾಮೋಹ ಗಳು–ಈ ಸಾಹಿತ್ಯಿಕ–ಸಾಂಸ್ಕೃತಿಕ ಪತ್ರಿಕೆಗಳನ್ನು ನಡೆಸತೊಡಗಿದಾಗ ಈ ಪತ್ರಿಕೆಗಳು ಸಾಂಸ್ಕೃತಿಕ ರೋಗಗಳನ್ನು ಹರಡ ತೊಡಗುತ್ತವೆ. ಹೀಗೆ ಬಿತ್ತಲಾಗುವ ಸಾಂಸ್ಕೃತಿಕ ರೋಗಗಳು–Cultural Plague– ತೀವ್ರವಾದ ಸಾಂಕ್ರಾಮಿಕವಾದವುಗಳು. ಅವು ಪರಿಣಾಮಗಳಾಗಿರುವಂತೆ ಪರಿಣಾಮವನ್ನುಂಟುಮಾಡುವಂತಹ ಪರಿಣಾಮಕಾರಿ ಯಾದವುಗಳೂ ಆಗುತ್ತವೆ. ಅಂದರೆ ಅವು ಇತರ ಇಂಥ ಸಣ್ಣ ಪತ್ರಿಕೆಗಳ ಹಿನ್ನೆಲೆ ಯಲ್ಲಿರುವ ಮುಗ್ಧತೆ–ಆದರ್ಶಗಳನ್ನೂ ನಾಶ ಮಾಡಿಬಿಡಬಲ್ಲವು. ಈ ಸಾಂಸ್ಕೃತಿಕ ಪತ್ರಿಕೆಗಳ ಹಿಂದಿರುವ ಮನಸ್ಸಿನ ಮುಗ್ಧತೆಗೆ ಆವರಿಸುವ ಆರಂಭದ ರೋಗಗಳೆಂದರೆ ವೈಯಕ್ತಿಕ ಆಸೆ ಆಕಾಂಕ್ಷೆಗಳು. ಇವು ಮೃದುವಾದ ರೋಗಗಳು. ಅಷ್ಟು ಸಾಂಕ್ರಾಮಿಕವಾದವುಗಳಲ್ಲ. ಆದರೆ ಈ ರೋಗಗಳು ಬಲಿತು ಮತ್ಸರ, ದ್ವೇಷಗಳ ಭಯಂಕರ ರೋಗಗಳಾಗಿ ನೆಲೆ ನಿಲ್ಲುತ್ತವೆ. ಇದು ಕ್ಯಾನ್ಸರ್‌ನಷ್ಟು ಭಯಂಕರ ವಾದುದು. ಕ್ಯಾನ್ಸರಿನ ಜೀವಕೋಶಗಳು ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಚಲಿಸಿ ಅಲ್ಲಿ ಕ್ಯಾನ್ಸರ್ ಉಂಟುಮಾಡುವಂತೆ ಈ ದ್ವೇಷ–ಮತ್ಸರಗಳ ರೋಗಾಣುಗಳು ಸಮಾಜದ ದೇಹದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹರಡಬಲ್ಲವು. ಇವರಿಂದ ಒಂದು ಪತ್ರಿಕೆಯ ಹಿನ್ನೆಲೆಯಲ್ಲಿ ಬೆಳೆಯುವ ಇಂಥ ರೋಗವು ಬೇರೆ ಪತ್ರಿಕೆಗಳ ಮನಸ್ಸುಗಳನ್ನು ಬಲುಬೇಗನೇ, ಸುಲಭವಾಗಿ ಆಕ್ರಮಿಸಿ ಕೊಳ್ಳುತ್ತದೆ–Computer Virus ಒಂದೆರಡು ದಿನಗಳ ಅಂತರದಲ್ಲಿ ಎಲ್ಲೆಲ್ಲಿಯೋ ಇರುವ ಎಲ್ಲ ಕಂಪ್ಯೂಟರ್‌ಗಳನ್ನು ಆಕ್ರಮಿಸಿಕೊಳ್ಳುವ ತರಹ !

ಇಷ್ಟೆಲ್ಲ ಹೇಳಿದ್ದು ಈ ಸಣ್ಣ ಪತ್ರಿಕೆಗಳನ್ನು ನಡೆಸುವ ಮನಸ್ಸುಗಳು

ಎದುರಿಸುವ ಸವಾಲಿನ ಬಗೆಗೆ. ಈ ಮನಸ್ಸುಗಳಷ್ಟೇ ಪತ್ರಿಕೆಗಳನ್ನು ರೂಪಿಸುವುದಿಲ್ಲ. ಪತ್ರಿಕೆಯ ಓದುಗಲೋಕದ ಮನಸ್ಸು ಕೂಡ ಪತ್ರಿಕೆಯ ಅಸ್ತಿತ್ವದ ಒಂದು ಅವಶ್ಯವಾದ ಮತ್ತು ಮಹತ್ವದ ಅಂಗವಾಗಿರುತ್ತದೆ. ಈ ಅಂಗದ ಮೂಲಕವಾಗಿ ಕೂಡ ಸಣ್ಣ ಪತ್ರಿಕೆಗಳು ಸವಾಲುಗಳನ್ನು ಎದುರಿಸುತ್ತಿವೆ. ಇಂಥವುಗಳಲ್ಲಿ ಅತ್ಯಂತ ದೊಡ್ಡದಾದ ಒಂದು ಸವಾಲೆಂದರೆ–ಇಂದು ಓದುಗಲೋಕದ ಮನಸ್ಸು ಮುಕ್ತವಾಗಿ ಉತ್ಸಾಹದಿಂದ ಸ್ಪಂದಿಸುತ್ತಿಲ್ಲದಿರುವುದು. ಓದುಗಲೋಕದ ಮನಸ್ಸು ಒಂದು ರೀತಿಯಾಗಿ ಒಳಗೆ ಮುಚ್ಚಿಕೊಳ್ಳುವ ಪರಿಯನ್ನು ತೋರುತ್ತಿದೆ. ಹೀಗಾಗಿ ಯಾವ ಮಹತ್ವದ ಸಾಂಸ್ಕೃತಿಕವಾದ ಅಥವಾ ತಾತ್ವಿಕವಾದ ಚರ್ಚೆಗಳು ಏರ್ಪಡುತ್ತಿಲ್ಲ. ಲೇಖನ ಒಂದನ್ನು ಪ್ರಕಟಿಸುವುದು ಎಂದರೆ ಒಂದು ನಿರ್ದಿಷ್ಟವಾದ ಅಂಶದ ಬಗೆಗೆ ಚರ್ಚೆಯೊಂದನ್ನು–ವಾಗ್ವಾದ ಒಂದನ್ನು ಅನಾವರಣಗೊಳಿಸುವ ಉದ್ದೇಶದ ಪ್ರಕಟಣೆ ಇದ್ದಂತೆ. ಸಣ್ಣ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಎಲ್ಲ ಲೇಖನಗಳೂ ಇಂತಹ ಅರ್ಹತೆಯನ್ನು ಹೊಂದಿರುವುದಿಲ್ಲ. ಆದರೆ ಕನ್ನಡದ ಎಲ್ಲ ಸಣ್ಣ ಪತ್ರಿಕೆಗಳಲ್ಲಿ ಇಂಥ ಅರ್ಹತೆಯ ಕೆಲವಾದರೂ ಲೇಖನಗಳು ಪ್ರಕಟವಾಗುತ್ತಿವೆ. ಆದರೆ ಈ ಲೇಖನಗಳು ಮಂಡಿಸುವ ವಿಷಯಗಳು ಚರ್ಚೆ–ಮಂಥನಗಳ ಮೂಲಕ ಬೆಳೆಯದೇ ಹಾಗೆಯೇ ಉಳಿದುಬಿಡುತ್ತವೆ. ಓದುಗಲೋಕದ ಮನಸ್ಸು ಹೀಗೆ ನಿರ್ಲಿಪ್ತವಾಗಿ ಉತ್ಸಾಹವನ್ನೇ ತೋರದಿರುವುದು ಎಲ್ಲ ಸಾಂಸ್ಕೃತಿಕ ಪತ್ರಿಕೆಗಳ ದೊಡ್ಡ ಸವಾಲಾಗಿದೆ. ಕನ್ನಡದಲ್ಲಿಯಂತೂ ಈ ಸವಾಲು ಅತ್ಯಂತ ತೀವ್ರವಾಗಿದೆ. ಇಂಥ ನಿರಾಳತೆಯ ನಿರ್ಲಿಪ್ತಿ ಕಳಚಿ ಹಾಕಲು ಸಾಹಿತ್ಯಿಕ ಸಾಂಸ್ಕೃತಿಕ ಪತ್ರಿಕೆಗಳು ಪ್ರಚೋದನಕಾರಿಯಾದ ಮಾರ್ಗವನ್ನು ಅನುಸರಿಸುವುದನ್ನು ಕಾಣುತ್ತೇವೆ. ಬಹುಶಃ 'ಸಂಕ್ರಮಣ' ಪತ್ರಿಕೆಯಲ್ಲಿ ಚಂದ್ರಶೇಖರ ಪಾಟೀಲರು ಇಂಥ ಉದ್ದೇಶಕ್ಕೆ ಬದ್ಧವಾಗಿ ಬಹಳ ಪ್ರಚೋದನಕಾರಿಯಾದ ಭಾಷಾರೀತಿಯನ್ನು ಬಳಸುತ್ತಾರೆ. ಅಷ್ಟರಮಟ್ಟಿಗೆ ಅವರು ಓದುಗಲೋಕದ ಮನಸ್ಸಿನ ಪ್ರತಿಕ್ರಿಯೆಯನ್ನು ಪಡೆಯುವಲ್ಲಿ ಸಫಲರೂ ಆಗಿದ್ದಾರೆ. ಆದರೆ ಅಲ್ಲಿ ಏರ್ಪಡುವ ಚರ್ಚೆ ಬಹುತೇಕವಾಗಿ ವೈಯಕ್ತಿಕತೆಯ ಮಿತಿಯೊಳಗೆ ಸಿಲುಕಿ, ಸಾರ್ಥಕವಾದ ಚರ್ಚೆ ಏರ್ಪಡುತ್ತಿಲ್ಲವೇನೋ ಎನ್ನುವ ಅನುಮಾನ ನನಗಿದೆ.

ನಮ್ಮ ಸಾಹಿತ್ಯಿಕ ಸಣ್ಣ ಪತ್ರಿಕೆಗಳಲ್ಲಿ ಬಂಡಾಯ ಸಾಹಿತ್ಯವನ್ನು ಕುರಿತಾದ ವಿಮರ್ಶಾಮಾನದಂಡಗಳಂತಹ ಮುಖ್ಯ ವಿಷಯದ ಬಗೆಗೆ ಫಲಪ್ರದವಾದ ಚರ್ಚೆ ಏರ್ಪಡಲಿಲ್ಲ. ತಪ್ಪು ಗ್ರಹಿಕೆಗಳನ್ನು ಎತ್ತಿತೋರಿಸುತ್ತ, ಪೂರಕವಾದ ಸಂಗತಿಗಳನ್ನು ಮಂಡಿಸುತ್ತ ಚರ್ಚೆಯನ್ನು ಬೆಳೆಸುತ್ತ ಮಂಥನವನ್ನು ಏರ್ಪಡಿಸುತ್ತ ನವನೀತದ ಉಗಮಕ್ಕೆ ನಾವು ಸಂದರ್ಭವನ್ನು ಸೃಷ್ಟಿಸಲೇ ಇಲ್ಲ. ಬರೀ ಸಾಹಿತ್ಯವಷ್ಟೇ ಏಕೆ–

ಯಾವುದೇ ಸಾಂಸ್ಕೃತಿಕ ಮಹತ್ವದ ವಿಷಯವೂ ಇಂದು ಚರ್ಚೆಯನ್ನು ಉದ್ದೀಪಿಸು ತ್ತಿಲ್ಲ. ಇಂದು ನಾವು ಅತ್ಯಂತ ಕ್ಲಿಷ್ಟವಾದ ಕಾಲಮಾನದಲ್ಲಿ ಬದುಕುತ್ತಿದ್ದೇವೆ. ಭಾರತದಲ್ಲಿನ ಎಲ್ಲ ಜನಾಂಗಗಳೂ ತಲೆಗೆ ತಲೆ-ಢಿಕ್ಕಿ ಹೊಡೆಯಲು ಸಜ್ಜಾಗೊಳ್ಳು ತ್ತಿವೆ. ರಾಜಕೀಯ ಪ್ರೇರಿತ ಧರ್ಮ ನಿರಪೇಕ್ಷತೆ, ರಾಜಕೀಯ ಪ್ರೇರಿತ ಧಾರ್ಮಿಕ ಮೂಲಭೂತವಾದಗಳು ಜನರ ಮನಸುಗಳನ್ನು ಕಲಕು ಮಲಕುಗೊಳಿಸಿವೆ. ನಮ್ಮ ಇತಿಹಾಸ ಮತ್ತು ಸಾಂಸ್ಕೃತಿಕ ಸಂಶೋಧನೆಗಳು ಭೂತಕಾಲದಲ್ಲಿ ಯಾರನ್ನು ಯಾರು ಶೋಷಿಸಿದರು ಮತ್ತು ಆದ್ದರಿಂದ ಇಂದಿನ ಕಾಲದಲ್ಲಿ ಯಾರು ಯಾರನ್ನು ದ್ವೇಷಿಸ ಬೇಕು ಎನ್ನುವ ಜ್ಞಾನ ನಿಷ್ಪತ್ತಿಯಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿವೆ. ವಿಜ್ಞಾನವು ಧರ್ಮವನ್ನು ಮೂಢನಂಬಿಕೆಗಳ ಸಂಚಯವೆಂದು ಭಾವಿಸುತ್ತ-ಧರ್ಮವು ವಿಜ್ಞಾನವನ್ನು ನಾಸ್ತಿಕವಾದ-ಪಾಷಂಡಿತನ-ದೈವದ್ರೋಹಿಯಾದದ್ದು ಎಂದು ಭಾವಿಸುತ್ತ, ಅವೆರಡೂ ಒಟ್ಟು ಮನುಷ್ಯನ ಸಂಪನ್ನ ಬದುಕಿನ ಮಾಧ್ಯಮಗಳೆನ್ನು ವುದನ್ನು ಪರಸ್ಪರ ಮರೆತುಬಿಟ್ಟಿವೆ. ಅರ್ಥಶಾಸ್ತ್ರ, ರಾಜಕೀಯ ವ್ಯವಸ್ಥೆ ಇವುಗಳಿಗೆ ಸಂಬಂಧಪಟ್ಟಂತೆಯೂ ಸಾಕಷ್ಟು ಗೊಂದಲಗಳಿವೆ. ಗಾಂಧೀಜಿಯವರ ವಿಕೇಂದ್ರೀ ಕರಣ-ಪಶ್ಚಿಮದ ಬಂಡವಾಳಶಾಹಿಯ ದೈತ್ಯೋತ್ಪಾದನೆಯ ಕೇಂದ್ರೀಕರಣ-ರಶಿಯದ ರಾಜ್ಯ ವ್ಯವಸ್ಥೆಯ ಕುಸಿತ....ಹೀಗೆ ಹತ್ತೆಂಟು ಸೆಳೆತಗಳ ನಡುವೆ ನಾವು ನಿರ್ಲಿಪ್ತವಾಗಿ ನಿರುಂಬಳವಾಗಿ ಕೂತುಬಿಟ್ಟಿದ್ದೇವೆ. ಈ ಎಲ್ಲ ಗೊಂದಲಗಳ ನಡುವೆ 'ಎಲ್ಲ ತತ್ವದೆಲ್ಲೆ ಮೀರಿ' ಹರಿಯುತ್ತಿರುವ ಜೀವಂತಿಕೆಯ ಸ್ರೋತವನ್ನು ಕಾಣುವ ಕಾಣಿಸುವ ಕನಸುಗಳು ಚಿಗುರಲು ಒಮ್ಮೆಗಲೋಕದ ಮನದ ಮಾಧ್ಯಮವು ದೊರೆಯ ದಿದ್ದರೆ ..ಏನು ಮಾಡುವುದಿನ್ನು !?

ಜೀವನವನ್ನು ಒಳಕ್ಕೆ ಬಿಟ್ಟುಕೊಳ್ಳದೆ, ಮೇಲ್ಪದರಿನ ಮೇಲೆ ಜಾರುತ್ತ, ವೇಗದ ಬೆನ್ನು ಹತ್ತಿ ಸಾಗುತ್ತಿರುವ ಜನಾಂಗ ನಮ್ಮದು. ನಮ್ಮದು 'ಧಿಡೀರ್' ಪ್ರಜ್ಞೆ. ಎಲ್ಲ ಧಿಡೀರೆಂದು ಸಾಧಿತವಾಗಬೇಕು ನಮಗೆ ! ಇಂಥ ವೇಗಕ್ಕೆ ಬೆನ್ನು ಹತ್ತಿದ ನಾವು ಒಂದಿನಿತು ವಿರಾಮವಾಗಿ ಕೂತು ಅಕ್ಷರಗಳ ಹಿನ್ನೆಲೆಯಲ್ಲಿ ಹುದುಗಿ ರುವ ಜೀವಂತಿಕೆಯ ತತ್ತ್ವವನ್ನು ಅನಾವರಣಗೊಳಿಸಿಕೊಳ್ಳುವ ಅವಶ್ಯಕತೆ ಇದೆ. ನಾವು ಜಾನಪದದ ಮೌಖಿಕತೆಯ ಸಂಸ್ಕೃತಿಯನ್ನು ದಾಟಿ, ಅದರ ಮುಂದಿನ ಅಕ್ಷರ ದಾಖಲೆಯ ಬರಹದ ಸಂಸ್ಕೃತಿಯನ್ನು ದಾಟಿ, ದೃಶ್ಯ ಮಾಧ್ಯಮದ ಸಂಸ್ಕೃತಿಯನ್ನು ಪ್ರವೇಶಿಸುತ್ತಿದ್ದೇವೆ. ಆದರೆ ಈ 'ದೃಶ್ಯ' ಗ್ರಹಿಕೆಯು ಅತ್ಯಂತ ಮೇಲ್ಪದರದ್ದು. ಇದಲ್ಲದೆ, 'ದೃಶ್ಯ' ಮಾಧ್ಯಮದ ಗ್ರಹಿಕೆಯು ಅತ್ಯುಗ್ರ ವೈಯಕ್ತಿಕತೆಯ ನೆಲೆಯನ್ನು ಹೊಂದಿರುವಂತಹದು. ಮೌಖಿಕತೆ ಮತ್ತು ಬರೆಹದ ಮಾಧ್ಯಮಗಳಿಗೆ ಸಾಧ್ಯವಾಗುವ

ಸಮಷ್ಟಿಯ ಗ್ರಹಿಕೆ ಈ ದೃಶ್ಯ ಮಾಧ್ಯಮಕ್ಕೆ ಲಭ್ಯವಾಗುವುದಿಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ಒಂದು ಕಥೆ ನೆನಪಿಗೆ ಬರುತ್ತದೆ: ತಾಯವ್ವ ಮುಂಗುಸಿಯೊಂದನ್ನು ಸಾಕಿರುತ್ತಾಳೆ. ಒಂದು ದಿನ ಅವಳು ತನ್ನ ಮಗುವನ್ನು ನೋಡಿಕೊಂಡಿರಲು ಮುಂಗುಸಿಗೆ ಸೂಚಿಸಿ ನೀರು ತರಲು ಬಾವಿಗೆ ತೆರಳುತ್ತಾಳೆ. ಇತ್ತ ತೊಟ್ಟಿಲಿನ ಹಗ್ಗದಗುಂಟ ಹಾವೊಂದು ಇಳಿದು ಬರುವುದನ್ನು ನೋಡಿದ ಮುಂಗುಸಿ ಅದನ್ನು ಕಚ್ಚಿ ಕೊಂದು ಹಾಕುತ್ತದೆ. ತಾಯವ್ವನಿಗೆ ಸೂಚಿಸಲೋ ಎನ್ನುವಂತೆ ಮುಂಗುಸಿ ಅವಳತ್ತ ಧಾವಿಸಿ ಬಂದಾಗ ಅದರ ಬಾಯಿಗೆ ಅಂಟಿದ ರಕ್ತವನ್ನು ಕಂಡು, ಅವಳು ಮುಂಗುಸಿಯು ತನ್ನ ಮಗುವನ್ನು ಕಚ್ಚಿ ಕೊಂದರೆ ಪಡಿಸಿರಬೇಕೆಂದು ಭಾವಿಸಿ. ಕೊಡವನ್ನು ಅದರ ಮೇಲೆ ಅಪ್ಪಳಿಸಿ ಕೊಂದುಹಾಕಿ, ಅಳುತ್ತ ಮನೆಗೆ ಓಡಿಬಂದರೆ ಅವಳ ಮಗು ಆಡುತ್ತಿದೆ–ಆ ಮಗುವಿನ ಪಕ್ಕದಲ್ಲಿ ಮುಂಗುಸಿಯ ಆಕ್ರಮಣಕ್ಕೆ ಸಿಕ್ಕ ಹಾವು ಸತ್ತು ಬಿದ್ದಿದೆ. ತಿಳಿಗೇಡಿ ತಾಯವ್ವ ತಾನು ಕಂಡ 'ದೃಶ್ಯ'ವನ್ನು ನಂಬಿದ ಅವಿವೇಕದ ಬಗೆಗೆ ಹಳಹಳಿಸಿ ಶೋಕಿಸುತ್ತಾಳೆ.

ಅದಕ್ಕೇ ನಮ್ಮಲ್ಲಿ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಎನ್ನುವ ಮಾತು ಇರುವುದು. ಅಂದರೆ, ಈ ದೃಶ್ಯ ಗ್ರಹಿಕೆಯು ತನ್ನಷ್ಟಕ್ಕೆ ತಾನು ಸ್ವತಂತ್ರವಾದ ದ್ದಾಗಿರದೇ ಇತರ ಗ್ರಹಿಕೆಗಳ ಪ್ರಮಾಣವನ್ನು ಬಯಸುವಂಥದು. ಮತ್ತು ಇತರ ಗ್ರಹಿಕೆಗಳ ಮೂಲಕವಾಗಿ ಸಮೂಹ ಸಾಧ್ಯತೆಯನ್ನು ಸಾಧಿಸಿಕೊಳ್ಳುವಂತಹದು. ಬರೆಹ ಮಾಧ್ಯಮವು ಈ ನೆಲೆಯಲ್ಲಿಯೇ ಮಹತ್ವವನ್ನು ಪಡೆದುಕೊಳ್ಳುತ್ತದೆ. ಆದರೆ ವೇಗದ ಬೆನ್ನು ಹತ್ತಿದ ಮನಸ್ಸಿಗೆ ಬರೆಹಕ್ಕೆ ತೆರೆದುಕೊಳ್ಳುವ ವಿರಾಮವೆಲ್ಲಿದೆ? ಇಂಥಲ್ಲಿ ಸಾಹಿತ್ಯಿಕ ಸಾಂಸ್ಕೃತಿಕ ಸಣ್ಣ ಪತ್ರಿಕೆಗಳು ಇನ್ನಷ್ಟು ಮಹತ್ವ ಪಡೆದುಕೊಳ್ಳು ತ್ತವೆ. ಈ ಪತ್ರಿಕೆಗಳಲ್ಲಿ ಏರ್ಪಡುವ ವಿಚಾರ ಮಂಥನಗಳು 'ನವಸ್ಮೃತಿ'ಯನ್ನು ನಿರ್ಮಿಸಬಲ್ಲವು.

●

ಒಂಭತ್ತು ವರ್ಷಗಳ ಹಿಂದೆ (೧೯೮೬ರಲ್ಲಿ) ನಾವು ಆರು ಜನ ಗೆಳೆಯರು ಇಂಥ ಹತ್ತು ಹಲವು ಯೋಚನೆಗಳನ್ನು–ಕನಸುಗಳನ್ನು ಇಟ್ಟುಕೊಂಡು **'ಸಂವಾದ'**(ಇಂದು ಸಾಹಿತ್ಯ ಸಂವಾದ) ಪತ್ರಿಕೆಯನ್ನು ಆರಂಭಿಸಿದೆವು. ನಮ್ಮಲ್ಲಿ ಯಾರೇ ಸಂಪಾದಕರಾಗಿ ದ್ದರೂ, ಈ 'ಸಂವಾದ'ವನ್ನು ನಡೆಸುವ ಮನಸ್ಸು ನಮ್ಮೆಲ್ಲರದ್ದೂ ಆಗಿರುತ್ತದೆ. ಅವರ ಕನಸುಗಳು ನಮ್ಮೆಲ್ಲರ ಕನಸುಗಳೂ ಆಗಿರುತ್ತವೆ. ಈ ನಮ್ಮ ಕನಸುಗಳು ಸಾಂಸ್ಕೃತಿಕ ಆರೋಗ್ಯವನ್ನು ಕುರಿತಾದವುಗಳು–ರುಚಿ ಪ್ರಜ್ಞೆಯನ್ನು ಕುರಿತಾದವುಗಳು. 'ಎಲ್ಲ

ತತ್ವದೆಲ್ಲೆ ಮೀರಿ' ಇರುವ ಜೀವಂತಿಕೆಯ ಧಾರೆಯನ್ನು ಕಾಣುವಂಥದು–ಕಾಣಿಸುವಂಥದು ಇಂಥ ಕನಸು ಕಾಣುವ ಮುಗ್ಧತೆ ಇರುವವರೆಗೆ ಸಂವಾದ ನಡೆಯಬೇಕು–ನಡೆಯುತ್ತದೆ. ಅಂಥ ಮುಗ್ಧತೆ ನಮ್ಮಲ್ಲಿ ತೀರಿದಾಗ ಅದು ಮತ್ತೊಂದು ಮನದ ಮುಂದೆ ರೂಪುಗೊಳ್ಳುತ್ತದೆನ್ನುವದು ನಮ್ಮ ನಂಬಿಕೆ. ಆಗ ಆ ಮನಸ್ಸು ಇಂಥ ಸಂವಾದದ ಬೆನ್ನು ಹತ್ತುತ್ತದೆ. ಅಂತೂ ಹೀಗೆ ಈ ಸಂವಾದ ನಿತ್ಯ....ನಿರಂತರ.... ○

(೧೯೯೪ರ ಡಿಸೆಂಬರಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಪತ್ರಿಕಾ ಅಕಾಡೆಮಿ ಏರ್ಪಡಿಸಿದ್ದ ಸಣ್ಣ ಪತ್ರಿಕೆಗಳನ್ನು ಕುರಿತ ವಿಚಾರ ಸಂಕಿರಣವಲ್ಲಿ ಓದಿದ ಟಿಪ್ಪಣಿಗಳು)

ಒಮ್ಮೆ ನಾನು ಕಟ್ಮಂಡುವಿನತ್ತ ಹೊರಟಿದ್ದೆ. ದಿನಾಲು ಇಪ್ಪತ್ತರಿಂದ ಮೂವತ್ತು ಮೈಲಿಗಳಷ್ಟು ನಡೆಯುತ್ತಿದ್ದೆ. ಒಂದು ಸಂಜೆ ಆರು ಗಂಟೆಯ ಹೊತ್ತಿಗೆ, ಯಾಕೋ ದಣಿವು ಆದರಿಂದ ಸ್ವಲ್ಪ ಮಲಗಬೇಕೆಂದು ನಿರ್ಧರಿಸಿ ಸಮೀಪದಲ್ಲಿದ್ದ ಒಂದು ಗವಿಗೆ ಹೋದೆ. ನೆಲವು ತಂಪಾಗಿದ್ದುದರಿಂದ ನನ್ನ ಕಂಬಳಿಯನ್ನು ಹಾಸಿ ಒರಗಿಕೊಳ್ಳುತ್ತಿದ್ದಂತೆಯೇ ಮೂರು ಹುಲಿಯ ಮರಿಗಳು ಕಚಗುಡುತ್ತ ನನ್ನ ಮೈಮೇಲೆ ಏರತೊಡಗಿದವು. ಹತ್ತು ಹದಿನೈದು ದಿನಗಳ ಆ ಹುಲಿಯ ಮರಿಗಳು ನನ್ನನ್ನು ತಮ್ಮ ತಾಯಿ ಎಂದು ಭಾವಿಸಿ ಮೊಲೆ ಹಿಡಿಯಲು ಧಾವಿಸಿದ್ದವು. ಸ್ವಲ್ಪ ಸಮಯ ಅವುಗಳ ಮೈ ಸವರುತ್ತ ಅಲ್ಲಿಯೇ ಬಿದ್ದುಕೊಂಡೆ. ಆಮೇಲೆ ಎದ್ದು ಕುಳಿತು ನೋಡಿದರೆ ಗವಿಯ ಬಾಗಿಲಲ್ಲಿ ತಾಯಿ ಹುಲಿ ನಿಂತಿದೆ! ನನಗೆ ಒಮ್ಮೆಲೇ ಹೆದರಿಕೆಯಾಯಿತು. ಹುಲಿಯು ನನ್ನ ಮೇಲೆ ಆಕ್ರಮಣ ಮಾಡುವುದು ನಿಶ್ಚಿತ ಎನಿಸಿತು. ಆದರೆ ನಂತರದಲ್ಲಿ ನನ್ನಲ್ಲಿ ಅತ್ಯಂತ ತೀವ್ರವಾದ ಭಾವನೆಯೊಂದು ಮೂಡಿತು. "ಈ ಮರಿಗಳಿಗೆ ಏನೂ ತೊಂದರೆ ಮಾಡುವ ಉದ್ದೇಶ ನನಗಿಲ್ಲ. ತಾಯಿ ಹುಲಿ ಗವಿಯ ಬಾಗಿಲಿನಿಂದ ಆಚೆಗೆ ಸರಿದು ನನಗೆ ದಾರಿ ನೀಡಿದರೆ ನಾನು ಎದ್ದು ಹೋಗುತ್ತೇನೆ....." ನಾನು ನನ್ನ ಕಂಬಳಿ ಮತ್ತು ಕಮಂಡಲ ಎತ್ತಿಕೊಂಡು ಎದ್ದುನಿಂತೆ. ಆಗ ಹುಲಿಯು ಗವಿಯ ಬಾಗಿಲಿನಿಂದ ಆಚೆಗೆ ಸರಿಯಿತು. ನಾನು ಗವಿಯಿಂದ ಹೊರಗೆ ಬಂದು, ಹತ್ತು ಹದಿನೈದು ಹೆಜ್ಜೆ ದೂರ ಬಂದಾಗ ತಾಯಿ ಹುಲಿಯು ತನ್ನ ಮರಿಗಳನ್ನು ಸೇರಲು ನಿರಾಳವಾಗಿ ಗವಿಯನ್ನು ಪ್ರವೇಶಿಸಿತು.....

—ಸ್ವಾಮಿರಾಮ

ಹೊಸ ಓದು

ಭವ (ಕಾದಂಬರಿ)
ಲೇ : ಯು. ಆರ್. ಅನಂತಮೂರ್ತಿ
ಪ್ರ : ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ
ಪುಟ : ೧೧೨ ಬೆಲೆ : ರೂ. ೪೫/–

ಅನಂತಮೂರ್ತಿ ಅವರು ನವ್ಯಪಂಥದ ಮಹತ್ವದ ಲೇಖಕರು. ತೀರಾ ಗಂಭೀರವಾದ ಸಮಸ್ಯೆಗಳನ್ನೆತ್ತಿಕೊಂಡು ಅವುಗಳ ಹಿಂದಿನ ವಿವಿಧ ವೈಚಾರಿಕ ಆಯಾಮಗಳನ್ನು ಸಂಘರ್ಷಾತ್ಮಕವಾಗಿ ನಿರೂಪಿಸುವುದು ಅವರ ಪ್ರವೃತ್ತಿ. ಆಧುನಿಕ ಜಗತ್ತಿನ ವ್ಯಕ್ತಿಯ ಸಮಸ್ಯೆಗಳ ಮೂಲವನ್ನು ಜಾಲಾಡಿಸಿ, ಆ ಸಮಸ್ಯೆಗಳ ಧಾರ್ಮಿಕ–ಸಾಮಾಜಿಕ–ರಾಜಕೀಯ ಬೇರು ಹಿಡಿದು ಬೌದ್ಧಿಕ ವಿಶ್ಲೇಷಣೆ ನೀಡುವ ಅವರ ಲಾಗಾಯ್ತಿನ ಮಹತ್ವಾಕಾಂಕ್ಷೆ ಅವರ ಕತೆ–ಕಾದಂಬರಿಗಳಲ್ಲಿ ಸ್ಫುಟಗೊಳ್ಳುತ್ತಲೇ ಬಂದಿದೆ. ವ್ಯಕ್ತಿ–ಸಮಾಜ, ಆದರ್ಶ–ವಾಸ್ತವ, ಪ್ರಜ್ಞೆ–ಪರಿಸರ. ಸಾಂಪ್ರದಾಯಿಕತೆ–ಆಧುನಿಕತೆಗಳೊಳಗಿನ ಸಂಘರ್ಷವನ್ನು, ವಿಸಂಗತಿಯನ್ನು ತೀವ್ರವಾಗಿ. ನಾಟಕೀಯವಾಗಿ ಅವರು ಚಿತ್ರಿಸುತ್ತ ಬಂದಿದ್ದಾರೆ. ಈ ಚಿತ್ರಣದಲ್ಲಿ ಕೆಲವೊಮ್ಮೆ ಅವರು ಯಶಸ್ವಿಯಾಗಿದ್ದಾರೆ. ಇನ್ನು ಕೆಲವೊಮ್ಮೆ ತನ್ನ ಮಹತ್ವಾಕಾಂಕ್ಷೆಯ ವಸ್ತುವನ್ನು ಸಾರ್ಥಕವಾಗಿ ನಿರ್ವಹಿಸುವ ಮುಕ್ತತೆ ಮತ್ತು ವಿಶಾಲ ನೋಟವಿಲ್ಲದೆ, ಅತಿ ಬೌದ್ಧಿಕವೆನಿಸುವ ಇಲ್ಲವೇ ವಿವಾದಾತ್ಮಕ ಅಂಶಗಳನ್ನು ಮಂಡಿಸುವಷ್ಟರಲ್ಲೇ ತೃಪ್ತರಾಗುವರೆಂಬ ಭಾವನೆಯನ್ನು ಮೂಡಿಸುತ್ತಾರೆ.ಅವರ 'ಸಂಸ್ಕಾರ' ಕಾದಂಬರಿಯ ಯಶಸ್ಸು ನಂತರದ ಯಾವ ಕಾದಂಬರಿಗಳಿಗೂ ದಕ್ಕಿಲ್ಲ. ಹಾಗೆ ನೋಡಿದರೆ ಅವರು ಬರೆದ ಕಾದಂಬರಿಗಳಲ್ಲೆಲ್ಲ ಹೆಚ್ಚು ದೊಡ್ಡ ಕ್ಯಾನ್ವಾಸ್ ಹೊಂದಿದ, ಮತ್ತು ಹತ್ತಾರು ಮೂಲಭೂತ ಪ್ರಶ್ನೆಗಳನ್ನು ಮೈಮೇಲೆ ಎಳೆದುಕೊಳ್ಳುವ 'ಭಾರತೀಪುರ', ಅವರ ಜಿಜ್ಞಾಸೆಯಲ್ಲಿ ಒಡ ಬರೆತು ಬಂದಿರುವ ದೋಷವನ್ನು ಸಾಬೀತುಪಡಿಸುತ್ತದೆ. ಈ ದೋಷವೆಂದರೆ–ಸಾಮಾಜಿಕವೆನಿಸುವ ಸಮಸ್ಯೆಗಳ ಗ್ರಹಿಕೆ ಮತ್ತು ಪರಿಹಾರದ ಸೂತ್ರಗಳ ಮಂಡನೆಯಲ್ಲಿ ವ್ಯಕ್ತಿವಾದಿ ಒಲವುಗಳ ಪ್ರಾಬಲ್ಯ, ಮತ್ತು ಪರಿಹಾರ ಒಂದೋ

ಅಸಾಧ್ಯವೆಂಬ ಇಲ್ಲವೇ ಕ್ರಾಂತಿ ಎಂಬುದು ಈ ನೆಲದಲ್ಲಿ ಒಂದು ಭ್ರಮೆ ಎಂಬ ತೀರ್ಮಾನಕ್ಕೆ ಬರುವಂತಾಗುವುದು. ಇದನ್ನು ಯಥಾಸ್ಥಿತಿವಾದ ಎನ್ನುವಂತಾಗುತ್ತದೆ.[1] ಅಂದರೆ, ಕ್ರಾಂತಿಯು ಪ್ರಯತ್ನ ಮತ್ತು ವಿಧಾನಗಳ ಸ್ವರೂಪದಲ್ಲೇ ಅದು ವಿಫಲವಾಗಲು ಬೇಕಾದೆಲ್ಲ ಅರ್ಹತೆಗಳನ್ನು ಮೈಗೂಡಿಸಿಕೊಳ್ಳುವುದು. ಈ ಅರ್ಹತೆ, ಕ್ರಾಂತಿಯು ತೇಲುಮೇಲಿನ ಹಾಗೂ ಯಾಂತ್ರಿಕ ಕಲ್ಪನೆಯಿಂದ ಪ್ರಾಪ್ತವಾಗಿರುವುದು. ಇದೇ ತುಸು ಹೆಚ್ಚಿನ ಪ್ರಗತಿಪರ, ಮುಕ್ತ ನೋಟವುಳ್ಳ ಹಾಗೂ ಕ್ರಾಂತಿಯ ಡೈನಮಿಕ್ಸನ್ನು ದ್ವಂದ್ವಾತ್ಮಕವಾಗಿ ಪರಿಭಾವಿಸಬಲ್ಲ ಲೇಖಕ ಕನಿಷ್ಠ ಆಶಯದ ಮಟ್ಟದಲ್ಲಾದರೂ ಸಮರ್ಪಕವಾದ ಪರಿಹಾರವನ್ನು ಧ್ವನಿಸಬಲ್ಲ ಅಥವಾ ಅರ್ಥಪೂರ್ಣ ಮುಕ್ತಾಯವನ್ನು ಕಲ್ಪಿಸಬಲ್ಲ.ಉದಾ.ಗೆ,ನಿರಂಜನರ 'ಮೃತ್ಯುಂಜಯ'ದ ಮುಕ್ತಾಯವನ್ನು 'ಭಾರತೀಪುರ'ದ ಮುಕ್ತಾಯದೊಂದಿಗೆ ಹೋಲಿಸಬಹುದು. ಕಥಾವಸ್ತುವಿನ ಕಾಲ, ಸಂದರ್ಭ, ಬಿಕ್ಕಟ್ಟುಗಳ ಸ್ವರೂಪದಲ್ಲಿನ ವ್ಯತ್ಯಾಸಗಳನ್ನು ಅನುಲಕ್ಷಿಸಿಯೂ ಈ ಮಾತನ್ನು ಹೇಳಲೇಬೇಕಾಗಿದೆ.

ಇತಿಹಾಸದ ಸ್ಮೃತಿಗಳನ್ನು ನಾಶಮಾಡುವ ಪ್ರಯತ್ನ ಸಫಲವಾಗದ ಉದಾಹರಣೆಗಳನ್ನು 'ಭಾರತೀಪುರ' ಮುಂದೊಡ್ಡಿದರೆ, 'ಸಂಸ್ಕಾರ' ವ್ಯಕ್ತಿಯ ಒಳಿತು ಕೆಡುಕುಗಳ ನೈತಿಕ ವಿಮರ್ಶೆಯನ್ನು ಶಾಸ್ತ್ರಗಳಿಂದ ನಡೆಸದೆ ಅಸ್ತಿತ್ವವಾದಿ ನೆಲೆಯಲ್ಲಿ ನೋಡುವ ಒಲವನ್ನು ಪ್ರಕಟಿಸುತ್ತದೆ. 'ಅವಸ್ಥೆ'ಯ ವಸ್ತುವಂತೂ ಅನಂತಮೂರ್ತಿ ಅವರ ಈಚಿನ ದೀರ್ಘ ಕತೆಗಳ ವಸ್ತುವನ್ನೇ ಇನ್ನಷ್ಟು ಆಯಾಮಗಳೊಂದಿಗೆ ವಿಶ್ಲೇಷಿಸುವ ಮಾದರಿಯದ್ದಾಗಿದೆ.ರಾಜಕಾರಣಿಯೊಬ್ಬ ಅಪ್ಪಟ ಮನುಷ್ಯ ಮಾತ್ರನಾಗಿ ತನ್ನ ಬದುಕಿನ ಹಿನ್ನೋಟ ನಡೆಸುತ್ತಾ ಪ್ರೀತಿ ಪ್ರೇಮಗಳ ಬೆನ್ನು ಹತ್ತುತ್ತಾ ರಾಜಕೀಯ ಅಧಿಕಾರದ ಆಮಿಷವನ್ನು ಕೈಬಿಡುವುದನ್ನು ಹಾಗೂ ತನ್ನ ವ್ಯಕ್ತಿತ್ವದಲ್ಲಿನ ಬಿರುಕನ್ನು ಗುರುತಿಸಿಕೊಳ್ಳುವಷ್ಟರ ಮಟ್ಟಿಗೆ ಪ್ರಾಮಾಣಿಕತೆ ಉಳಿಸಿಕೊಳ್ಳುವುದನ್ನು ಈ ಕಾದಂಬರಿ ಚಿತ್ರಿಸುತ್ತದೆ. ಆದರೆ, ಈ ಕಾದಂಬರಿಗಳು ಗಹನವಾದ ವಸ್ತುವನ್ನೆತ್ತಿಕೊಂಡೂ ಯಶಸ್ವಿಯಾಗದ ಕಾದಂಬರಿಗಳು. ವಸ್ತುವಿನೊಳಗೇ ಹುದುಗಿರುವ ಧ್ವನಿ

---

1 ಸಮಾಜವಾದಿ ಚಿಂತಕ ದಿ॥ ವೆಂಕಟರಾವ್. 'ಭಾರತೀಪುರ'ದಲ್ಲಿ ಒಂದು ಕಾರ್ಖಾನೆ ಇಲ್ಲದಿರುವಂತೆ ಕಲ್ಪಿಸಿರುವುದು ನಾಯಕನ ಸಮಸ್ಯೆಯ ಒಂದು ಮುಖ್ಯ ಆಯಾಮ ಎಂದು ಗುರುತಿಸುತ್ತಾ, 'ಭಾರತೀಪುರ'ದ ಸೋಲಿನ ಕಾರಣವನ್ನು ಸೊಗಸಾಗಿ ಬಣ್ಣಿಸಿದ್ದಾರೆ. ನೋಡಿ : ದುಡಿಯುವವರ ದನಿ ಮತ್ತು ಇತರ ಲೇಖನಗಳು, ೧೯೮೩, ಬೆಂಗಳೂರು ಪು. ೨೫.

ಮತ್ತು ಕಸುಬುಗಾರಿಕೆಯ ಗುಣಗಳ ಮೇಳವದಿಂದ 'ಸಂಸ್ಕಾರ'ವೊಂದೇ ಅನಂತಮೂರ್ತಿ ಅವರ ಯಶಸ್ವಿ ಕಾದಂಬರಿ ಎನ್ನಬೇಕಾಗುತ್ತದೆ.

●

ಇದೀಗ ಅನಂತಮೂರ್ತಿ ಅವರು 'ಭವ' ಎಂಬ ಹೊಸ ಕಾದಂಬರಿಯೊಂದನ್ನು ಪ್ರಕಟಿಸಿದ್ದಾರೆ. (ಅಕ್ಷರ ಪ್ರಕಾಶನ, ೧೯೯೪, ಪುಟ ೧೦೬) ಇದನ್ನು ಹನ್ನೆರಡು ದಿನಗಳಲ್ಲಿ ಬರೆದುದು ಎಂದು ಸೂಚಿಸಲಾಗಿದೆ. ಇಷ್ಟು ಕಡಿಮೆ ದಿನಗಳಲ್ಲಿ ಬರೆದುದಕ್ಕೆ ಈ ಕಾದಂಬರಿ ಯಶಸ್ವಿಯಾಗಬಾರದೆಂದಿಲ್ಲ. ಏಕೆಂದರೆ, ಕಾರಂತರ 'ಚೋಮನದುಡಿ' 'ಸರಸಮ್ಮನ ಸಮಾಧಿ' ಐದೇ ದಿನಗಳಲ್ಲಿ ಬರೆದವು ; ಮೂವತ್ತು ಅಧ್ಯಾಯಗಳ ಬೃಹತ್ ಕಾದಂಬರಿ 'ಮರಳಿ ಮಣ್ಣಿಗೆ' ಮೂವತ್ತೇ ದಿನಗಳಲ್ಲಿ ಬರೆದುದು. ಇದು ಬರೆಯುವ ಲೇಖಕನ ಹರಿಗಡಿಯದ ಏಕಾಗ್ರತೆ, ಚಿಂತನೆಯ ಅನುಸ್ಯೂತತೆ ಮತ್ತು ಒಟ್ಟಾರೆ ಸೃಜನಕ್ರಿಯೆಯ ಸತ್ವಕ್ಕೆ ಸಂಬಂಧಿಸಿದ ಅಂಶವಾಗಿದೆ.

ಅದೇ 'ಸಂಸ್ಕಾರ' 'ಭಾರತೀಪುರ'ಗಳ 'ಸೂರ್ಯನ ಕುದುರೆ' 'ಮೋಜರಾಜ'ಗಳ ಅನಂತಮೂರ್ತಿ ಇಲ್ಲಿ 'ಭವ'ದಲ್ಲಿ ಮತ್ತೆ ಮೂಡಿಬಂದಿದ್ದಾರಾದರೂ. ಈ ಕಾದಂಬರಿ ಮೂರು ವ್ಯಕ್ತಿಗಳ ಹಾಗೂ ಮೂರು ತಲೆಮಾರುಗಳೊಳಗಣ ಸಂಬಂಧದ ಜಟಿಲ ಸ್ವರೂಪವನ್ನು ಬಗೆಯುವಂಥಾದ್ದು ; ಹಾಗೆ ಮಾಡುತ್ತ 'ಭವ'ದ (ಮಾನವ ಜನ್ಮ, ಸಂಸಾರ, ಜೀವನ) ವಿಮರ್ಶೆಯ ಮೂಲಭೂತ ಕ್ರಿಯೆಗೆ ತೊಡಗುವಂಥಾದ್ದು. ಭವ, ಭವಾಂತರ, ಭವಾವಳಿಗಳ ನಿರೂಪಣೆ ನಮ್ಮ ಸಾಹಿತ್ಯಪರಂಪರೆಯ ವಿವಿಧ ಘಟ್ಟಗಳಲ್ಲಿ ಬಂದುದೇ ಆಗಿದೆ ಆದರೆ, ಅನಂತಮೂರ್ತಿ ಅವರು ತನ್ನ ಮರ್ಜಿಗನುಗುಣವಾಗಿ ಅದನ್ನು 'ಆಧುನಿಕ' ಸಮಾಜದ ಸಮಸ್ಯೆಯನ್ನಾಗಿ ಚರ್ಚಿಸಿದ್ದಾರೆ. ಚರ್ಚೆಯ ಬಗ್ಗೆ ನನ್ನ ತಕರಾರೇನಿಲ್ಲವಾದರೂ, ಈ ಒಟ್ಟಾರೆ ಚರ್ಚೆಯ ಹಿಂದಿನ ಆಶಯ ಮತ್ತು ಅದು ಕಾದಂಬರಿಯಲ್ಲಿ ಮೈದಳೆದಿರುವ ರೀತಿ ತೀರಾ ನಿರಾಶಾದಾಯಕ, ಅಷ್ಟೇ ಅಲ್ಲ ; ನಿರರ್ಥಕ ಕೂಡ–ಎನ್ನಬೇಕಾಗಿದೆ. ಹಾಗಾಗಿ ಇದೊಂದು 'ಭವ'ದ ನಿರೂಪಣೆಯಾಗದೆ ನಿದ್ದೆ ತಿಳಿದೆದ್ದಂತೆ ಅಥವಾ ನಿಶೆಯಿಳಿದಂತೆ (ಕೆಲವು ಭಾಗಗಳು ಅನಂತಮೂರ್ತಿ ಅವರ ಅಭಿಮಾನಿ ಬಳಗಕ್ಕೆ ನಿಶೆಯೇರಿಸಲೂಬಹುದೆನ್ನಿ !) ಎನ್ನಬಹುದೋ ಏನೋ. ಭವಕ್ಕಿಂತ ಭಾವ, ಅನುಭಾವದ ಮೂಲಕವೂ ಮೂರ್ತಗೊಳ್ಳುತ್ತ ಹೋಗುವ ಲೈಂಗಿಕ ಕಾಮನೆಗಳ, ಲೋಲುಪ್ತಿಯ 'ಅನು–ಭವ' ಇಲ್ಲಿನದು. ಹಾಗಾಗಿ 'ಭವ' ಎನ್ನುವುದಕ್ಕಿಂತ 'ವಿಭವ'ವೆಂದೋ 'ಭವರೋಗ'ವೆಂದೋ ಹೆಸರಿಡುತ್ತಿದ್ದರೆ ಹೆಚ್ಚು ಒಪ್ಪುತ್ತಿತ್ತು.

●

ಗಂಗೂವನ್ನು ಇಟ್ಟುಕೊಂಡಿರುವ ನಾರಾಯಣ ತಂತ್ರಿಯು ಔದಾರ್ಯದೊಂದಿಗೆ ಸ್ತ್ರೀಸುಖವನ್ನು ತನ್ನಲ್ಲಿ ಪ್ರಪ್ರಥಮವಾಗಿ ಅರಳಿಸಿ ವಾಸನೆಯಾಗಿ ಉಳಿದುಬಿಟ್ಟ ಆ ಹೆಣ್ಣಿನ ಮೂಲಕ ತಾನು ಪಡೆದ ಭವದಿಂದ ತನಗೆ ಬಿಡುಗಡೆಯಿಲ್ಲ (ಪ್ರ. ೬೭) ಎಂಬ ದಿನಕರನ ಪ್ರಜ್ಞೆಯಿಂದ ಈ ಕಾದಂಬರಿಯ ವಸ್ತು ಕೈಕಾಲು ಪಡೆಯುತ್ತದೆ. ನಾರಾಯಣ ತನ್ನ ಲಂಪಟತನದಿಂದ ಬಿಡುಗಡೆ ಹೊಂದಿ ಮಾತಾಡುವುದು, ದಿನಕರ ತನ್ನ ಪೂರ್ವಾಶ್ರಮದ ಭವಾಂತರಗಳ ಬಗ್ಗೆ ಹಳಹಳಿಸುವುದು, ಪ್ರಸಾದ ತನ್ನ ಹುಟ್ಟಿನ ಬಗ್ಗೆ ಚಿಂತಿಸುವುದು. ಶಾಸ್ತ್ರಿ ತನ್ನ ಹೆಂಡತಿ ಮತ್ತು ಉಪಪತ್ನಿಯ ಬಗ್ಗೆ ನಡಕೊಳ್ಳುವುದು. ಪಂಡಿತನ ಅತಿರೇಕಕ್ಕೆ ಶಾಸ್ತಿ ಮಾಡಲು ಹಾತೊರೆಯುವುದು ಇವೆಲ್ಲ ಪ್ರಜ್ಞಾಪ್ರವಾಹ ತಂತ್ರದಿಂದ ನಿರೂಪಿತವಾಗಿವೆ. ಅಧ್ಯಾಯ ೯ ಅಂತೂ ದಿನಕರನ ಪ್ರಜ್ಞೆಯ ಕೇಂದ್ರದಿಂದ ಹೊರಟ ಉತ್ಕಟ ಭಾವುಕತೆಯಿಂದ ಅಮೂರ್ತ ತಾತ್ತ್ವಿಕತೆಯ ಕಡೆಗೆ ಹೊರಳುವ ಭಾಗ. ಇಲ್ಲೆಲ್ಲ ಹಳಸಲು ನವ್ಯದ ತಂತ್ರ–'ಸಂಸ್ಕಾರ' 'ಭಾರತೀಪುರ'ಗಳದ್ದು ನುಸುಳಿಬಿಡುತ್ತದೆ.

ಅಧ್ಯಾಯ ೧೦ರಲ್ಲಿ ದಿನಕರನ ಕೊರಳ ತಾಯಿತದಲ್ಲಿರುವ ಶ್ರೀ ಚಕ್ರವನ್ನು ಇಡೀ ಅಂಗಳ ತುಂಬುವ ಹಾಗೆ ಸೀತಮ್ಮ ಬಿಡಿಸಿದುದರ ವರ್ಣನೆಯಿದೆ. ಶ್ರೀ ಚಕ್ರದ ತಾತ್ತ್ವಿಕ ಅರ್ಥ ಗಾಂಭೀರ್ಯವೇನಿದ್ದರೂ ಇಲ್ಲಿ ದಿನಕರ ಅದನ್ನು ಸ್ವೀಕರಿಸುವ ಮನಃಸ್ಥಿತಿಯಲ್ಲಿ, ಅವನ ಭಾವವ್ಯಾಪಾರಗಳ ಹಿನ್ನೆಲೆಯಲ್ಲಿ ತೀರ್ಮಾನಿಸಬೇಕಾಗುತ್ತದೆ. ಇದೇ ದಿನಕರ ಮಹಾಮಾತೆಗೆ ದೇವನಾಗರಿಯಲ್ಲಿ ಬರೆದ ಪತ್ರದಲ್ಲಿ ಎಲ್ಲ ದರ್ಶನಾರ್ಥಿಗಳನ್ನು ತಬ್ಬಿಕೊಳ್ಳುವ. ತಬ್ಬಿಕೊಂಡರೂ ಸುಸ್ತಾಗದ ಆಕೆಯ ಬಗ್ಗೆ ಸಿನಿಕನಂತೆ ಬರೆಯುತ್ತಾ 'ನಿನ್ನ ಕಣ್ಣುಗಳಲ್ಲಿ ಆ ಹಿಂದಿನ ತುಂಟತನ ಉಳಿದುಬಿಟ್ಟದ್ದನ್ನು ಕಂಡಿದ್ದೆನಲ್ಲವೆ ? ಆದ್ದರಿಂದ ನೀನು ಹೊರಳಿಬಿಟ್ಟೆಯ ಹೇಗೆ ? ಹೊರಳಿಕೊಂಡ ಮೇಲೂ ನಮ್ಮ ನಮ್ಮ ಭವದಲ್ಲಿ ನಾವು ಇರುವುದಲ್ಲವೆ ? ನೀನು ಇನ್ನೂ ಉಚ್ಚೆ ಹೊಯ್ಯುತ್ತೀ ಅಲ್ಲವೆ ; ಎಂದು ಏನೇನೋ ನಾನು ಅನುಮಾನಿಸುತ್ತಿದ್ದಾಗ ನೀನು ನನ್ನ ತಬ್ಬಿದಿ' (ಪ್ರ. ೮೫) ಎಂದು ಪೂರ್ವಾನುಭವವನ್ನು ದಾಖಲಿಸುತ್ತಾನೆ. 'ನೋಡುವವನ ಕಣ್ಣುಗಳು ಯೋನಿಲಿಂಗಗಳ ಸಂತತ ಸಂಯೋಗದಲ್ಲಿ ತತ್ಪರವಾಗುತ್ತ, ಕುಂಕುಮ ಮತ್ತು ಅರಿಶಿನದ ಬಣ್ಣಗಳಲ್ಲಿ ತಂಗುತ್ತ, ಚಲಿಸುತ್ತ ಕೇಂದ್ರದ ಬಿಂದುವಿನಲ್ಲಿ ಏಕಾಗ್ರಗೊಳ್ಳುವಂತಿತ್ತು' (ಪ್ರ. ೮೭) ಎಂಬ ವರ್ಣನೆ ಮತ್ತು ಅವನು ಭೋಗಿಸಿದ ಹೆಣ್ಣುಗಳಿಗೆ ಒಬ್ಬೊಬ್ಬರಿಗೂ ಅವನು ಬರೆಯುವ ಪತ್ರಗಳ ಧಾಟಿ ಶ್ರೀ ಚಕ್ರದ ಕಲ್ಪನೆಯನ್ನು ವಿಡಂಬನೆಗೊಳಪಡಿಸುವಷ್ಟು ಸಾಂದ್ರವೂ ಸಾವಯವವೂ ಆದ ವಿವರಗಳಿಂದ ಪುಷ್ಟವಾಗಿ, ಜತೆಗೆ ದೋಸೆಗಳ ಹದದೊಂದಿಗೆ ಶ್ರೀಚಕ್ರ ರಚನೆಯ ಕೈಚಳಕವನ್ನು

ಸಮೀಕರಿಸುವ ಭಾಗವನ್ನೂ ಚಿಂತಿಸಬೇಕು (ಪು. ೯೩). ಇಲ್ಲೆಲ್ಲ ಕಡೆ ಹೆಣ್ಣುಗಳನ್ನು ಭೋಗೈಕ ದೃಷ್ಟಿಯಿಂದ ಪುರುಷ ಸ್ವಾರ್ಥದಿಂದ ನೋಡುವ ಏಕಪಕ್ಷೀಯ ಪೂರ್ವಾಗ್ರಹ–ಅನಂತಮೂರ್ತಿ ಅವರ ಕೃತಿಗಳಲ್ಲಿ ಅನೂಚಾನವಾಗಿ ಬಂದುವು–ಢಾಳಾಗುತ್ತ ಬರುತ್ತದೆ. ಈ ಪುರುಷ ದುರಹಂಕಾರದಿಂದಾಗಿ ಓರಗೆಯ ಹೆಣ್ಣುಗಳನ್ನು ಆತ ಆರೋಗ್ಯಪೂರ್ಣವಾಗಿ, ಕನಿಷ್ಠ ನಾಗರಿಕ ಗೌರವದಿಂದ ಸಂಧಿಸಲಾರ.[2] ಸೀತಮ್ಮನ ಬಗ್ಗೆ ಅವನಿಗಿರುವ ಗೌರವದೊಂದಿಗೆ ಇದನ್ನು ಹೋಲಿಸಿದರೆ ಈ ಅಂಶ ಮನದಟ್ಟಾಗುತ್ತದೆ.

ಪ್ರಸಾದ, ದಿನಕರ ತನ್ನ ತಂದೆಯೆಂದು ತಿಳಿದು ಅವನ ದರ್ಶನದಿಂದ ಕೃತಾರ್ಥನಾಗುವುದಲ್ಲದೆ ಶ್ರೀಪಾದನಾಗುವ ಮುಹೂರ್ತವನ್ನು ಅದರೊಂದಿಗೆ ಕಂಡುಕೊಳ್ಳುವುದು ಅವನ ಭವಾಂತರವಾಗುತ್ತದೆ ; ತಂದೆಯ ಭವಾವಳಿಯ ಚಕ್ರದ ತಿರುವು ಮುರುವಾದ ಗತಿಯಿದು.[3] ಪ್ರಸಾದನ ಧ್ಯಾನ, ಸಂಗೀತಗಳ ತಲ್ಲೀನತೆ ಕಂಡು ದಿನಕರ 'ಆದಿಶಂಕರರು ಕಾಣಲು ಇವನಂತೆಯೇ ಇದ್ದಿರಬೇಕು' ಎಂದು ವಿಸ್ಮಯಗೊಳ್ಳುತ್ತಾನೆ. (ಪು. ೧೦೫) ಈ ವಿಸ್ಮಯ, ಉದ್ಗಾರ, ಸನ್ಯಾಸ ಧರ್ಮವನ್ನು ಆರಾಧಿಸುವ ಬಗೆಯದ್ದೇ ಅಥವಾ ವಿಡಂಬಿಸುವ ಮಾದರಿಯದ್ದೇ ? ಆರಾಧಿಸುವ ಬಗೆಯದ್ದೆಂದಾದರೆ ಮಹಾಮಾತೆ ಪಡೆಯುತ್ತಿರುವ ಗೌರವಾದರಗಳನ್ನು ಸಿನಿಕತನದಿಂದ ಎದುರುಗೊಳ್ಳುವುದೇಕೆ ? ಅವಳು ಹೆಣ್ಣಾಗಿ ಸನ್ಯಾಸಕ್ಕೆ ನಾಲಾಯಖ್ಖೆಂಬ ಮಾಧ್ವ ಪೂರ್ವಾಗ್ರಹವೇ ? ಅಥವಾ ಆಕೆಯ ವೈಭವಾಡಂಬರಗಳನ್ನು ನಿರಾಕರಿಸುವ ಉದ್ದೇಶದಿಂದಲೇ ಈ ಸಿನಿಕತನದ ಪ್ರತಿಕ್ರಿಯೆಯೇ ?

---

2 'ಭಾರತೀಪುರ'ದಲ್ಲಿ ನಾಗಮಣಿಯ ಆತ್ಮಹತ್ಯೆಯನ್ನು ನೋಡಿಯೂ ಉದಾಸೀನ್ಯ ಪ್ರಕಟಿಸುವ ಜಗನ್ನಾಥನಿಂದ ಹೆಣ್ಣೆಂದರೆ ಯೋನಿಯೆಂದೇ ತಿಳಿಯುವ ದಿನಕರನವರೆಗೆ ಅನಂತಮೂರ್ತಿ ಅವರ ಸೃಜನಶೀಲ ಪ್ರತಿಭೆ ಮುನ್ನೆಗೆಯುತ್ತ ಬಂದುದು ಸಾಮಾನ್ಯ ಸಂಗತಿಯೇನಲ್ಲ.

3 ಹಾಗೆಯೇ ಅನಂತಮೂರ್ತಿ ಅವರ ವೈಚಾರಿಕತೆಯ ತಿರುವು ಮುರುವಾದ ಮಾರ್ಪಾಡು. ಹಿನ್ನಡೆ ಕೂಡ : 'ವಂಶವೃಕ್ಷ'ದ ಕೊನೆಯಲ್ಲಿ ಶ್ರೋತ್ರಿಯ ತನ್ನ ಜನ್ಮ ರಹಸ್ಯ ತಿಳಿದು ಸನ್ಯಾಸ ಸ್ವೀಕರಿಸಿದಂತೆ !? ಎಷ್ಟೇ ಬೌದ್ಧಿಕ ಕಸರತ್ತು, ತಾಂತ್ರಿಕ ಗೋಜಲುಗಳನ್ನು ಹೆಣೆದರೂ ಅನಂತಮೂರ್ತಿ ನಿಜವಾಗಿ 'ಮುದುಕ'ರಾಗಿರುವುದು-ಭೈರಪ್ಪ ಅವರ ವೈಚಾರಿಕತೆಯನ್ನಪ್ಪಿಕೊಳ್ಳುತ್ತಿರುವ 'ಭವ'ದ ಮಟ್ಟಿಗಂತೂ ಗುರುತಿಸಲು ಕಷ್ಟವೇನಲ್ಲ. ಭೈರಪ್ಪ-ಅನಂತಮೂರ್ತಿ ಇಬ್ಬರೂ ಮಹಿಳೆಯರ, ದಲಿತರ ವಿಷಯದಲ್ಲಿ ಸಾಂಪ್ರದಾಯಿಕ ಹಾಗೂ ಯಥಾಸ್ಥಿತಿವಾದಿ ದೃಷ್ಟಿಕೋನ ಹೊಂದಿರುವುದನ್ನು ಗಮನಿಸಬೇಕು.

ಕೇಂದ್ರ ಪಾತ್ರವಾಗಿರುವ ದಿನಕರನ ಪ್ರಜ್ಞೆಯಿಂದ ಸಮಸ್ಯೆಗಳನ್ನು ಶೋಧಿಸ ಹೋಗುವುದರಲ್ಲಿನ ಏಕಮುಖವಾದ ದೃಷ್ಟಿಕೋನ ಲೇಖಕನ ಪೂರ್ವಾಗ್ರಹದ ಪ್ರತೀಕವೆನ್ನಬೇಕಾಗುತ್ತದೆ. ಉದಾಹರಣೆಗೆ ಗಂಗೂವಿನೊಂದಿಗಿನ ತನ್ನ ಸಂಬಂಧದ ವಿಷಯದಲ್ಲಿ ತನ್ನಮ್ಮ ತಳೆಯುವ ಮನೋಭಾವನೆಯನ್ನು ಕುರಿತು ನಾರಾಯಣ ದಿನಕರನಿಗೆ ಪ್ರಸ್ತಾಪಿಸುವ ಭಾಗದಲ್ಲಿ 'ನನ್ನ ಅಮ್ಮನಿಗೆ ಮಾತ್ರ ಇನ್ನೊಂದು ಜನ್ಮವೆತ್ತುವ ಅಗತ್ಯ ಬೀಳದು ಎನ್ನಿಸುತ್ತೆ ನನಗೆ. ಅವರು ಈ ಭವದಲ್ಲಿದ್ದೂ ಈ ಭವದಿಂದ ಮುಕ್ತರು' (ಪು. ೭೧) ಎನ್ನುತ್ತಾನೆ. ತನ್ನ ಹೆಣ್ಬಡುಕತನವನ್ನು ಸಹಿಸುವ ತಾಯಿ ಮುಕ್ತರೆಂದು ಅವನಿಗನಿಸುತ್ತದೆ : ಅವಳು ಮುಕ್ತಳೆಂದು ಇವನಿಗೆ ಅನಿಸುವುದರಿಂದ, ಪ್ರಸಾದನಿಗನಿಸುವಂತೆ ಅವಳಿಗೆ 'ತಾನು ಯಾರು ?' ಎಂದು–ಇತರರಿಗಾಗಲಿ, ತನಗೇ ಆಗಲಿ ಪ್ರಶ್ನೆ ಹಾಕುವ ಗರಜು ಬರಲಾರದೆನಿಸುತ್ತದೆ ! ಎಲ್ಲ ಹೆಂಗಸರೂ ಗಂಡಸರೂ ಹೀಗೆ 'ಮುಕ್ತ'ರಾದರೆ ನಾರಾಯಣ–ದಿನಕರ–ಶಾಸ್ತ್ರಿಗಳಂತೆ ಭವಸಾಗರದಲ್ಲಿ ಈಸುವವರ ಸಂಖ್ಯೆಯೂ ಹೆಚ್ಚಲಡ್ಡಿಯಿಲ್ಲ ! 'ಸೀತಮ್ಮನ ಹಾಗೆ ಭವಮುಕ್ತಳಾಗುವುದೆಂದರೆ ರಾಮಕೃಷ್ಣ ಪರಮಹಂಸರಂತೆ ಕಾಳಿಯೆದುರು ನೈವೇದ್ಯವಿಟ್ಟು ಕಪ್ಪುಬೆಕ್ಕು ತಿಂದರೂ ಕಾಳಿಯೇ ಸೇವಿಸಿದಳೆಂದು ತಿಳಿಯುವ ಮುಗ್ಧತೆ....' (ಪು. ೭೪). ನಾರಾಯಣನಿಗೆ, ದಿನಕರನಿಗ ಬೆಕ್ಕು ಬೆಕ್ಕೇ ಆಗಿರುತ್ತದೆ—ಇಲಿಯನ್ನು ಕಂಡಿದ್ದರೆ ಅದನ್ನು ಹಿಡಿದು ತಿನ್ನುತ್ತಿದ್ದ ಬೆಕ್ಕು' (ಅಲ್ಲೆ). ಈ ದೃಷ್ಟಾಂತ ಇಲ್ಲಿ ಆತ್ಮವಂಚಕ ನೆಲೆಯದ್ದಾಗಿಬಿಡುವುದು ಹೀಗೆ.

ಕಾದಂಬರಿಯ ಆಶಯ ಪ್ರತಿಗಾಮಿಯದಾಗಿದೆ. ಏಕೆಂದರೆ, ವ್ಯಕ್ತಿಯ 'ಆಗುವ' ಕ್ರಿಯೆಯ ಉಲ್ಲೇಖವಿದ್ದರೂ ಅದು ಕಾದಂಬರಿಯ ಕೇಂದ್ರಾಶಯವಾಗಿಲ್ಲ. 'ಆಗದಿರುವ', 'ಆಗದೆ' 'ಇರು'ವುದರಲ್ಲೇ ಕೃತಕೃತ್ಯರಾಗುವ ಪಾತ್ರಗಳ ಭವವಾಸನೆಯೇ ಓದುಗನನ್ನು ಮುಟ್ಟಿಹಾಕುವಂತಿದೆ. ಎರಡನೆಯದಾಗಿ, ಅನಂತಮೂರ್ತಿ ಉದ್ದಕ್ಕೂ ಹೇಳುತ್ತ ಬಂದಿರುವ, ನಮ್ಮ ಸಂಸ್ಕೃತಿಯ 'ಒಳವಿಮರ್ಶೆ'ಯ ಗುಣ ಈ ಕಾದಂಬರಿಯಲ್ಲಿ ಗೈರುಹಾಜರಿಯಾಗಿದೆ. ಜ್ಞಾನಪೀಠ ಪ್ರಶಸ್ತಿ ಪಡೆದ ಬೆನ್ನಿನಲ್ಲಿ ದೆಹಲಿ ದೂರದರ್ಶನದಲ್ಲಿ ಪ್ರಸನ್ನರೊಂದಿಗೆ ನಡೆಸಿದ ಮಾತುಕತೆಯಲ್ಲಿ[4] 'ಬಸವ, ಕಬೀರ, ಗಾಂಧಿ ಮುಂತಾದವರು ಒಳವಿಮರ್ಶಕರಾಗಿದ್ದರು. ನೀವು ಒಳವಿಮರ್ಶಕರಾಗಿದ್ದಲ್ಲಿ ಆಚರಿಸುವ ಮನೋಭಾವವಿರಲಾರದು' ಎಂದ ಅನಂತಮೂರ್ತಿ

---

4 ದೂರದರ್ಶನ–೧ರಲ್ಲಿ ದಿ. ೧೧-೧೨-೯೪ ರಾತ್ರಿ ೮-೦೦ ಗಂಟೆಗೆ ಸರಿಯಾಗಿ ಪ್ರಸಾರವಾದುದು.

ಇವರೇ ? ಭಾರತೀಯವೆನಿಸುವ ಪರಂಪರೆಯಲ್ಲಿ ಹೆಣ್ಣನ್ನು ಕಾಮದ ಸರಕಾಗಿ, ಯೋನಿಯಾಗಿ ಮಾತ್ರ ಕಲ್ಪಿಸಲಾಗಿದೆಯೋ ? ಅನಂತಮೂರ್ತಿ ತಿಳಿದ 'ಸಂಸ್ಕೃತಿ'ಯಲ್ಲಿ ಹಾಗಿದ್ದಿರಬೇಕು. ಇಲ್ಲವೇ ಹಾಗಿರತಕ್ಕುದೆಂದು ಅವರು ಅಪ್ಪಣೆ ಕೊಡಿಸುತ್ತಿದ್ದಾರೆಯೇ? ದಿನಕರನ ಪ್ರಜ್ಞೆಯ ಬದಲು ಮಹಾಮಾತೆ ಬೇಡ, ಗಂಗೂ ಇಲ್ಲವೇ ಸೀತಮ್ಮಳ ಪ್ರಜ್ಞೆಯಿಂದ ಕಾದಂಬರಿಯನ್ನು ನಿರೂಪಿಸಿರುತ್ತಿದ್ದಲ್ಲಿ ಅದರ ರೂಪ ಹೀಗೆಯೇ ಇರುತ್ತಿತ್ತೇ ?[5]

●

ಅನಂತಮೂರ್ತಿ ಕೆಲವು ಘಟ್ಟಗಳಲ್ಲಿ ತನ್ನ ವಿಡಂಬನಾ ಸಾಮರ್ಥ್ಯವನ್ನು, ವಿಷಮಭಾವಗಳ ವಿರುದ್ಧೈಕ್ಯವನ್ನು ಪ್ರಬುದ್ಧವಾಗಿ ಚಿತ್ರೀಕರಿಸ ಹೊರಟಿದ್ದಾರೆ, ನಿಜ. ಆದರೆ, ತಾನು ಹೇಳಲಿರುವುನೇನು ಎಂಬುದಕ್ಕಿಂತ ಹೇಗೆ ವಿಶಿಷ್ಟವಾಗಿ, ಸಂದಿಗ್ಧವಾಗಿ ಹೇಳಬೇಕೆಂಬ ಬಗೆಗೆ 'ತಪಸ್ಸು'ಗೈಯ್ಯುವ ನವ್ಯ ಶೈಲಿಯು ತಾಜಾ ಮಾದರಿಯ ಕೆಟ್ಟ ನಿದರ್ಶನಗಳು ಇಲ್ಲಿವೆ. ಅನಂತಮೂರ್ತಿ ಸರಳವಾಗಿ ಸಹಜವಾಗಿ ಕೂಡ ಬರೆಯಬಲ್ಲರೆಂಬುದಕ್ಕೆ ಈ ಕಾದಂಬರಿಯೊಳಗೂ ದೃಷ್ಟಾಂತ ಕೊಡಬಹು ದಾದರೂ, ನವ್ಯದ ಕೆಟ್ಟ ಪೋಜು, ಕೃತಕ ಶೈಲಿ ಹೇಗೆ ಕಿರಿಕಿರಿಗೆ ಕಾರಣವಾಗುತ್ತದೆ, ನೋಡಿ : ೧. 'ತಟ್ಟೆಯಲ್ಲಿ ಹಾಕಿಕೊಟ್ಟ ಕುಟ್ಟವಲಕ್ಕಿಯನ್ನು ಮೊಸರನ್ನು ಸ್ವಾಮಿಯ ರೂಪದಲ್ಲಿದ್ದವ ಬಹಳ ದಿನ ಹಸಿದಿದ್ದವನಂತೆ ತಿನ್ನುವುದನ್ನು ತನಗೆ ಅರ್ಥವಾಗದ ವೇದನೆಯಿಂದ ನೋಡುತ್ತ ಕೂತಿದ್ದೆ ಎಂಬುದು ಶಾಸ್ತ್ರಿಗಳಿಗೆ ತನ್ನ ದೌರ್ಬಲ್ಯದಲ್ಲಿ ಆಧಾರವಾಗುವ ನೆನಪು' (ಪು. ೯). ೨. ಶಾಸ್ತ್ರಿಗಳು ಗರಬಡಿದವ ರಂತೆ ಮಂಕಾಗಿ ಬಿಟ್ಟಿದ್ದರು. ಪುರಾಣಪ್ರವಚನದಿಂದ ತನಗೆ ಅಭ್ಯಾಸವಾದ ಅನ್ಯ

---

5 ಜಿ. ಎಸ್. ಆಮೂರರು ಗುರುತಿಸುವಂತೆ ಅನಂತಮೂರ್ತಿ ಅಸಾಮಾನ್ಯ ವ್ಯಕ್ತಿಗಳನ್ನೆ ತನ್ನ ಕಾದಂಬರಿಗಳ ನಾಯಕರನ್ನಾಗಿ ಆರಿಸುತ್ತಾರೆ ಮತ್ತು ಹಾಗೆ ಆರಿಸುವುದು ಉದ್ದೇಶಪೂರ್ವಕ. ಜಗನ್ನಾಥರಿಗಿಂತ ಹೆಚ್ಚು ವಾಸ್ತವತೆಗೆ ಮುಖಹಾಕಿದ ಕೃಷ್ಣಪ್ಪನಿಗೆ Mystic ಮತ್ತು Heroic ಆದರ್ಶಗಳೇ ಪ್ರಿಯವಾಗುತ್ತವೆ. (ನೋಡಿ : ಅರ್ಥ ಲೋಕ, ೧೯೮೮, ಪು. ೯೫). ಭವದಲ್ಲೂ ದಿನಕರ ಅಸಾಮಾನ್ಯನೇ. ಅಸಾಮಾನ್ಯ ವ್ಯಕ್ತಿಗಳನ್ನು ನಾಯಕನ್ನು ಆಯ್ದುಕೊಳ್ಳುವುದೂ ಲೇಖಕನ ರಾಜಕೀಯ ಧೋರಣೆಯೇ ಆಗಿದೆ. ದಿನಕರನ ಪ್ರಜ್ಞೆಯ ಕೇಂದ್ರದಲ್ಲಿ ಕಾದಂಬರಿಯ ವಸ್ತು, ಅನುಭವ, ತಾತ್ತ್ವಿಕತೆ ಸಾಕಾರಗೊಳ್ಳುವ ಸ್ವರೂಪದಲ್ಲಿ ಈ ಕಾದಂಬರಿಯ ವೈಫಲ್ಯ ಖಚಿತ ವಾಗುತ್ತ ಬರುತ್ತದೆ.

ಶ್ರವಣಕ್ಕಾಗಿ ಸೊಗಸುಗೊಂಡ ಭಾಷೆಯೂ, ಪೂರ್ವಜನ್ಮದಂತೆ ನೆನಪಾಗುವ ತನ್ನ ಬೊಂಬಾಯಿ ವ್ಯಸನದ ಭಂಡು ಭಾಷೆಯೂ ತನಗೇ ಅವರು ಭಯಪಡುತ್ತ ಅಂದುಕೊಳ್ಳುತ್ತಿದ್ದುದನ್ನು ಹೇಳಲಾರದಾಗಿ ಬಿಟ್ಟಿತ್ತು (ಪು. ೧೩)

ಕನ್ನಡದ ಜಾಯಮಾನದ್ದಲ್ಲದ, ಇಂಗ್ಲಿಷಿನ ಚಿಂತನಾಪರಿಕ್ರಮವನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಪರಿಹಾಸ್ಯವಾಗಿರುವ ಈ ಬಗೆಯ ಬರೆಹದ ಸ್ವರೂಪವನ್ನು ಬಿಡಿಯಾಗಿ ಚರ್ಚಿಸದೆ, ಅನಂತಮೂರ್ತಿ ಅವರು ಪ್ರತಿನಿಧಿಸುತ್ತಿರುವ ವಿಚಾರ ಪ್ರಣಾಲಿಯ ಔಚಿತ್ಯವನ್ನು ವಿಮರ್ಶಿಸಲು ಪೂರ್ವಸಾಮಗ್ರಿಯನ್ನಾಗಿ ಬಳಸಿಕೊಳ್ಳುವುದು ಅಗತ್ಯ.

●

ಒಂದು ಸಣ್ಣ ಕತೆಯ ಕ್ಯಾನ್ವಾಸ್ ಉಳ್ಳ 'ಭವ'ದಂಥ ಸಾಮಾನ್ಯ ಕಾದಂಬರಿಯ ಬಗೆಗೆ ಡಿ. ಆರ್. ನಾಗರಾಜ್ ಬರೆದಿರುವ ಭಾರೀ ಮಾತುಗಳು (ಗ್ರಂಥದ ಬೆನ್ನುಡಿಯಲ್ಲಿ) ಈ ಕಾದಂಬರಿ ಬಿತ್ತುತ್ತಿರುವ ಅನಿಷ್ಟ ವಿಚಾರಗಳನ್ನು ಸಾಂಸ್ಥೀಕರಿಸಲು ಹೊರಟಿರುವ ಸಾಹಿತ್ಯಿಕ ಸಾಮ್ರಾಜ್ಯಶಾಹಿಯ ದುಷ್ಟವ್ಯೂಹದ ಏಜೆಂಟನೆನ್ನಬೇಕಾಗುತ್ತದೆ. ನಮ್ಮ 'ವೈಚಾರಿಕ ವಿಸ್ಮೃತಿಯನ್ನು ದಾಟಲು ಹೊರಟಿರುವ' 'ಅಕ್ಷರ ಚಿಂತನ'ದ ಈ ಪ್ರವಾದಿಗೆ ಸ್ಮೃತಿ–ಸ್ತುತಿಗಳ ನಡುವೆ ಅಂತರವೇ ತಿಳಿಯದಂತಾಗಿದೆ. ಈ ಕಾದಂಬರಿಯಲ್ಲಿ ಮೂರು ತಲೆಮಾರಿನ ವ್ಯಕ್ತಿಗಳ ಅನುರಕ್ತಿ–ವಿರಕ್ತಿ ಬೆಳೆಯುವ ಸಂಗಮಸ್ಥಾನವನ್ನು ಶೋಧಿಸಲಾಗಿದೆಯೆಂದೂ, ಸಂಸಾರ–ನಿರ್ವಾಣಗಳ ನಡುವೆ ವ್ಯತ್ಯಾಸವೇ ಇಲ್ಲವೆಂಬ ಘನವಾದ ಬೌದ್ಧ ದಾರ್ಶನಿಕ ಸತ್ಯವನ್ನು ತೀರಾ ಆಕರ್ಷಕವಾಗಿ ಲೌಕಿಕ ರೀತಿಯಲ್ಲೇ ಕಾದಂಬರಿ ಮಂಡಿಸುತ್ತದೆ ಎಂದೂ ನಾಗರಾಜ್ ಅಪ್ಪಣೆ ಕೊಡಿಸಿದ್ದಾರೆ. ಅವರ ಈ ಮಾತುಗಳನ್ನು ಓಮಗನ ಅನುಭವ ಗುಡಿಸಿಹಾಕಿಬಿಡುತ್ತದೆ ಎನ್ನುವಲ್ಲಿ ಎರಡು ಮಾತಿರಲಾರದು. ○

ಮೊದಲ ನೋಟ

ನಾಕುಸಾಲು (ಪ್ರೇಮ ಕವಿತೆಗಳು)
ಲೇ : ಆಶಾ ಕಡಪಟ್ಟಿ

'ನಾಕುಸಾಲು' ಆಶಾ ಕಡಪಟ್ಟಿಯವರ ಎರಡನೆ ಕವನ ಸಂಕಲನ. ಈ ಸಂಕಲನದಲ್ಲಿ ಕಾಮ-ಪ್ರೇಮ-ಪ್ರಿಯಕರ ಈ ವಿಷಯಗಳನ್ನು ಕೇಂದ್ರವಾಗುಳ್ಳ ಒಂದುನೂರಾ ಅರವತ್ತು ಹನಿಗವಿತೆಗಳಿವೆ-ಎಲ್ಲವೂ ನಾಲ್ಕು ಸಾಲಿನ ಹನಿಗಳು. ಇಲ್ಲಿನ ಬಹುತೇಕ ಕವಿತೆಗಳು ಹಳೆಯ ಕವಿಸಮಯಗಳ ಅನುಕರಣೆಗಳು. ಆಶಾ ಕಡಪಟ್ಟಿಯವರು ಸ್ವಲ್ಪ ಸಂಯಮದಿಂದ ಹೊರಟರೆ ನಿಜವಾದ ಕಾವ್ಯವನ್ನು ಸೃಷ್ಟಿಸಬಲ್ಲರೆಂಬುದಕ್ಕೆ ಈ ಸಂಕಲನದಲ್ಲಿನ ಈ ನಾಲ್ಕು ಸಾಲುಗಳು ಸಾಕ್ಷ್ಯ ನುಡಿಯುತ್ತವೆ.

ಮುಸ್ಸಂಜೆಯಲಿ ಮುಗುಳ
ನಕ್ಕ ಮೊಗ್ಗೆ
ಬೆಳಗಿನ ಜಾವದಲಿ
ಪಳಪಳ ನಕ್ಕಿತು

ಈ ಮುಸ್ಸಂಜೆ-ಬೆಳಗುಗಳ ನಡುವಿನ ಕಾಲದಲ್ಲಿ ನಡೆಯುವ ಬೆಳವಣಿಗೆ-ಅಂಥ ಬೆಳವಣಿಗೆ ಮನುಷ್ಯ ಮತ್ತು ಸಸ್ಯ ಸಂಕುಲಗಳಲ್ಲಿ-ಅಂದರೆ ಒಟ್ಟು ಜೀವ ಸಂಕುಲದಲ್ಲಿ ಘಟಿಸುವಂತಹದ್ದು ಮತ್ತು ಇದು ಒಟ್ಟು ಸೃಷ್ಟಿಯ ಮುಂದುವರಿಯುವಿಕೆಯ ಸಾರ್ಥಕತೆಯನ್ನು ಕಾಣುವಂತಹದ್ದು ಎನ್ನುವ ಒಳನೋಟವನ್ನು ಈ ನಾಲ್ಕು ಸಾಲುಗಳು ಹೇಳಬಲ್ಲವು. ಆದರೆ ಇಡೀ ಸಂಕಲನ ಸೋಸಿದಾಗ ಕೇವಲ ಈ ನಾಲ್ಕು ಸಾಲುಗಳು ಮಾತ್ರ ನನಗೆ ಸಿಕ್ಕವುಗಳು !

ನಮ್ಮ ಕೂಗು (ಕವಿತೆಗಳು)
ಲೇ : ಶಂಕರ ಮುತ್ತಣ್ಣವರ

ಶಂಕರ ಮುತ್ತಣ್ಣವರ ಇವರ ಮೊದಲ ಕವನ ಸಂಕಲನ 'ನಮ್ಮ ಕೂಗು'ದಲ್ಲಿ ನಲವತ್ತು ಕವಿತೆಗಳು ಮತ್ತು ಹದಿನೆಂಟು ಹನಿಗವನಗಳು ಸೇರಿಕೊಂಡಿವೆ. ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೂ ಯೋಗ್ಯ ಸಾಹಿತ್ಯಕ ಪರಿಸರವನ್ನು ಹೊಂದಿರುವ ಸೂಚನೆಗಳನ್ನು ಇಲ್ಲಿನ ಕೆಲವು ಕವಿತೆಗಳು ತೋರುತ್ತವೆ. ತಿಳುವಳಿಕೆ ನೀಡುವ ಮುನ್ನುಡಿಕಾರರು, ಬುದ್ಧಿ ಹೇಳುವ ಬ್ಲರ್ಬ್ ಬರೆದ ಪೋಲೀಸ್ ಪಾಟೀಲರಂಥವರು ಇವರ ಕಾವ್ಯಕ್ರಿಯೆಗೆ ತಕ್ಕ ಹಾದಿ ತೋರಿಸಬಲ್ಲವರಾಗಿದ್ದಾರೆ.

ಆಶೀರ್ವಚನ ನೀಡುವ ಧಾರವಾಡದ ಯೂನಿವರ್ಸಿಟಿಯ ಮುನ್ನುಡಿಕಾರರಿಗಿಂತ ಇಲ್ಲಿನ ಮುನ್ನುಡಿ ಹೇಗೆ ಭಿನ್ನವಾಗಿದೆ ಎನ್ನುವುದನ್ನು ಗಮನಿಸಬಹುದು.

ಇನ್ನು ಸಂಕಲನದಲ್ಲಿನ ಕೆಲವು ಪದ್ಯಗಳಲ್ಲಿ ಕಾವ್ಯದ ಸೆಳಕುಗಳು ಕಾಣಿಸಿಕೊಳ್ಳುತ್ತವೆ. ಆದರೆ ಈ ಸೆಳಕುಗಳನ್ನು ಗಟ್ಟಿಯಾಗಿ ಪ್ರತಿಷ್ಠಾಪಿಸಿಕೊಳ್ಳುವ ದೇಹವನ್ನು ಇಲ್ಲಿನ ಕವಿತೆಗಳು ಪಡೆಯದೇ ಹೋಗುತ್ತವೆ. ಇದಲ್ಲದೇ ಬಹುತೇಕ ಕವಿತೆಗಳು ಹಳೆಯ ಕವಿಸಮಯದ ಬೆನ್ನು ಹತ್ತಿ ಹೊರಡುತ್ತವೆ. (ಜೀವನ ಡೊಂಬರಾಟ, ಬಾಳೆಂಬ ತೇರ, ಸೂತ್ರಧಾರ, ಜೀವನ ನಾಟಕ, ಬದುಕಿನ ನಂಟು, ಹೋಗೋಣ ಬಾ ಗೆಳತಿ ಈ ರೇಖೆ ದಾಟಿ .. ಹೀಗೆ ಇತ್ಯಾದಿ) ಕವಿಯ ವಿಶಿಷ್ಟ ಅನುಭವ ಕಾವ್ಯವಾಗುವ ಕ್ರಿಯೆಯಲ್ಲಿ ಹೊರಗನ್ನು ಒಳಗೊಳ್ಳಬೇಕು. ಆದರೆ 'ನಮ್ಮ ಕೂಗು' ಸಂಕಲನದ ಕವಿ ತನ್ನ ಹೊರಗಿನದಕ್ಕೆ ಮಾಧ್ಯಮವಾಗ ಹೊರಡುತ್ತಾನೆ. ಹೊರಗಿನದಕ್ಕೆ ಸ್ವಯಂ ಪ್ರಚೋದಿತ ಭಾವನೆಯ ದರ್ಪಣವೊಂದನ್ನು ನಿರ್ಮಿಸಿ ಪ್ರತಿಫಲಿಸುವ ಕೆಲಸವನ್ನು ಮಾತ್ರ ಕೈಗೊಳ್ಳುತ್ತಾನೆ ಇಲ್ಲಿಯ ಕವಿ. ಇದಕ್ಕೆ ಭಿನ್ನವಾಗಿ ಹನಿಗವನಗಳಲ್ಲಿ ಸ್ವಲ್ಪ ಹೆಚ್ಚಿನ ತೊಡಗುವಿಕೆಯನ್ನು ಕಾಣಬಹುದಾಗಿದೆ.

ಕ್ಷಮಿಸಿ, ಈ ಚಿತ್ರಕ್ಕೆ ಹೆಸರಿಲ್ಲ (ಕವಿತೆಗಳು)
ಲೇ : ಶ್ರೀನಿವಾಸ ಜೋಕಟ್ಟೆ

'ಕ್ಷಮಿಸಿ. ಈ ಚಿತ್ರಕ್ಕೆ ಹೆಸರಿಲ್ಲ' ಎನ್ನುವ ಕವಿ ಶ್ರೀನಿವಾಸ ಜೋಕಟ್ಟೆಯವರು ಪ್ರತಿಯೊಂದು ಚಿತ್ರಕ್ಕೂ ಖಂಡಿತವಾಗಿ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಅವರ ಮನಸ್ಸಿನಲ್ಲಿರುವ ಈ ಹೆಸರುಗಳನ್ನು ಗ್ರಹಿಸಲು ಸಾಧ್ಯವಾದಾಗಲೆಲ್ಲ ಅವರ ಕವಿತೆಗಳು ಇಷ್ಟಗಲ ಬಾಯ್ದೆರೆದು ನಕ್ಕು ಕೈ ಕುಲುಕುತ್ತವೆ. ಈ ಹೆಸರುಗಳು ಕವಿತೆಯ ಈ ತುದಿಯಿಂದ ಆ ತುದಿಯವರೆಗೆ ನಡೆಯುವ ಜೋಕಟ್ಟೆಯವರ 'ಲಾಜಿಕ್ಕೇ' ಆಗಿವೆ. ಅತ್ಯಂತ ಪ್ರಖರವಾಗಿ ತೋರುವ ಇಲ್ಲಿನ ಕವನಗಳ ಸಾಲುಗಳು ಈ ಲಾಜಿಕ್ಕನ್ನು ಕಟ್ಟಲು ದುಡಿಯುವದ ಕಂಡು ಒಂದು ತರದ ನಿರಾಸೆ ಕವಿಯುತ್ತದೆ. ಜೋಕಟ್ಟೆಯವರ ಲಾಜಿಕ್ಕು ಮೂಲಭೂತವಾಗಿ ಗದ್ಯದ ಲಾಜಿಕ್ಕು. ಆದರೆ ಅವರ ಕವಿತೆಯ ಸಾಲುಗಳಾದರೋ ಕಾವ್ಯದಲ್ಲಿಯೇ ಮಿಂದು ಬಂದವುಗಳು. ಇಂಥ ಸಾಲುಗಳು ಗದ್ಯದ ಲಾಜಿಕ್ಕಿಗೆ ಬದ್ಧವಾಗಿಲು ಪ್ರತಿರೋಧ ಒಡ್ಡುತ್ತವೆ. ಈ ಕರ್ಷಣೆ ಕವಿಯ ವ್ಯಕ್ತಿತ್ವಕ್ಕೆ ಗೋಚರವಾಗಿುತ್ತದೆ. ತನ್ನ ಲಾಜಿಕ್ಕಿನ ಮಿತಿಗೆ ಒಗ್ಗದ ಸಾಲುಗಳು ಅವನಲ್ಲಿ ಗೊಂದಲ ಹುಟ್ಟಿಸಿ, ಕವಿತೆಯ ಚೌಕಟ್ಟಿನ ಬಗ್ಗೆ ಸಂದೇಹ ಮೂಡಿ, ಅವನು, 'ಕ್ಷಮಿಸಿ, ಈ ಚಿತ್ರಕ್ಕೆ ಹೆಸರಿಲ್ಲ' ಎನ್ನುವ ಕನ್‌ಫೆಶನ್ ನಿಲುವಿನಲ್ಲಿ

ನಿಲ್ಲುವಂತಾಗುತ್ತದೆ. ಆದರೆ ಈ ಗದ್ಯದ ಲಾಜಿಕ್ಕನ್ನು ಇಟ್ಟುಕೊಂಡು ಹೊರಡುವ ಕವಿತೆ ಯಶಸ್ವಿಯಾಗಿಲಾರದೇ ಎಂದರೆ ಸಾಧ್ಯವಿದೆ. ಕೆ. ಎಸ್. ನ.ರವರ ನವ್ಯ ಮಾದರಿಯ ಕವಿತೆಗಳು ಹೀಗೆ ಗದ್ಯದ ಲಾಜಿಕ್ಕಿಗೆ ಬದ್ಧವಾದವುಗಳೇ. ಶ್ರೀನಿವಾಸ ಜೋಕಟ್ಟೆಯವರ ಬಹುತೇಕ ಕವಿತೆಗಳು ಕೆ. ಎಸ್. ನ. ರೀತಿಯ ಪ್ರಯತ್ನಗಳೇ ಆಗಿವೆ. ಆದರೆ ಈ ರೀತಿಯ ಕವಿತೆಗಳು ಜೀವನದ ಅಂಗಳದಲ್ಲಿ ಹುಟ್ಟಿ ಬರುವ ಆಧ್ಯಾತ್ಮದ ಪರಿಕರಗಳನ್ನು ಬಳಸಿ ಕಟ್ಟಿಕೊಳ್ಳುವಲ್ಲಿ ಹೆಚ್ಚಿನ ಯಶಸ್ಸನ್ನು ಸಾಧಿಸುತ್ತವೆ. ಸಂಕಲನದ 'ವಿ. ವಿ. ಕವಿತೆ' ಈ ದೃಷ್ಟಿಯಿಂದ ಹೆಚ್ಚು ಯಶಸ್ವಿಯಾದ ಕವಿತೆ ಅನ್ನಿಸುತ್ತದೆ. ಕವಿಯ ಲಾಜಿಕ್ಕನ್ನು ನಿರ್ಲಕ್ಷಿಸಿ ಕ್ಯಾಂಪಸ್ಸಿನ ಸುತ್ತಲಿನ ಗಿಡಗಳು ಬೆಳೆದು ನಿಲ್ಲುತ್ತ ಇಂಥ ಲಾಜಿಕ್ಕಿನ ಗಾಳದಲ್ಲಿ ಒದ್ದಾಡುತ್ತಿರುವ ನಮ್ಮಂಥವರನ್ನೆಲ್ಲ ಅಣಕಿಸುತ್ತವೆ. ಉಳಿದಂತೆ ಸುಲಭವಾಗಿ ಕೈ ಕಲುಕುತ್ತ ನಿಲ್ಲುವ ಕವಿತೆಗಳೆಂದರೆ– ನಗು, ಸಾಕ್ಷಿ. ಅಮ್ಮನ ನಿರೀಕ್ಷೆ, ಹುಡುಗಿಯರು v/s ಪುಸ್ತಕಗಳು....ಮುಂತಾದವುಗಳು. ಅಂತೂ ಜೋಕಟ್ಟೆಯವರು ತಮ್ಮ ಈ ಸಂಕಲನದ ಮೂಲಕ ಗಂಭೀರ ಓದಿಗೆ ಆಹ್ವಾನ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಸಮುದ್ರ ಮತ್ತು ಇತರ ಕವಿತೆಗಳು

ಲೇ : ವರವರರಾವ್ (ತೆಲುಗು ಮೂಲ) ಅನು : ಬಂಜಗೆರೆ ಜಯಪ್ರಕಾಶ್

ಪೆಂಡ್ಯಾಲ ವರವರರಾವ್ ಅವರದು ತೆಲುಗು ಎಡಪಂಥೀಯ ಬದ್ಧ ಕವಿಗಳಲ್ಲಿ ದೊಡ್ಡ ಹೆಸರು. 'ವಿಪ್ಲವ ರಚಯಿತಲು ಸಂಘಂ' (ವಿರಸಂ) ಸಂಘಟನೆಯನ್ನು ಕಟ್ಟುವಲ್ಲಿ, ಅದಕ್ಕೊಂದು ಸೃಜನಶೀಲವಾದ ತಾತ್ವಿಕ ನೆಲೆಗಟ್ಟನ್ನು ನಿರ್ಮಿಸುವಲ್ಲಿ ವರವರರಾವ್ ಅವರು ಮಹತ್ವದ ಕಾಣಿಕೆಯನ್ನು ನೀಡಿದವರು. ವರವರರಾವ್ ಅವರು ಪ್ರಕಟಿಸಿದ ಏಳು ಕವಿತಾ ಸಂಕಲನಗಳಿಂದ ಇಪ್ಪತ್ತೈದು ಕವಿತೆಗಳನ್ನು ಆಯ್ದುಕೊಂಡು, ಕನ್ನಡದ ಕವಿ ಬಂಜಗೆರೆ ಜಯಪ್ರಕಾಶ್ ಅವರು, ಅವುಗಳನ್ನು ಕನ್ನಡಕ್ಕೆ ಅನುವಾದಿಸಿ ಸಂಕಲಿಸಿ ಕೊಟ್ಟಿದ್ದಾರೆ. ವರವರರಾವ್ ಅವರ ಕವಿತೆಗಳು ಆಂಧ್ರಪ್ರದೇಶದ ರಾಜಕೀಯ–ಸಾಮಾಜಿಕ–ಸಾಂಸ್ಕೃತಿಕ ಘಟನೆಗಳಿಗೆ ಅತ್ಯಂತ ನಿಷ್ಠವಾದ ಬದ್ಧತೆಯನ್ನು ತೋರುತ್ತವೆಯಾದ್ದರಿಂದ ಅವುಗಳ ರಸಸ್ಪಂದನೆಗೆ ಹಿನ್ನೆಲೆಯ ಪರಿಚಯದ ಅಗತ್ಯ ಉಂಟಾಗುತ್ತದೆ. ಇಂಥ ಉಗ್ರ ಸಾಂದರ್ಭಿಕತೆಯ ಪದ್ಯಗಳನ್ನು ಜಯಪ್ರಕಾಶ್ ಅನುವಾದಕ್ಕಾಗಿ ಆಯ್ದುಕೊಂಡಿಲ್ಲದಿರುವುದನ್ನು ಹೇಳುತ್ತಾರೆ. ಆಯ್ದುಕೊಂಡ ಬಹುತೇಕ ಕವಿತೆಗಳ ಸಂದರ್ಭಗಳನ್ನು ಸಂಕ್ಷಿಪ್ತವಾಗಿ ಹೇಳುತ್ತಾರೆ. ಇದಲ್ಲದೆ ಕವಿ ವರವರರಾವ್ ಅವರ ಹೋರಾಟ ಪೂರ್ಣವಾದ

ಸೃಜನಶೀಲ ವ್ಯಕ್ತಿತ್ವದ ಪರಿಚಯವನ್ನು ಜಯಪ್ರಕಾಶ್ ನೀಡಿದ್ದಾರೆ. ವರವರರಾವ್ 'ಶರೀರದಲ್ಲಿ ಪ್ರತಿಕಣವೂ ಗೇಯವಾಗಿ ಎದೆಯ ಗಾಯಗಳನ್ನು ಹಾಡಿತಾದ್ದರಿಂದ' (ಬಾಧೆಗೆ ಪರ್ಯಾಯ ಪದ), 'ಈ ಗೇಯಗಳ ಬರೆಯುತ್ತಿರುವೆ ಸರ್ವಾಧಿಕಾರಿ ನಾಳೆ ಕೊರಳು ಬಿಚ್ಚಿ ಮುಕ್ತವಾಗಿ ಹಾಡುವೆ' (ಈಗ ಸಂಕೋಲೆಗಳು ಬರೆಯುತ್ತವೆ) ಎಂದು ತಮ್ಮ ರಚನೆಗಳನ್ನು ಗೇಯಗಳೆಂದು ಹೇಳಿಕೊಂಡಿದ್ದಾರೆ. ಆದರೆ ಕನ್ನಡದಲ್ಲಿ ಮೂಡಿರುವ ರೂಪಗಳು ಅಷ್ಟು ಗೇಯವಾಗಿ ತೋರುವುದಿಲ್ಲ. ಕನ್ನಡಕ್ಕೆ ತುಂಬ ಹತ್ತಿರದ ಭಾಷೆಯಾದ ತೆಲುಗಿನ ಭಾಷಾಲಯಗಳನ್ನು ಕನ್ನಡಕ್ಕೆ ತರುವಲ್ಲಿ ಅಂಥ ಹೆಚ್ಚಿನ ಉದ್ವಸ್ಥತೆ ಉಂಟಾಗಲಾರದೆನ್ನಿಸುತ್ತದೆ. ಜಯಪ್ರಕಾಶರು ವರವರರಾವ್ ಅವರ (ಒಂದೆರಡು) ಕವಿತೆಗಳ ಕನ್ನಡ ಟ್ರಾನ್ಸ್‌ಕ್ರಿಪ್ಶನ್ ಕೊಟ್ಟಿದ್ದರೆ ಇನ್ನೂ ಹೆಚ್ಚಿನ ಪ್ರಯೋಜನವಾಗುತ್ತಿತ್ತು ಎನಿಸುತ್ತದೆ. ಆಗ ವರವರರಾವ್ ಅವರ ಕವಿತೆಗಳು ತಮ್ಮ ಲಯದ ಬಾಗು ಬಳಕುಗಳೊಂದಿಗೇ ಇನ್ನೂ ಸಮರ್ಥವಾಗಿ ನಮ್ಮನ್ನು ಎದುರುಗೊಳ್ಳಲು ಸಾಧ್ಯವಾಗುತ್ತಿತ್ತು. ವರವರರಾವ್ ಅವರು ತಮ್ಮ ಕವಿತೆಗಳನ್ನು ಬದ್ಧತೆಯ ಪ್ರಚಾರಶೀಲತೆಯಿಂದ ರಕ್ಷಿಸಿಕೊಂಡು ಶುದ್ಧ ಕಾವ್ಯದ ಪರಿಧಿಯಲ್ಲಿ ಅವನ್ನು ನಡೆಸಿಕೊಂಡು ಹೋಗುವುದನ್ನು ಇಲ್ಲಿಯ ಕವಿತೆಗಳು ಸ್ಪಷ್ಟವಾಗಿ ತೋರಿಸುತ್ತವೆ.

ಸತ್ಯಪ್ಪನ ಸಾವಿನ ಸುತ್ತ (ಕವಿತೆಗಳು)
ಲೇ : ಮಲ್ಲಿಕಾರ್ಜುನ ಬನ್ನಿ

ಮಾಜಿ ಶಾಸಕರಾದ ಮಲ್ಲಿಕಾರ್ಜುನ ಬನ್ನಿ ಅವರ ಐದನೆಯ ಕವನ ಸಂಕಲನ 'ಸತ್ಯಪ್ಪನ ಸಾವಿನ ಸುತ್ತ', ಒಂದು ಉದ್ದ ಕವಿತೆ (ಸತ್ಯಪ್ಪನ ಸಾವಿನ ಸುತ್ತ) ಮತ್ತು ಇಪ್ಪತ್ತೊಂದು ಪುಟ್ಟ ಕವಿತೆಗಳ ಮೂವತ್ತು ಮೂರು ಪುಟಗಳ (ಕ್ರೌನ್ ೧/೮) ಚಿಕ್ಕ ಸಂಕಲನ. ಈ ಕವಿತೆಗಳ ಜೊತೆಗೆ, ಕೊನೆಗೆ ಇಪ್ಪತ್ತೈದು ಪುಟಗಳಲ್ಲಿ, ಹಿಂದಿನ ಸಂಕಲನದ ಬಗೆಗೆ ('ನಿರಂತರ') ಬಂದ ಪತ್ರಗಳನ್ನು ಪ್ರಕಟಿಸಲಾಗಿದೆ. ಪತ್ರ ಬರೆದವರ ಲೆಟರ್ ಹೆಡ್‌ಮಾದರಿಯಲ್ಲಿ ಅವರ ಪದವಿ–ಸ್ಥಾನಮಾನ ವಿಳಾಸಗಳನ್ನು ಪ್ರಕಟಿಸಲಾಗಿದೆ. ಈ ವಿಳಾಸಗಳು ಉದಯೋನ್ಮುಖ ಕವಿಗಳಿಗೆ ಪ್ರಯೋಜನಶೀಲವಾಗಬಹುದು ! ಇಲ್ಲಿನ ಒಂದು ಪತ್ರದ ಒಕ್ಕಣೆ ಹೀಗಿದೆ : 'ಕವನಗಳನ್ನು ಬರೆಯುವದು ಸಾಹಿತ್ಯ ಅಥವಾ ಕವಿ ಎಂದು ಹಣೆಪಟ್ಟಿ ಹಾಕಿಕೊಂಡವರದಷ್ಟೇ ಹಕ್ಕು ಅಲ್ಲ ಎಂದು ನೀವು ಸಾಬೀತುಗೊಳಿಸಿದ್ದೀರಿ' (!) ಇರಲಿ–

ಬನ್ನಿಯವರ ಈ ಸಂಕಲನದಲ್ಲಿ ಪ್ರತಿಭಟನೆಯ ಭಾವ ವ್ಯಕ್ತವಾಗುವಲ್ಲಿ ಕಾವ್ಯದ ಸಾಲುಗಳು ವಿಜೃಂಭಿಸಿ ಬರುತ್ತವೆ. ಘೋಷಣೆ ಕೂಗುತ್ತ ನುಗ್ಗುತ್ತವೆ.

ಆವ್ನು ನಾಲಿಗೆಯ ನಂಜು ಹೃದಯಿಗಳ
ನಿರಂತರ ಶೋಷಣೆಯ ಉದ್ಧಾರ ನೀತಿಗೆ
ಸಿದ್ಧ ಭಾಷಣದ ರೀತಿಗೆ, ಮಾತಿಗೆ
ಧಿಕ್ಕಾರ ಧಿಕ್ಕಾರ... ನಿರಂತರ ! (ಧಿಕ್ಕಾರ ! ನಿರಂತರ !)

ಹಾಗೆಯೇ ಗದ್ಯಾತ್ಮಕ ಪ್ರತಿಪಾದನೆಯ ಕೆಲಸಕ್ಕೆ ತೊಡಗಿದಂಥ ಕಾವ್ಯವೂ ಶಾಬ್ದಿಕ ವಿಜೃಂಭಣೆಯನ್ನು ಮರೆಯುತ್ತದೆ (ಉದಾ : ಸತ್ಯಪ್ಪನ ಸಾವಿನ ಸುತ್ತ, ನಮ್ಮೂರ ಹನುಮಪ್ಪ, ಸ್ವೇಚ್ಛಾಚಾರಿ, ಡಂಕೆಲ್–ಕಾರ್ಗಿಲ್–ಗ್ಯಾಟ್, ಇತ್ಯಾದಿ). ಇಂಥ ಗದ್ಯಾತ್ಮಕ ಪ್ರತಿಪಾದನೆ ಮತ್ತು ಪ್ರತಿಭಟನೆಯ ಭಾವಗಳ ಉದ್ದೇಶಗಳು ಇಲ್ಲದಲ್ಲಿ ಕವಿತೆಗಳು ಗೊಂದಲಗೊಂಡು ನಿಲ್ಲುತ್ತವೆ. ಒಂದು ಕವಿತೆ ಹೀಗಿದೆ–

ನರಳುತ್ತ ನಾಶವಾಗುವಾಗ
ಕೊರಳೆತ್ತಿ ಕಾಪಾಡಿ ಎನ್ನುವ
ಅರಳುತ್ತಿರುವ ಪ್ರತಿಭೆಗಳನ್ನು
ಅಳದಂತೆ ಮಾಡದಿರು
ನೀ ಪ್ರತಿಭಾ (ಪ್ರತಿಭಾ)

ಇಲ್ಲಿ 'ಅಳದಂತೆ ಮಾಡದಿರು' ಎನ್ನುವ ದ್ವಿನಿಷೇಧಗಳ ಪ್ರಾರ್ಥನೆಯ ಅರ್ಥವೇನು ? ಐದು ಸಾಲುಗಳ ಈ ಪುಟ್ಟ ಪದ್ಯ ಹುಟ್ಟಿಸುವ ಗೊಂದಲದಿಂದ 'ಇದೆಲ್ಲದರ ಅರ್ಥವೇನು–ಓ ಯಕ್ಷ !' ಎಂದು ಪ್ರಾರ್ಥಿಸುವಂತಾಗುತ್ತದೆ.

ಸಂಪಾದಕರ ಟಿಪ್ಪಣಿಗಳು

ಒಂದೆರಡು ಸಂತೋಷದ ವಿಷಯಗಳಿವೆ.

ಮೊದಲನೆಯದು—ಆರುವರ್ಷಗಳ ವಯಸ್ಸನ್ನು ತಲುಪುತ್ತಿದ್ದಂತೆಯೇ ನಿಮ್ಮ ಈ ಪತ್ರಿಕೆಗೆ ಒಂದು ದೃಢೀಕೃತ ಹೆಸರು ದೊರೆತಿದೆ. ದೆಹಲಿಯ ರಜಿಸ್ಟ್ರಾರ್ ಆಫ್ ನ್ಯೂಜಪೇಪರ್ಸ್ ಕಚೇರಿಯವರು ನಿಮ್ಮ ಈ ಪತ್ರಿಕೆಗೆ ಹೆಸರೊಂದನ್ನು ಅನುಮೋದಿಸಿದ್ದಾರೆ. 'ಸಂವಾದ'ದ ಮೂವತ್ತೆಂಟನೆಯ ಸಂಚಿಕೆ ಹೊಸ ಹೆಸರಿನಲ್ಲಿ 'ಸಾಹಿತ್ಯ ಸಂವಾದ' ಹೆಸರಿನಲ್ಲಿ ಬರುತ್ತಿದೆ. ಸಂವಾದ ಎಂದೆನ್ನುವ ಹೆಸರಿಗೆ ನಾವು ಸಂವಾದದ ಗೆಳೆಯರೆಲ್ಲ ಮೋಹಗೊಂಡಿದ್ದೆವು. ಈ ಶಬ್ದದ ಬಿಟ್ಟು ಬೇರೆ ಹೆಸರಿನಲ್ಲಿ ಪತ್ರಿಕೆಯನ್ನು ತರುವದು ನಮಗೆ ನಮ್ಮ ವ್ಯಕ್ತಿತ್ವದ ಮುಖ್ಯವಾದದ್ದನ್ನು ಕಳೆದುಕೊಳ್ಳುವುದೆನ್ನುವಂತೆ—ನಮ್ಮ ಖುಶಿಯ ಪರಿಧಿಯ ಆಚೆಗಿನದ್ದರಂತೆ ತೋರುತ್ತಿತ್ತು. ಆದ್ದರಿಂದ ನಮ್ಮ ಮನವಿಗಳು ಮತ್ತೆ ಮತ್ತೆ ತಿರಸ್ಕೃತವಾಗುತ್ತ ಬಂದಂತೆ ನಾವು **'ಸಂವಾದ'**ಹೆಸರನ್ನು ದೆಹಲಿಯ ಕಚೇರಿಯವರು ಅನುಮೋದಿಸುವದೇ ಬೇಡ—ನಮ್ಮಷ್ಟಕ್ಕೆ ನಾವು 'ಸಂವಾದ' ನಡೆಸುತ್ತಿರುತ್ತೇವೆ ಎನ್ನುವ ನಿಲುವಿಗೆ ಬರುತ್ತಿದ್ದೆವು. ಆದ್ದರಿಂದಲೇ ಅತಿ ದುಬಾರಿ ಅಂಚೆವೆಚ್ಚವನ್ನು ಭರಿಸುತ್ತ ಚಂದಾದಾರರಿಗೆ 'ಸಂವಾದ' ವನ್ನೇ ನೀಡುತ್ತಿದ್ದೆವು. ಇದೀಗ 'ಸಾಹಿತ್ಯ ಸಂವಾದ' ಹೆಸರಿನ ದೀಕ್ಷೆ ದೊರೆತಿದೆ. ಇದರೊಂದಿಗೆ ಈ ಪತ್ರಿಕೆಯು ನೆಲಯೂರಲು—ಬೇರುಬಿಟ್ಟು ಚಿಗಿಯಲು ಹೊಸ ಚೈತ್ರವೊಂದು ಬಂದಂತಾಗಿದೆ. ಈ ಚೈತ್ರಕ್ಕಾಗಿ ನಾವು ಸಂತೋಷಪಡುತ್ತೇವೆ.

ಇನ್ನೊಂದು ವಿಷಯವೆಂದರೆ—ಕನ್ನಡಕ್ಕೆ ಇದು ಸುಗ್ಗಿಯ ಕಾಲ ಎಂಬಂತಾಗಿದೆ. ಪ್ರಶಸ್ತಿ—ಬಹುಮಾನಗಳ ಹೊಳೆಯೊಂದು ಹರಿದುಬಂದು ಕನ್ನಡದ ಉತ್ಕರ್ಷವು ಬಹಿರಂಗವಾಗಿ ತೋರಿ ನಮಗೆ ಹೆಮ್ಮೆ ಸಂತೋಷಗಳನ್ನು ಉಂಟುಮಾಡುತ್ತಿದೆ. ಅನಂತಮೂರ್ತಿಯವರಿಗೆ ಸಾಹಿತ್ಯ ಕುರಿತಂತೆ ಅತ್ಯುನ್ನತವಾದ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ತಮ್ಮ ಸೃಜನಶೀಲ ವಿಮರ್ಶೆ, ಪ್ರಖರ ವೈಚಾರಿಕತೆಯ ಮೂಲಕ ಕನ್ನಡದಲ್ಲಿ ಮೂಡಿಸಿದ ಸಾಂಸ್ಕೃತಿಕ ವಾಗ್ವಾದ, ಉತ್ಕೃಷ್ಟ ಸೃಜನಶೀಲತೆಯ ಸಣ್ಣ ಕಥೆಗಳು ಮತ್ತು ಸಂಸ್ಕಾರದಂತಹ ಕಾದಂಬರಿಯ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿದ ಅನಂತಮೂರ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಒಂದಿನಿತು ಅಗಾವಾಗಿಯೇ ದೊರತಿದೆ. ಈ ಬಗ್ಗೆ ನಮಗೆ ತುಂಬ ಸಂತೋಷವಾಗಿದೆ. ಇದರೊಂದಿಗೇ, ಈ ಭರದಲ್ಲಿ ಪುತಿನ ಮತ್ತು ಕೆ. ಎಸ್. ನ. ರಂತಹ ಹಿರಿಯರು ಅವರಿಗೆ ದಕ್ಕಬೇಕಾದ ಮನ್ನಣೆಯಿಂದ ವಂಚಿತರಾಗದಿರಲಿ ಎನ್ನುವ ಭಾವವೂ ನಮ್ಮಲ್ಲಿದೆ. ಜ್ಞಾನಪೀಠದ

ಈ ಪ್ರಶಸ್ತಿಯೊಂದಿಗೆ, ಅತ್ಯುತ್ಕೃಷ್ಟ ಸಮಾಜಸೇವೆಗಾಗಿ ಡಾ॥ ಸುದರ್ಶನ ಅವರಿಗೆ ರೈಟ್ ಲೈವ್ಲಿ ಹುಡ್ (ಪರ್ಯಾಯ ನೊಬೆಲ್) ಪ್ರಶಸ್ತಿ ದೊರೆತಿದೆ. ಗಿರೀಶ್ ಕಾರ್ನಾಡರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಅವರ 'ನಾಗಮಂಡಲ' ನಾಟಕಕ್ಕೆ ದೊರೆತಿದೆ, ನಮ್ಮ ಪ್ರಮುಖ ನಾಟಕ ಕಾರರಾದ ಕಾರ್ನಾಡರಿಗೆ ದೊರೆತ ಈ ಪ್ರಶಸ್ತಿ ನಮಗೆಲ್ಲ ಸಂತೋಷ ತಂದಿದೆ. ಇದಲ್ಲದೆ ರಾಜೀವ ತಾರಾನಾಥ ಅವರಿಗೆ ಸರೋದ್ ವಾದನಕ್ಕಾಗಿ ಅಂತರರಾಷ್ಟ್ರೀಯ ಮನ್ನಣೆ ದೊರೆತಿದೆ. ಕಾರಂತರಿಗೆ ಅವರ ರಂಗಚಟುವಟಿಕೆಗಳಿಗಾಗಿ ಕಾಳಿದಾಸ ಸಮ್ಮಾನ್ ದೊರೆತಿದೆ. ಇದಲ್ಲದೆ ನಮ್ಮ ನಾಡಿನ ನೆಲೆಯಲ್ಲಿ ಪುತಿನರವರಿಗೆ ಪಂಪ ಪ್ರಶಸ್ತಿ ದೊರೆಯುತ್ತಿರುವುದು ಖುಶಿಯನ್ನು ತರುತ್ತಿದೆ.

o

ಇಂಥ ಖುಶಿಯ ಸಂಭ್ರಮದಲ್ಲಿಯೂ ಗೊಂದಲಪುರದ ದರಬಾರು ತನ್ನ ಇರುವನ್ನು ಸಾಬೀತುಪಡಿಸುವಂತಹ ಘಟನೆಯೊಂದು ನಡೆದಿದೆ. ಇದು ಮಧ್ಯಮ ಮೇಲು ವರ್ಗ–ಜಾತಿಗಳು ಕ್ರಮೇಣ ರೂಢಿಸಿಕೊಳ್ಳುತ್ತಿರುವ ಅಸಹನೀಯ ಫ್ಯಾಸಿಸ್ಟ್ ನಿಲುವಿನಿಂದ ಉಂಟಾದ ಘಟನೆ. ಈ ಘಟನೆ ಎಂದರೆ 'ಮಹಾಚೈತ್ರ' ನಾಟಕವನ್ನು ಕುವೆಂಪು ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯಗಳು ತಮ್ಮ ಪಠ್ಯಕ್ರಮದಿಂದ ಹಿಂತೆಗೆದುಕೊಳ್ಳುತ್ತಿರುವದು. ಈ ಇಡೀ ಘಟನೆಯಿಂದ ಎರಡು ಮುಖ್ಯವಾದ ಅನಾರೋಗ್ಯಗಳು ನಮ್ಮ ಸಂದರ್ಭದಲ್ಲಿ ಕ್ರಿಯಾಶೀಲವಾಗಿರುವುದು ಸ್ಪಷ್ಟವಾಗುತ್ತದೆ. ಒಂದು ಮಧ್ಯಮ–ಮೇಲ್ಮಧ್ಯಮ ವರ್ಗಗಳು ಮತ್ತು ಮೇಲ್ಜಾತಿಗಳು ಅಸಹನೀಯ ಪೆಡಸುತನವನ್ನು ತಾಳುತ್ತಿವೆ. ಪೂಜಾರಿಕೃಷ್ಣದಂತಹ ಟಿವಿ ಸೀರಿಯಲ್ಲಿಗೆ ಬ್ರಾಹ್ಮಣರು ಅಸನೆಯ ಪ್ರತಿಭಟನೆಯನ್ನು ತೋರಿದರೆ ಲಿಂಗಾಯತ ಪಟ್ಟಭದ್ರರು ಮಾಸ್ತಿಯವರ ಚಿಕ್ಕವೀರರಾಜೇಂದ್ರ ಕಾದಂಬರಿಗೆ ಮತ್ತು ಆ ಕಾದಂಬರಿ ಆಧಾರಿತ ಎಂ.ಎಸ್. ಸತ್ಯು ನಿರ್ದೇಶಿಸುತ್ತಿದ್ದ (ಟಿವಿಗಾಗಿ) 'ಅಂತಿಮ ರಾಜ' ಚಿತ್ರಕ್ಕೆ, 'ನಾನೇ ಬಿಜ್ಜಳ' ಎನ್ನುವ ಜೇಬಿಯವರ ನಾಟಕಕ್ಕೆ ಮತ್ತು ಇದೀಗ ಎಚ್. ಎಸ್. ಶಿವಪ್ರಕಾಶರ ನಾಟಕ 'ಮಹಾಚೈತ್ರ'ಕ್ಕೆ ಅನಾರೋಗ್ಯದ ಪ್ರತಿಭಟನೆಯನ್ನು ತೋರಿದ್ದಾರೆ. ಇವುಗಳ ಮಧ್ಯ ಡೆಕ್ಕನ್ ಹೆರಾಲ್ಡಿನ 'ಮಹಮದ್‌ದ ಈಡಿಯಟ್' ಕಥೆಗೆ ವ್ಯಕ್ತವಾದ ಉಗ್ರ ಪ್ರತಿಭಟನೆ ಮತ್ತು ಸಲ್ಮಾನ್ ರಷ್ದಿಯ 'ಸಟಾನಿಕ್ ವರ್ಸಸ್' ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ಪ್ರತಿಭಟನೆಯನ್ನು ಮಹಮದೀಯ ಬಂಧುಗಳು ವ್ಯಕ್ತಪಡಿಸಿದ್ದು ನೆನಪಾಗುತ್ತದೆ.

ಈ ಎಲ್ಲ ಘಟನೆಗಳಿಂದ ಗೋಚರವಾಗುವ ಅಂಶವೆಂದರೆ, ನಮ್ಮ ಸಮಾಜ ಮೂಲಭೂತವಾದದತ್ತಲಿನ ಹಿನ್ನಡೆಗೆ ತೊಡಗಿಕೊಂಡಿದೆ. ನಮ್ಮ ನವವಿದ್ಯಾವಂತರು

ಹೆಚ್ಚು ಹೆಚ್ಚು ಜಾತಿನಿಷ್ಠತೆಯನ್ನು ತೋರುತ್ತಿದ್ದಾರೆ. ಜಾತಿನಿಷ್ಠ ಸಂಘಟನೆಯಿಂದಲೇ ಯುವ ಜನಾಂಗವು ತನ್ನ ನೆಲೆಯನ್ನು ಕಂಡುಕೊಳ್ಳಬಹುದೆನ್ನುವ ನಂಬಿಕೆಯನ್ನು ತಲುಪುತ್ತಿದೆ. ಅಂತಲೇ ಇಂದು ಮಠಗಳಿಲ್ಲದ ಜಾತಿಗಳವರು ತಮ್ಮ ತಮ್ಮ ಮಠಗಳನ್ನು ಸ್ಥಾಪಿಸಿಕೊಳ್ಳಲು ಉದ್ಯುಕ್ತರಾಗುತ್ತಿದ್ದಾರೆ. ನಮ್ಮ ಯುವ ಜನಾಂಗವು ತಾಳುತ್ತಿರುವ ಈ ನಂಬಿಕೆ ನಮ್ಮ ರಾಜಕೀಯ ಆಡಳಿತೆಯ ಟೊಳ್ಳುತನವನ್ನು ಕುಸಿತವನ್ನು ಸ್ಪಷ್ಟಪಡಿಸುತ್ತದೆ. ನಾವು ಈ ಬಗ್ಗೆ ತುರ್ತಾಗಿ ಚಿಂತಿಸಬೇಕಾಗಿದೆ. ಪರಿಹಾರವನ್ನು ಹುಡುಕಬೇಕಾಗಿದೆ. ಇದಾಗದಿದ್ದರೆ ಭವಿಷ್ಯತ್ತಿನಲ್ಲಿ ನಾವು ತಲುಪುವ ನಿಲ್ದಾಣವು ಬರ್ಬರತೆಯಾಗಿರುತ್ತದೆ.

ಇದರೊಂದಿಗೇ, ನಮ್ಮ ಸರ್ಕಾರ ತೋರುತ್ತಿರುವ 'ಅಕಶೇರುಕತನ' ಆತ್ಮಘಾತುಕವಾಗಿದೆ. ಇಂದಿನ ಮಠಗಳೆಲ್ಲ ರಾಜಕೀಯ ಪ್ರಭಾರಿಗಿರಿಗೆ ತೊಡಗಿಕೊಳ್ಳಲು ಸಾಧ್ಯವಾಗುವಂತೆ ನಮ್ಮ ಸರ್ಕಾರಗಳು ಮಠಾಧೀಶರುಗಳ ಪಾದಗಳಲ್ಲಿ ಕವಚಿಕೊಳ್ಳುತ್ತಿವೆ. ಸ್ವಜಾತಿಪ್ರೇಮ ಮತ್ತು ಕ್ಯಾಪಿಟೇಶನ್ನಿನ ವಿದ್ಯೆಯ ಮಾರುಕಟ್ಟೆಯಲ್ಲಿ ಲಾಭಗಳಿಸುವ ಹುನ್ನಾರುಗಳಿಗೆ ರಾಜಕೀಯ ಇಚ್ಛಾಶಕ್ತಿ ತನ್ನನ್ನು ತಾನು ಮಾರಿಕೊಂಡು ಬಿಟ್ಟಿದೆ. ಧರ್ಮದ ಅತ್ಯುಗ್ರ ಅಪಮೌಲ್ಯೀಕರಣ ನಡೆಯುತ್ತಿರುವ ಸಂದರ್ಭ ಇದು. ಇದಕ್ಕೆ ಅಧ್ವರ್ಯುಗಳಾದವರು, ಧರ್ಮದ ಆಧ್ಯಾತ್ಮದ ಪೋಷಕರಾಗಿರಬೇಕಾದ, ಮಠಾಧೀಶರಗಳೇ ಎನ್ನುವದು ಈ ಕಾಲದ ಅತ್ಯುನ್ನತ ವ್ಯಂಗ್ಯವಾಗಿದೆ.

ಪ್ರಸ್ತುತ, ಶಿವಪ್ರಕಾಶರ ನಾಟಕ 'ಮಹಾಚೈತ್ರ'ವು ಬಸವಾದಿ ಪ್ರಮಥರಿಗೆ ಯಾವ ರೀತಿಯ ಅವಹೇಳನವನ್ನೂ ಉಂಟುಮಾಡಿಲ್ಲ. ಬದಲಾಗಿ ಧರ್ಮದ ಸಾಂಸ್ಥೀಕರಣದ ಬಗೆಗೆ ಬಸವಣ್ಣ ಮತ್ತು ಅವನು ಪ್ರಚೋದಿಸಿದ ಶರಣ ಸಮುದಾಯವು ಹೊಂದಿದ ವಿರೋಧವನ್ನು ಸ್ಪಷ್ಟಪಡಿಸುತ್ತದೆ. ಅಂದರೆ ಬಸವಣ್ಣನು ಬೋಧಿಸಿದ ನಿಜವಾದ ತತ್ವಗಳೆಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಇಂಥ ಆರೋಗ್ಯಕಾರೀ ನಿಲುವು ಧರ್ಮದ ಸಾಂಸ್ಥೀಕರಣದ ಅಭಿವ್ಯಕ್ತಿಗಳಾದ ಮಠಗಳಿಗೆ ಅಪಥ್ಯವೆನ್ನಿಸುವುದು ಸಹಜ. ಆದ್ದರಿಂದಲೇ, ಮಲ ತಿನ್ನಿಸಿದ ಅಮಾನವೀಯ ಸಂದರ್ಭಕ್ಕೆ ನಾಚಿಕೊಂಡು ಉಪವಾಸ ಸತ್ಯಾಗ್ರಹದ ಪ್ರಾಯಶ್ಚಿತ್ತ ತೋರಲಾರದ ಮಠಾಧೀಶರುಗಳು, ಈಗ ತಮ್ಮ ಅಸ್ತಿತ್ವಕ್ಕೇ ಸಂಚಕಾರ ಬರುತ್ತವೆ ಎನ್ನುವ ಗಾಬರಿಯಲ್ಲಿ ಉಪವಾಸ ಮುಷ್ಕರಕ್ಕೆ ಧುಮುಕಿದರು ! ಮಾರ್ಗ ಮತ್ತು ಫಲಿತಾಂಶಗಳ ನಡುವೆ ಅವಿನಾ ಸಂಬಂಧ ಕಾಣುತ್ತಿದ್ದ ಗಾಂಧೀಜಿಯವರ ಆತ್ಮವು, ತಮ್ಮ ಅಹಿಂಸಾತ್ಮಕ ಹೋರಾಟದ ಮಾರ್ಗವಾದ ಉಪವಾಸವು ಈ ರೀತಿಯಾಗಿ ಅಪಮೌಲ್ಯೀಕರಣಕ್ಕೆ ಒಳಗಾದುದನ್ನು ಕಂಡು ವಿಲಿವಿಲಿ ಒದ್ದಾಡಿರಬಹುದು !....ಆದರೆ ಇದು

ಪರಸ್ಪರರನ್ನು ವ್ಯಂಗ್ಯದಿಂದ ನೋಡುವ, ಲೇವಡಿ ಮಾಡುವ ನಿಲುವಿನಲ್ಲಿ ಕೊನೆಗೊಳ್ಳಬೇಕಾದುದಲ್ಲ. ಮಠಗಳ ಸಾಮಾಜಿಕ ಉಪಯುಕ್ತತೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗದೆನ್ನುವುದೂ ನಿಜವೇ. ಈಗ ಮೂಡಿರುವ ಪ್ರಶ್ನೆ ಮಠಗಳು ವಹಿಸಬೇಕಾದ ನೈತಿಕ ಮತ್ತು ಸಾಂಸ್ಕೃತಿಕ ನೇತೃತ್ವವನ್ನು ವಹಿಸುವುದನ್ನು ಬಿಟ್ಟುಕೊಟ್ಟಿರುವ ಬಗೆಗಿನದು. ಅವು ರಾಜಕೀಯ ಆಡಳಿತೆಗೆ ಪರ್ಯಾಯ ನೆಲೆಯಾಗಲು ಹೊರಟಿವೆ. ಇದು ಖಂಡಿತವಾಗಿ ಮಠಗಳ ಅಪಮೌಲ್ಯೀಕರಣವಾಗಿರುತ್ತದೆ. (ಕವಿ, ನಾಟಕಕಾರ ಎಚ್. ಎಸ್. ಶಿವಪ್ರಕಾಶರು 'ಮಹಾಚೈತ್ರ' ಕುರಿತಂತೆ ನೀಡಿರುವ ವಿವರಣೆಯ ಲೇಖನವನ್ನು ಸಾಹಿತ್ಯ ಸಂವಾದದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.)

○

ಇಂಥ ಗೊಂದಲಗಳ ನಡುವೆ ಸಂವಾದವು 'ಸಾಹಿತ್ಯ'ವನ್ನು ತಲೆಗೆ ಕಟ್ಟಿಕೊಂಡು ಬರುತ್ತಿದೆ. ಹಾಗೆಂತೆಂದು ಇದು ಬರೀ ಸಾಹಿತ್ಯಕ್ಕಷ್ಟೇ ಸೀಮಿತವಾಗಲಾರದು. ನಮ್ಮ ಸಾಂಸ್ಕೃತಿಕ ಬದುಕಿನ ಒಟ್ಟು ಆರೋಗ್ಯ. ರುಚಿಪ್ರಜ್ಞೆಗಳೇ ನಮ್ಮ ಕೇಂದ್ರ ಕಾಳಜಿಗಳು. ಇಂಥ ಕೇಂದ್ರ ಕಾಳಜಿಗಳ ಬೆಳಕಿನಲ್ಲಿಯೇ 'ಸಾಹಿತ್ಯ ಸಂವಾದ' ಮುಂದುವರಿಯುತ್ತದೆ. ಹೀಗೆ ಮುಂದುವರಿಯಲು ಚಿಂತಕರ, ಲೇಖಕ ಮಿತ್ರರ ಸಹಕಾರವನ್ನು ಮತ್ತು ಚಂದಾದಾರರ ನೆರವನ್ನು ಕೋರುತ್ತೇವೆ.

—ಸಂಪಾದಕ

ಹೊಸ ಪುಸ್ತಕಗಳು

೧. **ಬೆಳದಿಂಗಳು ಬಿಸಿಲಾಯಿತು (ಕವಿತೆಗಳು) ೧೯೯೪**
ಲೇ : ಡಾ|| ಬಸವರಾಜ ಸಬರದ
ಪ್ರ : ವಿದ್ಯಾನಿಧಿ ಪ್ರಕಾಶನ, ಗದಗ
ಪುಟ : ೭೦ ಬೆಲೆ : ರೂ. ೧೨-೦೦

೨. **ವಿಚಾರ ಸಂಪದ (ಚಿಂತನಗಳು)–೧೯೯೫**

ಲೇ : ಡಾ॥ ಬಸವರಾಜ ಸಬರದ
ಪ್ರ : ವಿದ್ಯಾನಿಧಿ ಪ್ರಕಾಶನ, ಗದಗ
ಪುಟ : ೧೩೨ ಬೆಲೆ : ರೂ. ೨೦-೦೦

೩. **ಸಾಹಿತ್ಯ ಸಂಗತಿ (ವಿಮರ್ಶೆ)–೧೯೯೪**

ಲೇ : ಡಾ॥ ಬಸವರಾಜ ಸಬರದ
ಪ್ರ : ಪಲ್ಲವಿ ಪ್ರಕಾಶನ, 'ಬಸವಶ್ರೀ', ಸರಸ್ವತಿಪುರ,
ವಿಶ್ವವಿದ್ಯಾಲಯ ಅಂಚೆ, ಗುಲ್ಬರ್ಗಾ
ಪುಟ : ೨೧೮ ಬೆಲೆ : ರೂ. ೫೦-೦೦

೪. **ಸಮುದ್ರ ಮತ್ತು ಇತರ ಕವಿತೆಗಳು–೧೯೯೫**

ಲೇ : ತೆಲುಗು ಮೂಲ ವರವರರಾವ್, ಕನ್ನಡಕ್ಕೆ : ಬಂಜಗೆರೆ ಜಯಪ್ರಕಾಶ್
ಪ್ರ : ಮುನ್ನಡೆ ಪ್ರಕಾಶನ, ಶಿವಮೊಗ್ಗ
ಪುಟ : ೬೯ ಬೆಲೆ : ರೂ. ೨೫-೦೦

೫. **ಕಾಲ ಕೆಟ್ಟಿಲ್ಲ (ಕವನಗಳು)–೧೯೯೪**

ಲೇ : ಲಕ್ಷ್ಮಣ ಬ ನಾಗನೂರ
ಪ್ರ : ಕವಿಚಕ್ರವರ್ತಿ ರನ್ನ ಪ್ರಕಾಶನ, ಮಹಲಿಂಗಪುರ–೫೮೭೩೧೨
ಪುಟ : ೮೬ ಬೆಲೆ : ರೂ. ೧೬-೦೦

೬. **ನಮ್ಮ ಕೂಗು (ಕವಿತೆಗಳು)–೧೯೯೪**

ಲೇ : ಶಂಕರ ಮುತ್ತಣ್ಣವರ
ಪ್ರ : ರಾಮಕೃಷ್ಣ ಪ್ರಕಾಶನ, ಯಡಹಳ್ಳಿ (ಗಲಗಲಿ)
ಪುಟ : ೬೨ ಬೆಲೆ : ರೂ. ೧೫-೦೦

೭. **ಕೃತಿ ಸಂಪಾದನೆ ಕುರಿತು ಸಂಪಾದಕರು**

ಲೇ : ವಿವಿಧ, ಅನು : ಬಿ. ಎನ್. ಗುರುಮೂರ್ತಿ
ಪುಟ : ೧೧೦ ಬೆಲೆ : ರೂ. ೨೫-೦೦

೮. **ಗಂಗಾತಾಯಿ (ಕಾದಂಬರಿ)**

ಲೇ : ಭೈರವ ಪ್ರಸಾದಗುಪ್ತ, ಅನು : ಎಚ್. ಎಸ್. ಪಾರ್ವತಿ
ಪುಟ : ೧೦೫ ಬೆಲೆ : ರೂ. ೨೪-೦೦

೯. ಗಾಂಧೀಜಿ ವಿರಚಿತ ವ್ಯಕ್ತಿ ಚಿತ್ರಗಳು ಮತ್ತು ಶ್ರದ್ಧಾಂಜಲಿಗಳು

ಸಂ : ಯು. ಎಸ್. ಮೋಹನರಾವ್, ಅನು : ಎಸ್. ಸೀತಾರಾಮ್
ಪುಟ : ೧೬೮ ಬೆಲೆ : ರೂ. ೩೩-೦೦
(ಈ ಮೇಲಿನ ಮೂರು ಪುಸ್ತಕಗಳ ಪ್ರಕಾಶಕರು : ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯ, ಹೊಸದಿಲ್ಲಿ-೧೬)

೧೦. ಕಡಲ ಹಾದಿ (ಕಥೆಗಳು)–೧೯೯೫

ಲೇ : ಉಮಾರಾವ್
ಪ್ರ : ಗ್ರಂಥಾವಳಿ ೧೬೬-ಎ, ೨೨ನೇ ಮುಖ್ಯರಸ್ತೆ, ಶ್ರೀನಗರ ಬೆಂಗಳೂರು–೫೦
ಪುಟ : ೯೮ ಬೆಲೆ : ರೂ. ೩೦-೦೦

೧೧. ಸಂಸ್ಕೃತಿ ಮತ್ತು ಶಂಭಾ (ಶಂಭಾ ಕುರಿತ ಲೇಖನಗಳು)–೧೯೯೩

ಲೇ : ಮಲ್ಲೇಪುರಂ ಜಿ. ವೆಂಕಟೇಶ್
ಪ್ರ : ಸಂಸ್ಕೃತಿ ವಿಕಾಸ ಮಾಲೆ, ಹೊಸಪೇಟೆ
ಪುಟ : ೧೦೪ ಬೆಲೆ : ರೂ. ೧೮-೦೦

೧೨. ಸನ್ನಿಧಿ (ಚಿಂತನ ಲೇಖನಗಳು)–೧೯೯೪

ಲೇ : ಡಾ॥ ಸಂಗಮೇಶ ಸವದತ್ತಿಮಠ
ಪ್ರ : ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೂಡ, ಬೀದರ ಜಿಲ್ಲೆ
ಪುಟ : ೧೧೪ ಬೆಲೆ : ರೂ. ೩೫-೦೦

೧೩. ನೇಣು (ಕಥಾ ಸಂಕಲನ)–೧೯೯೪

ಲೇ : ಯಳನಾಡು ಅಂಜನಪ್ಪ
ಪ್ರ : ಜನಪದ ಸಾಹಿತ್ಯ ಪರಿಷತ್ತು, ಬೆಂಗಳೂರು
ಪುಟ : ೧೩೯ ಬೆಲೆ : ರೂ. ೨೫-೦೦

೧೪. ಕ್ಷುದ್ರ ನಕ್ಷತ್ರದ ಕಪ್ಪು ರಂಧ್ರ (ಕಥೆಗಳು)

ಲೇ : ಕಂನಾಡಿಗಾ ನಾರಾಯಣ
ಪ್ರ : ತುಂಗೋತ್ರಿ, ಗಾಡಿಕೊಪ್ಪ ಶಿವಮೊಗ್ಗ
ಪುಟ : ೧೦೪ ಬೆಲೆ : ರೂ. ೩೬-೦೦

೧೫. ಕನ್ನಡ ನುಡಿಮಲ್ಲಿಗೆ (ಕವನ ಸಂಕಲನ)

ಸಂ : ಹೊ. ರಾ. ಸತ್ಯನಾರಾಯಣರಾವ್
ಪ್ರ : ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಪುಟ : ೧೭೬ ಬೆಲೆ : ರೂ. ೪೦-೦೦

ಈ ಸಂಚಿಕೆಯ ಲೇಖಕರ ವಿಳಾಸ

● ಕೇ.ಬಿ. ಸಿದ್ದಯ್ಯ, ೧೧೧೫, ಪ್ರೈಮರಿ ಶಾಲೆ ಹಿಂಭಾಗ, ಉಪ್ಪಾರಹಳ್ಳಿ, ತುಮಕೂರು–೫೭೨ ೧೦೨ ● ಸವಿತಾ ನಾಗಭೂಷಣ, ಅಂಚೆ ಅಧೀಕ್ಷಕರ ಕಚೇರಿ, ಮಡಿಕೇರಿ ● ಚಂದ್ರಶೇಖರ ತಾಳ್ಯ, 'ಪಲ್ಲವಿ', ಕಾಲೇಜು ಪಕ್ಕದ ನಿವೇಶನಗಳು ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ ● ಭಾಗೀರಥಿ ಹೆಗಡೆ, ಸ್ಟೇಟ್ ಬ್ಯಾಂಕ್ ಕಾಲನಿ, ನವಾಜಗುಡ್ಡ ಶಿರಸಿ–೫೮೧ ೪೦೧ ● ದಿ. ಗಿಜುಭಾಯಿ ಬಧೇಕಾ, ಗುಜರಾತಿ ಚಿಂತಕ-ಲೇಖಕ ● ನೆಲ್ಸನ್ ಮಂಡೆಲಾ ● ಸಿ. ಆರ್. ಅಣಜಿ, ಇಂಗ್ಲಿಷ್ ಅಧ್ಯಾಪಕರು, ಪದವಿಪೂರ್ವ ಕಾಲೇಜು, ಮಲ್ಲಾಡಿಹಳ್ಳಿ–೫೭೭ ೫೩೧ ● ರಾಘವೇಂದ್ರ ಪಾಟೀಲ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ–೫೭೭ ೫೩೧ ● ಡಾ॥ ಆರ್ಕೆ ಮಣಿಪಾಲ, ೧೧೮, ಎಂ. ಐ. ಜಿ. ಮನೆಗಳು, ಹುಡ್ಕೋ, ಮಣಿಪಾಲ–೫೭೬ ೧೧೯

ಸಂವಾದ ಪ್ರಕಾಶನ

ಮಲ್ಲಾಡಿಹಳ್ಳಿ-೫೭೭ ೫೩೧ (ಚಿತ್ರದುರ್ಗ ಜಿಲ್ಲೆ)

ನಮ್ಮ ಪ್ರಕಟಣೆಗಳು :

೧. **ನವನೋಘರೂಪಿ** (ಕನ್ನಡ ಕಾವ್ಯ ಉದ್ಯಾನದಲ್ಲಿ ಒಂದು ಸಂಚಾರ)
ಸಂ : ರಾಘವೇಂದ್ರ ಪಾಟೀಲ ಪುಟ : ೧೭೬ ಬೆಲೆ : ರೂ. ೪೮

೨. **ಮುಡಿ ಮಲ್ಲಿಗೆ** (ಕನ್ನಡ ಮಹಿಳಾ ಸಾಹಿತ್ಯ ಸ್ಪಂದನ)
ಸಂ : ಸವಿತಾ ನಾಗಭೂಷಣ ಪುಟ : ೪ + ೧೬೦ ಬೆಲೆ : ರೂ. ೩೬

೩. **ವಾಗ್ವಾದ** (ಸಾಹಿತ್ಯಿಕ-ಸಾಂಸ್ಕೃತಿಕ ಲೇಖನಗಳು)
ಲೇ : ರಾಘವೇಂದ್ರ ಪಾಟೀಲ ಪುಟ : ೪ + ೧೪೪ ಬೆಲೆ : ರೂ. ೩೩

೪. **ಮಾಸ್ತಿ ಸಾಹಿತ್ಯ : ಸಮಗ್ರ ದರ್ಶನ**
ಸಂ : ಡಿ. ಎಸ್. ನಾಗಭೂಷಣ, ರಾಘವೇಂದ್ರ ಪಾಟೀಲ, ಸ. ಉಷಾ
ಪುಟ ೮ + ೨೦೦ ಬೆಲೆ : ರೂ. ೬೦

೫. **ಚಂದ್ರನನ್ನು ಕರೆಯಿರಿ ಭೂಮಿಗೆ** (ಕವನ ಸಂಕಲನ)
ಲೇ : ಸವಿತಾ ನಾಗಭೂಷಣ ಪುಟ : ೮೪ ಬೆಲೆ : ರೂ. ೩೦

೬. **ಅಜ್ಞಾತ ಮುಂಬೈ** (ಪ್ರವಾಸ ಕಥೆ)
ಲೇ : ರಾಘವೇಂದ್ರ ಪಾಟೀಲ ಪುಟ : ೧೦ + ೯೪ ಬೆಲೆ : ರೂ. ೧೦

೭. **ಗಮನ** (ವಿಚಾರ-ವಿಮರ್ಶೆ)
ಲೇ : ಡಿ. ಎಸ್. ನಾಗಭೂಷಣ ಪುಟ : ೮ + ೧೫೨ ಬೆಲೆ : ರೂ. ೩೩

೮. **ಕಾಡಿನ ಹುಡುಗ ಕೃಷ್ಣ** (ಶ್ರೀ ಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
ಸಂ : ಡಿ. ಎಸ್. ನಾಗಭೂಷಣ, ರಾಘವೇಂದ್ರ ಪಾಟೀಲ, ಸ. ಉಷಾ
ಪುಟ : ೮ + ೧೩೦ ಬೆಲೆ ರೂ. ೫೦

೯. **ಹೆಜ್ಜೆ ಮೂಡಿದ ಹಾದಿ** (ಕಥಾ ಸಂಕಲನ)*
ಲೇ : ಬಾನು ಮುಷ್ತಾಕ್

೧೦. **ಈ ನೆಲದ ಹಾಡು** (ಕವನ ಸಂಕಲನ)
ಲೇ : ಸ. ಉಷಾ ಪುಟ : ೭ + ೫೦ ಬೆಲೆ : ರೂ. ೧೫

೧೧ **ಸಿಂಧೂ ನದಿಯ ದಂಡೆಯ ಮೇಲೆ** (ಕವನಗಳು)*
ಲೇ : ಚಂದ್ರಶೇಖರ ತಾಳ್ಯ

ಸಾಹಿತ್ಯ ಸಂವಾದ-೩೮ (ಮಾರ್ಚ್-ಏಪ್ರಿಲ್ ೧೯೯೪)

ಈ ಸಂಚಿಕೆಯಲ್ಲಿ